ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 20 ಗುರುವಾರ 2025


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 330 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯ ಕಾಂಗ್ರೆಸ್‌ನಲ್ಲಿ ಹನಿಟ್ರ್ಯಾಪ್ ಆತಂಕ!

ರಾಜಕೀಯವಾಗಿ ಮುಗಿಸಲು ಕಾಂಗ್ರೆಸ್‌ನಲ್ಲೇ ನಡೆಯುತ್ತಿರುವ ವಾಮಮಾರ್ಗದ ಬಗ್ಗೆ ವರಿಷ್ಠರಿಗೆ ಸಚಿವರು, ಪಕ್ಷದ ಮುಖಂಡರ ದೂರು



ಬೆಂಗಳೂರು, ಮಾ.19(ಕೆಎಂಶಿ)– ಹನಿಟ್ರ್ಯಾಪ್ ಮೂಲಕ ವಿರೋಧಿಗಳನ್ನು ಮತ್ತು ಪಕ್ಷದ ಮುಖಂಡರನ್ನು ರಾಜಕೀಯವಾಗಿ ಮುಗಿಸಲು ಹೊರಟರೆ ಕರ್ನಾಟಕದಲ್ಲಿ ಕಾಂಗ್ರೆಸ್ ನಿರ್ನಾಮವಾಗುತ್ತದೆ ಎಂದು ಪಕ್ಷದ ವರಿಷ್ಠರಿಗೆ, ಸಚಿವರು ಹಾಗೂ ಶಾಸಕರು ಎಚ್ಚರಿಕೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಇಬ್ಬರು ಪ್ರಭಾವೀ ಸಚಿವರು ಹಾಗೂ ಎಐಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿಗಳು, ಪ್ರತ್ಯೇಕವಾಗಿ ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ದೂರು ನೀಡಿದ್ದಾರೆ.

ಕರ್ನಾಟಕದಲ್ಲಿ ಹನಿಟ್ರ್ಯಾಪ್ ಮಾಡುವ ತಂಡಗಳೇ ಇವೆ, ಇಂತಹ ಕೆಲವು ತಂಡಗಳಿಗೆ ನಮ್ಮವರದೇ ಕುಮ್ಮಕ್ಕು ಇರುವ ಸಂಶಯವಿದೆ. ಇವರ ಮೂಲಕ ತಮ್ಮ ರಾಜಕೀಯ ವೈರಿಗಳನ್ನು ಮಣಿಸಲು ಬಳಕೆ ಮಾಡಿಕೊಳ್ಳಲಾಗುತ್ತಿದ್ದು, ಈಗ ಎಚ್ಚೆತ್ತುಕೊಳ್ಳದಿದ್ದರೆ ಕರ್ನಾಟಕದಲ್ಲಿ ಕಾಂಗ್ರೆಸ್ ನೆಲ ಕಚ್ಚಲಿದೆ.

ನೀವು ತಕ್ಷಣ ಮಧ್ಯೆ ಪ್ರವೇಶ ಮಾಡಿ, ಇಂತಹ ಕುತಂತ್ರಗಳಿಗೆ ಕೊನೆ ಹಾಡಬೇಕು. ಇಲ್ಲದಿದ್ದರೆ ನಾವು ಬಹಿರಂಗವಾಗಿ ಸಿಡಿದೇಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಒಂದು ಹೆಜ್ಜೆ ಮುಂದೆ ಹೋಗಿರುವ ಮಾಜಿ ಪ್ರಧಾನ ಕಾರ್ಯದರ್ಶಿಗಳು, ಕಳೆದ ನಾಲ್ಕೈದು ವರ್ಷಗಳಿಂದ ರಾಜಕೀಯವಾಗಿ ನಡೆದಿರುವ ಹನಿಟ್ರ್ಯಾಪ್ ಸಂಗತಿಗಳನ್ನು ವೇಣುಗೋಪಾಲ್ ಮುಂದಿಟ್ಟು, ಇದಕ್ಕೆ ಏನು ಪರಿಹಾರ ಎಂದು ಪ್ರಶ್ನಿಸಿದ್ದಾರೆ. ವರಿಷ್ಠರಿಗೆ ದೂರು ನೀಡಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ಎಲ್ಲವನ್ನೂ ತಂದಿದ್ದಾರೆ. ಸರ್ಕಾರದಲ್ಲಿ ಪ್ರಮುಖ ■ 6ನೇ ಪುಟಕ್ಕೆ

ವಿರೋಧಿಗಳನ್ನು ಹತ್ತಿಕ್ಕಲು ಹೀಗಾ ಮಾಡೋದು...!

ಬೆಂಗಳೂರು, ಮಾ.19– ರಾಜ್ಯದ ಪ್ರಭಾವಿ ಸಚಿವರೊಬ್ಬರನ್ನು ಹನಿಟ್ರ್ಯಾಪ್ ಮಾಡಲು ಪ್ರಯತ್ನ ನಡೆಸಲಾಗಿದೆ ಎಂಬ ವಿಚಾರ ವಿಧಾನಸಭೆಯಲ್ಲೂ ಸದ್ದು ಮಾಡಿದೆ. ಕಾನೂನು ಸುವ್ಯವಸ್ಥೆ ಕುರಿತಾಗಿ ನಡೆದ ಚರ್ಚೆಯ ಸಂದರ್ಭದಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದ ಬಿಜೆಪಿ ಸದಸ್ಯ ಸುನೀಲ್ ಕುಮಾರ್, 'ವಿರೋಧಿಗಳನ್ನು ಹತ್ತಿಕ್ಕಲು ಹೀಗಾ ಮಾಡೋದು' ಎಂದು ಆಕ್ರೋಶ ವ್ಯಕ್ತಪಡಿಸಿದರು. 224 ಶಾಸಕರು ಇದ್ದೇವೆ, ಸಾರ್ವಜನಿಕವಾಗಿ ಗೌರವದಿಂದ ಕೆಲಸ ಮಾಡುತ್ತಿದ್ದೇವೆ. ಈ ಸರ್ಕಾರದಲ್ಲಿ ನಿನ್ನೆ ಮೊನ್ನೆಯಿಂದ ಹನಿಟ್ರ್ಯಾಪ್ ಬಗ್ಗೆ ಸುದ್ದಿ ಆಗುತ್ತಿದೆ. ಸಾರ್ವಜನಿಕ ವ್ಯವಸ್ಥೆಯಲ್ಲಿ ಗೌರವದಿಂದ ಬದುಕುವುದು ಬೇಡ್ವಾ? ಯಾರ ಬಗ್ಗೆ ಯಾರ್ ಯಾರೋ ಹನಿಟ್ರ್ಯಾಪ್ ಮಾಡುತ್ತಿದ್ದಾರೆ ಎಂದರೆ ಏನು ಪರಿಸ್ಥಿತಿ ಇದು ಎಂದರು. ಸಾರ್ವಜನಿಕ ಬದುಕೇ ಬೇಡ ಎನ್ನುವಷ್ಟು ಸುದ್ದಿ ಹರಿದಾಡುತ್ತಿದೆ. ಹಾಗಾದರೆ ■ 6ನೇ ಪುಟಕ್ಕೆ



ಭೂಮಿಗೆ ಬಂದ ಸುನೀತಾ ವಿಲಿಯಮ್ಸ್



ಸುನೀತಾ ವಿಲಿಯಮ್ಸ್, ಬುಚ್ ವಿಲ್ಮೋರ್ ಹೊತ್ತ ಬಾಹ್ಯಾಕಾಶ ನೌಕೆ ಬುಧವಾರ ಮುಂಜಾನೆ ಫ್ಲೋರಿಡಾದ ಸಾಗರದಲ್ಲಿ ಸುರಕ್ಷಿತವಾಗಿ ಲ್ಯಾಂಡ್ ಆಯಿತು.



ಸುರಕ್ಷಿತವಾಗಿ ಭೂಮಿ ತಲುಪಿದ ಸುನೀತಾ ವಿಲಿಯಮ್ಸ್.

ವಾಷಿಂಗ್ಟನ್, ಮಾ.19– ಬರೋಬ್ಬರಿ 9 ತಿಂಗಳ ಕಾಲ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಅತಂತ್ರ ಸ್ಥಿತಿಯಲ್ಲಿದ್ದ ಭಾರತೀಯ ಮೂಲದ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್‌ನ್ನು ಅತ್ಯಂತ ಸುರಕ್ಷಿತವಾಗಿ ಭೂಮಿಗೆ ಕರೆತರಲಾಗಿದೆ. ಸುನೀತಾ ವಿಲಿಯಮ್ಸ್, ಬುಚ್ ವಿಲ್ಮೋರ್ ಸೇರಿ ನಾಲ್ವರು ಗಗನಯಾತ್ರಿಗಳನ್ನು ಹೊತ್ತಿದ್ದ ಸ್ಪೇಸ್ ಎಕ್ಸ್ ಕ್ರೂ ಡ್ರ್ಯಾಗನ್ ಬಾಹ್ಯಾಕಾಶ ನೌಕೆ ಭಾರತೀಯ ಕಾಲಮಾನ ಮಂಗಳವಾರ ರಾತ್ರಿ 8.35ಕ್ಕೆ 400 ಕಿ.ಮೀ ದೂರದ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಿಂದ ಭೂಮಿಯತ್ತ ಪಯಣ ಆರಂಭಿಸಿತ್ತು. ನಿರಂತರ 17 ಗಂಟೆಗಳ ಪಯಣದ ಬಳಿಕ ಭಾರತೀಯ ಕಾಲಮಾನ, ಸರಿಯಾಗಿ ಇಂದು ನಸುಕಿನ 3.27ರ ಸಮಯಕ್ಕೆ ಅಮೆರಿಕದ ಫ್ಲೋರಿಡಾ ಸಾಗರದಲ್ಲಿ ಲ್ಯಾಂಡ್ ಆಗಿದೆ.

ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ಕಳೆದ 9 ತಿಂಗಳಿಂದ ಬೋಯಿಂಗ್ ಸ್ಟಾರ್‌ಲೈನರ್ ಬಾಹ್ಯಾಕಾಶ ನೌಕೆಯಲ್ಲಿ ಸಿಲುಕಿಕೊಂಡಿದ್ದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಮತ್ತು ಇವರಿಬ್ಬರನ್ನು ಕರೆತರಲು ತೆರಳಿದ್ದ ನಾಸಾ ಗಗನಯಾತ್ರಿ ಹೇಗ್ ಮತ್ತು ರಷ್ಯಾದ ಗಗನಯಾತ್ರಿ ಅಲೆಕ್ಸಾಂಡರ್ ಗೋರ್ಬುನೋವ್ ಅವರು ಯಶಸ್ವಿಯಾಗಿ ಭೂಮಿಗೆ ಬಂದಿಳಿದಿದ್ದಾರೆ.

ಸ್ಪೇಸ್‌ಎಕ್ಸ್ ಡ್ರ್ಯಾಗನ್ ಸ್ಪೇಸ್‌ಕ್ರಾಫ್ಟ್ 'ದಿ ಕ್ರ್ಯೂ–9 ಭೂಮಿಯ ಗುರುತ್ವಾಕರ್ಷಣೆಗೆ ಒಳಪಡುತ್ತಿದ್ದಂತೆಯೇ ವೇಗ ಕಡಿಮೆ ಮಾಡಿಕೊಂಡಿತು. ನೌಕೆ ಸಮುದ್ರದತ್ತ ಧಾವಿಸುವಾಗ ಪ್ಯಾರಾಚೂಟ್‌ಗಳು ತೆರೆದುಕೊಂಡವು. ಮೊದಲಿಗೆ ಸ್ಪೇಸ್ ಎಕ್ಸ್ ಡ್ರ್ಯಾಗನ್ ನೌಕೆಯನ್ನು ಸ್ಥಿರಗೊಳಿಸಲು ಎರಡು ಡ್ರೋಗ್ ಪ್ಯಾರಾಚೂಟ್‌ಗಳನ್ನು ತೆರೆಯಲಾಯಿತು. ಆ ನಂತರ ಲ್ಯಾಂಡಿಂಗ್ ಆಗಲೆಂದು ನೌಕೆಯ ವೇಗ ಮತ್ತಷ್ಟು ಕಡಿಮೆಮಾಡಲು ಮೇನ್ ಆಗಿದ್ದ ನಾಲ್ಕು ಪ್ಯಾರಾಚೂಟ್‌ಗಳನ್ನು ತೆರೆಯಲಾಯಿತು. ಇದಾದ ಕೆಲವೇ ■ 6ನೇ ಪುಟಕ್ಕೆ

ಸುನೀತಾ ವಿಲಿಯಮ್ಸ್‌ಗೆ ಪ್ರಧಾನಿ ಮೋದಿ ಸ್ವಾಗತ
ಭೂಮಿ ನಿಮ್ಮನ್ನು ಮಿಸ್ ಮಾಡಿಕೊಂಡಿತ್ತು...

ನವದೆಹಲಿ, ಮಾ.19– ಸುನೀತಾ ವಿಲಿಯಮ್ಸ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಶುಭ ಕೋರಿದ್ದಾರೆ. ಭಾರತ ಭೇಟಿಗೆ ಸುನೀತಾಗೆ ಆಹ್ವಾನ ನೀಡಿದ್ದಾರೆ. ಗಗನಯಾನಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಬ್ಯಾರಿ ಬುಚ್ ವಿಲ್ಮೋರ್ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಭೂಮಿಗೆ ಬಂದಿಳಿದಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, 'ಸ್ವಾಗತ, ಕ್ರ್ಯೂ9! ಭೂಮಿ ನಿಮ್ಮನ್ನು ಮಿಸ್ ಮಾಡಿಕೊಂಡಿತ್ತು. ಸುನೀತಾ ವಿಲಿಯಮ್ಸ್ ಮತ್ತು Crew-9 ಗಗನಯಾತ್ರಿಗಳು ಮತ್ತೊಮ್ಮೆ ಪರಿಶ್ರಮ ಎಂದರೆ ಏನು ಎಂದು ನಮಗೆ ತೋರಿಸಿದ್ದಾರೆ. ಅಗಾಧವಾದ ಅಪರಿಚಿತತೆಯ ಮುಂದೆ ಅವರ ಅಚಲ ದೃಢಸಂಕಲ್ಪವು ಲಕ್ಷಾಂತರ ಜನರಿಗೆ ಶಾಶ್ವತವಾಗಿ ಸ್ಫೂರ್ತಿ ನೀಡುತ್ತದೆ' ಎಂದು ಮೋದಿ ಹೇಳಿದ್ದಾರೆ. ಮಾರ್ಗದರ್ಶಕ ಮತ್ತು ಐಕಾನ್ ಆಗಿರುವ ಸುನೀತಾ ವಿಲಿಯಮ್ಸ್ ತಮ್ಮ ವೃತ್ತಿ ಜೀವನದುದ್ದಕ್ಕೂ ಈ ಮನೋಭಾವವನ್ನು ಪ್ರದರ್ಶಿಸಿದ್ದಾರೆ. ■ 6ನೇ ಪುಟಕ್ಕೆ



ರಾಜ್ಯ ರಾಜಕೀಯದಲ್ಲಿ ಹೊಸ ಅಚ್ಚರಿ
ಕುಮಾರಸ್ವಾಮಿ - ಪರಮೇಶ್ವರ್ ರಹಸ್ಯ ಭೇಟಿ

- ನಾಯಕತ್ವ ಬದಲಾವಣೆ ಚರ್ಚೆ ನಡುವೆ ಈ ಭೇಟಿಗೆ ಅತೀ ಮಹತ್ವ
- ಅನಿವಾರ್ಯವಾದರೆ ಬೆನ್ನಿಗೆ ನಿಲ್ಲುವೆ: ಪರಮೇಶ್ವರ್‌ಗೆ ಕುಮಾರಸ್ವಾಮಿ ಅಭಯ!?

ಬೆಂಗಳೂರು, ಮಾ.19(ಕೆಎಂಶಿ)– ಗೃಹ ಸಚಿವ ಡಾ. ಜಿ.ಪರಮೇಶ್ವರ್, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಗೌಪ್ಯವಾಗಿ ಭೇಟಿ ಮಾಡಿ ಮಾತುಕತೆ ನಡೆಸಿರುವುದು ರಾಜಕೀಯ ವಲಯದಲ್ಲಿ ಭಾರಿ ಚರ್ಚೆಗೆ ಎಡೆ ಮಾಡಿದೆ.



ಕುಮಾರಸ್ವಾಮಿ



ಡಾ. ಜಿ.ಪರಮೇಶ್ವರ್

ಕುಮಾರಸ್ವಾಮಿ ಹಾಗೂ ಡಾ.ಪರಮೇಶ್ವರ್ ಆತ್ಮೀಯ ಸ್ನೇಹಿತರಾಗಿದ್ದರೂ ಪ್ರಸಕ್ತ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇವರಿಬ್ಬರ ಮುಖಾಮುಖಿ ಭೇಟಿ ಕೆಲವರಲ್ಲಿ ಆಶ್ಚರ್ಯ ಮೂಡಿಸಿದೆ. ಕುಮಾರಸ್ವಾಮಿ ಅವರು ತುಮಕೂರು ರಸ್ತೆಯ ಜಿಂದಾಲ್ ಪ್ರಕೃತಿ ಚಿಕಿತ್ಸಾ ಕೇಂದ್ರದಲ್ಲಿ ದಾಖಲಾಗಿದ್ದ ವೇಳೆ ಹಾಗೂ ನಂತರ ಪಂಚತಾರಾ ಹೋಟೆಲ್ ಒಂದರಲ್ಲಿ ಡಾ.ಪರಮೇಶ್ವರ್ ಭೇಟಿಯಾಗಿದ್ದಾರೆ. ಭೇಟಿ ಅಷ್ಟೇ ಅಲ್ಲದೆ, ಈ ಇಬ್ಬರು ನಾಯಕರು ದೂರವಾಣಿ ಮೂಲಕವೂ ಚರ್ಚೆ ನಡೆಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನಂತರ ನಾಯಕತ್ವಕ್ಕಾಗಿ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಪೈಪೋಟಿ ನಡೆದಿದೆ. ಈ ಸಂದರ್ಭದಲ್ಲಿ ಕೆಲವರ ವರ್ಚಸ್ಸನ್ನು ಹಾಳು ಮಾಡುವ ಪ್ರಯತ್ನವೂ ನಡೆದಿದೆ ಎಂಬ ಆರೋಪಗಳು ಕೇಳಿ ಬಂದಿವೆ. ಇದರ ನಡುವೆ ಡಾ. ಪರಮೇಶ್ವರ್, ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ರಾಜಕೀಯ ವಿಷಯಗಳನ್ನು ಹಂಚಿಕೊಂಡಿದ್ದಾರೆ.

ನೀವು ಮುಖ್ಯಮಂತ್ರಿ ಆಗುವ ಅವಕಾಶ ಎರಡು ಬಾರಿ ಕಳೆದುಕೊಂಡಿದ್ದೀರಿ. ಮತ್ತೊಮ್ಮೆ ಅಂತಹ ಅವಕಾಶ ಬಂದರೆ ನಿಮ್ಮ ಬೆನ್ನಿಗೆ ನಿಲ್ಲುವುದಾಗಿ ಡಾ. ಪರಮೇಶ್ವರ್ ಅವರಿಗೆ ■ 6ನೇ ಪುಟಕ್ಕೆ

ನನ್ನ ಕೊಲೆ ಮಾಡ್ತಾರೆ, ರಕ್ಷಣೆ ಕೊಡಿ...!

ಬೆಂಗಳೂರು, ಮಾ.19– ಕರ್ನಾಟಕ ವಿಧಾನಸಭೆ ಅಧಿವೇಶನದಲ್ಲಿ ಬಿಜೆಪಿ ಶಾಸಕ ಮುನಿರತ್ನ ಅವರು ತಮಗೆ ಜೀವ ಬೆದರಿಕೆ ಇದ್ದು, ರಕ್ಷಣೆ ನೀಡುವಂತೆ ಕೇಳಿಕೊಂಡಿದ್ದಾರೆ.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆ ವೇಳೆ ವಿಷಯ ಪ್ರಸ್ತಾಪಿಸಿ ಮಾತನಾಡಿದ ಬೆಂಗಳೂರಿನ ರಾಜರಾಜೇಶ್ವರಿ ನಗರದ ಬಿಜೆಪಿ ಶಾಸಕ ಮುನಿರತ್ನ, ನನಗೆ ಜೀವ ಬೆದರಿಕೆ ಇದೆ. ರಕ್ಷಣೆ ಕೊಡಿ. ನಾನು ವಿಧಾನಸೌಧದಿಂದ ಮನೆಗೆ ಹೋಗಲು ರಕ್ಷಣೆ ಕೊಡಿ ಎಂದು ಸ್ಪೀಕರ್‌ಗೆ ಮನವಿ ಮಾಡಿದರು. ನನಗೆ ರಕ್ಷಣೆ ಕೊಡಿ ಎಂದು ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದ್ದೇನೆ. ಗುಪ್ತಚರ ಇಲಾಖೆಯ ಹೇಮಂತ್ ನಿಂಬಾಳ್ಕರ್‌ಗೂ ಮನವಿ ಮಾಡಲಾಗಿದೆ. ಆದರೂ ರಕ್ಷಣೆಗೆ ಸಿಬ್ಬಂದಿ ಕೊಟ್ಟಿಲ್ಲ. ರಕ್ಷಣೆ ಕೊಡುವ ಭರವಸೆ ನೀಡಿದರೆ ನಾನು ಮನೆಗೆ ಹೋಗುತ್ತೇನೆ ಎಂದು ಆಗ್ರಹಿಸಿದರು.

ಈ ವೇಳೆ ಸಚಿವ ಕೃಷ್ಣ ಬೈರೇಗೌಡ, ಯಾವ ವಿಷಯದ ಮೇಲೆ ಮಾತನಾಡಬೇಕು ಎಂಬುದಕ್ಕೆ ಮೊದಲು ಬರಹದಲ್ಲಿ ಕೊಡಿ ಎಂದರು. ಆಗ, ಮುನಿರತ್ನ ನೆರವಿಗೆ ಧಾವಿಸಿದ ವಿಪಕ್ಷ ನಾಯಕ ಅಶೋಕ, ಸುನೀಲ್ ಕುಮಾರ್, ಗನ್‌ಮ್ಯಾನ್ ವಾಪಸ್ ಬಗ್ಗೆ ಮಾತನಾಡುತ್ತಿದ್ದಾರೆ. ಒಬ್ಬ ಶಾಸಕ ಜೀವ ರಕ್ಷಣೆಗಾಗಿ ಅಂಗಲಾಚುತ್ತಿದ್ದಾರೆ ಎಂದರು. ಪೊಲೀಸ್ ರಕ್ಷಣೆ ಬಗ್ಗೆ ಹೇಳಿದ್ದೀರಿ, ಬರಹದಲ್ಲಿ ಕೊಡಿ. ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ಸ್ಪೀಕರ್ ಭರವಸೆ ನೀಡುವ ಮೂಲಕ ಚರ್ಚೆಗೆ ತೆರೆ ಎಳೆದರು. ಇದೇ ವಿಚಾರವಾಗಿ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕ ಮುನಿರತ್ನ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಸಂಸದ ಡಿ.ಕೆ. ಸುರೇಶ್, ಹನುಮಂತರಾಯಪ್ಪ ಮತ್ತು ಅವರ ಮಗಳು ಕುಸುಮಾರಿಂದ ನನ್ನ ಕೊಲೆಗೆ ಸಂಚು ರೂಪಿಸಲಾಗಿದೆ. ನಾಲ್ವರು ಸೇರಿ 6 ತಿಂಗಳಿಂದ ಕೊಲೆ ಸಂಚು ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಕುಸುಮಾರನ್ನು ಶಾಸಕರನ್ನಾಗಿ ಮಾಡಲು ತಮ್ಮ ಕೊಲೆಗೆ ಸಂಚು ರೂಪಿಸಲಾಗಿದೆ. ಮೊಟ್ಟೆ ಹೊಡೆಯೋದು ನನ್ನ ಕಾರಿಗೆ ಕಲ್ಲು ಹೊಡೆಯೋದು. ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಹಿಂಸೆ ಕೊಡುತ್ತಾರೆ. ಡಿ.ಕೆ. ಶಿವಕುಮಾರ್ ಅವರು, ಅವನು ಸತ್ತೂ ಸರಿ ಗನ್‌ಮ್ಯಾನ್ ಕೊಡಬೇಡಿ ಎಂದಿದ್ದಾರೆ. ಹೇಗಿದ್ರೂ ಸಾಯಿಸ್ತಾರೆ. ಹೋರಾಡಿಯೇ ಸಾಯುತ್ತೇನೆ ಎಂದು ಮುನಿರತ್ನ ತಿಳಿಸಿದ್ದಾರೆ

ಭದ್ರತೆಗೆ ಶಾಸಕ ಮುನಿರತ್ನ ಮನವಿ



ಸೊರಗುತ್ತಿದೆ ಐತಿಹಾಸಿಕ ಬೋಗಾದಿ ಕೆರೆ

ಕೆರೆ ಅಭಿವೃದ್ಧಿಗೆ ಅನುದಾನದ ನಿರೀಕ್ಷೆ...

ಅಮೃತ್ 2.0 ಯೋಜನೆಯಡಿ ಮೈಸೂರು ನಗರದ ಕೆಲ ಕೆರೆಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಅನುದಾನ ಕೋರಿ ಕೇಂದ್ರ ಸರ್ಕಾರಕ್ಕೆ ಪಾಲಿಕೆಯಿಂದ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಪೈಕಿ ಬೋಗಾದಿ ಕೆರೆಗೆ 7 ಕೋಟಿ ರೂ. ಅನುದಾನ ಕೋರಲಾಗಿದೆ. ಸದರಿ ಕೆರೆಯು 22 ಎಕರೆ 12 ಗುಂಟೆ ವಿಸ್ತೀರ್ಣ ಹೊಂದಿದೆ. ಈ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ದೊರೆಯುವ ನಿರೀಕ್ಷೆಯಲ್ಲಿದ್ದೇವೆ.

-ಕೆ.ಜೆ.ಸಿಂಧು,
ಅಧೀಕ್ಷಕ ಇಂಜಿನಿಯರ್,
ಮೈಸೂರು ಮಹಾನಗರ ಪಾಲಿಕೆ

● ಎಂ.ಬಿ. ಪವನ್‌ಮೂರ್ತಿ

ಮೈಸೂರು, ಮಾ.19–ಜೀರ್ಣೋದ್ಧಾರಗೊಂಡ ಬಳಿಕ ಸೂಕ್ತ ರೀತಿಯಲ್ಲಿ ನಿರಂತರ ನಿರ್ವಹಣೆಗೆ ಕ್ರಮ ವಹಿಸಿದ್ದರೆ, ಈ ಕೆರೆಯೂ ಇತರ ಅಭಿವೃದ್ಧಿಗೊಂಡ ಕೆರೆಗಳಂತೆ ವಾಯುವಿಹಾರಕ್ಕೆ ಯೋಗ್ಯವಾಗಿರುತ್ತಿತ್ತು. ಜೊತೆಗೆ ಜಲಚರಗಳು, ಪ್ರಾಣಿ–ಪಕ್ಷಿಗಳಿಗೆ ಆಶ್ರಯದ ತಾಣವಾಗಿ ಸ್ಥಳೀಯರು ಮಾತ್ರವಲ್ಲದೇ ಪ್ರವಾಸಿಗರೂ ಅದರ ಪ್ರಾಕೃತಿಕ ಸೌಂದರ್ಯ ಸವಿಯುವ ಸನ್ನಿವೇಶವೂ ಇರುತ್ತಿತ್ತು.

ಆದರೆ ಸ್ಥಳೀಯ ಆಡಳಿತವು ಇದರ ನಿರ್ವಹಣೆ ಮರೆತ ಹಿನ್ನೆಲೆಯಲ್ಲಿ ಹೂಳು ತುಂಬಿ, ಗಿಡ ಗಂಟಿ ಬೆಳೆದು ಕೆರೆ ಮಧ್ಯೆ ಒಂದಿಷ್ಟು ಜಾಗದಲ್ಲಷ್ಟೇ ನೀರಿದ್ದು, ನಾನೂ ಕೆರೆ ಎಂದು ದೈನ್ಯತೆಯಿಂದ ಸಾರುವಂತಿದೆ. ಇಲ್ಲಿ ಬೆಳೆದಿರುವ ಗಿಡ–ಗಂಟಿಗಳ ಪೈಕಿ ಕತ್ತೆಕಿವಿ ಸಸ್ಯವೇ (ವಾಟರ್ ಹಯಸಿಂತ್) ಭಾರಿ ಪ್ರಮಾಣದಲ್ಲಿ ಆವರಿಸಿಕೊಂಡಿದೆ. ಇಷ್ಟಿದ್ದರೆ ಒಂದು ಸಮಾಧಾನ ಇರುತ್ತಿತ್ತು. ಇದನ್ನೂ ಮೀರಿ ಪ್ಲಾಸ್ಟಿಕ್ ಸೇರಿದಂತೆ ರಾಶಿ–ರಾಶಿ ತ್ಯಾಜ್ಯ ಸುರಿಯಲಾಗಿದೆ. ಇದು ಐತಿಹಾಸಿಕ ಬೋಗಾದಿ ಕೆರೆಯ ದುಸ್ಥಿತಿ.

ಅಂದ–ಚಂದದಿಂದ ಕಂಗೊಳಿಸಬೇಕಿದ್ದ ಕೆರೆ, ಕಸದ ರಾಶಿಯಿಂದ ಅವಸಾನದಂಚಿನಲ್ಲಿದೆ. ಒಂದು ರೀತಿಯಲ್ಲಿ ಕೆರೆ ಆವರಣ ತ್ಯಾಜ್ಯ ತಂದು ಸುರಿಯುವ ಡಂಪಿಂಗ್ ಯಾರ್ಡ್‌ನಂತೆ ಬಳಕೆಯಾಗುತ್ತಿದೆ. ಬೋಗಾದಿ 2ನೇ ಹಂತದ (ಉತ್ತರ) ಶ್ರೀ ಸಿದ್ದಲಿಂಗೇಶ್ವರನಗರ ಭಾಗದಲ್ಲಿ ಕೆರೆಗೆ ಸುಸಜ್ಜಿತ ರಸ್ತೆ ನಿರ್ಮಿಸಲಾಗಿದೆ. ಜೊತೆಗೆ ಇಲ್ಲಿ ಎರಡು ದ್ವಾರಗಳನ್ನು ಸಹ ನಿರ್ಮಾಣ ಮಾಡಲಾಗಿದೆ. ವಾಯುವಿಹಾರಕ್ಕಾಗಿ ಕೆರೆ ಏರಿ ಮೇಲೆ ತಿರುಗಾಡಲು ಹಲವು ವರ್ಷಗಳ ಹಿಂದೆಯೇ ಮಾಡಿರುವ ಈ ದ್ವಾರಗಳ ಮುಂದೆ ನಿಂತರೆ ಸಾಕು ಅನೈರ್ಮಲ್ಯ ಕಣ್ಣಿಗೆ ರಾಚುತ್ತದೆ.

ಆಗಾಗ್ಗೆ ಈ ದ್ವಾರಗಳಲ್ಲಿ ಕಸಕ್ಕೆ ಬೆಂಕಿ ಸಹ ಹಾಕುತ್ತಿದ್ದು, ಇದನ್ನು ನೋಡಿದರೆ ಇದೇನು ಕೆರೆ ಆವರಣವೋ ಇಲ್ಲ ಸ್ಮಶಾನವೋ ಎಂಬ ಸಂದೇಹ ಮೂಡದಿರದು. ಮುಂದೆ ಸಾಗಿ ನೋಡಿದರೆ ಕೆರೆ ದಡದ ಆಸುಪಾಸಿನಲ್ಲಿ ಅರೆಬರೆ ಬೆಂದ ಪ್ಲಾಸ್ಟಿಕ್ ಸೇರಿದಂತೆ ನಾನಾ ರೀತಿಯ ತ್ಯಾಜ್ಯ ಕಾಣಸಿಗುತ್ತವೆ. ಪರಿಸರ ಮಾಲಿನ್ಯ ಉಂಟು ಮಾಡಲು ಇಷ್ಟು ಸಾಕಲ್ಲವೇ?

ಕೆರೆ ಏರಿಯಲ್ಲಿ ವಾಯುವಿಹಾರಕ್ಕೆ ಮಾಡಿದ್ದ ಮಣ್ಣಿನ ದಾರಿಯಲ್ಲಿ ಗಿಡ–ಗಂಟಿಗಳು ಬೆಳೆದು ನಿಂತಿವೆ. ಇವುಗಳ ಮಧ್ಯೆ ಇರುವ ಒಂದಿಷ್ಟು ಜಾಗದಲ್ಲೇ ತಿರುಗಾಡುವಂತಹ ಸ್ಥಿತಿಯೇನೋ ಇದೆ. ಆದರೆ ಇದು ವಾಯುವಿಹಾರಕ್ಕೆ ಬಳಕೆಯಾಗದೇ ಪೋಲಿ ಪೋಕರಿಗಳ ಅಡ್ಡೆಯಾಗುವ ಮೂಲಕ ಅವರ ಪಾರ್ಟಿಯ ತಾಣವಾಗಿ ಮಾರ್ಪಟ್ಟಿದೆ. ಇದಕ್ಕೆ ಅಲ್ಲಿ ಬಿದ್ದಿರುವ ಮದ್ಯದ ಖಾಲಿ ಬಾಟಲಿ, ಸಿಗರೇಟ್ ■ 6ನೇ ಪುಟಕ್ಕೆ



ನೀರು, ಹಚ್ಚಹಸಿರಿನಿಂದ ಕಂಗೊಳಿಸಬೇಕಿದ್ದ ಬೋಗಾದಿ ಕೆರೆಯನ್ನು ಕತ್ತೆಕಿವಿ ಸಸ್ಯ, ಗಿಡ–ಗಂಟಿ, ಹೂಳು ಮತ್ತು ಪ್ಲಾಸ್ಟಿಕ್ ಸೇರಿದಂತೆ ವಿವಿಧ ರೀತಿಯ ತ್ಯಾಜ್ಯ ಆವರಿಸಿಕೊಂಡಿರುವುದು.



ಕೆರೆ ಪಕ್ಕದಲ್ಲಿ ಶ್ರೀ ಸಿದ್ದಲಿಂಗೇಶ್ವರನಗರ ಸಮೀಪ ಕಟ್ಟಡ ತ್ಯಾಜ್ಯ ಸುರಿದಿರುವುದು.



ಕೆರೆಯ ಒಂದು ಗೇಟ್‌ನಲ್ಲಿ ತ್ಯಾಜ್ಯಕ್ಕೆ ಬೆಂಕಿ ಹಾಕಿರುವುದು.

ಈ ಕೆರೆ ಉತ್ತಮ ನೀರಿನ ಸಾಮರ್ಥ್ಯ ಹೊಂದಿದೆ

ಬೋಗಾದಿ ಕೆರೆ ಸುಮಾರು 300 ವರ್ಷಗಳಷ್ಟು ಹಳೆಯದು. ಈ ಕೆರೆ ಉತ್ತಮ ನೀರಿನ ಸಾಮರ್ಥ್ಯ ಹೊಂದಿದೆ. ಇದರ ನೀರಿನ ಸಂಗ್ರಹಣಾ ವ್ಯವಸ್ಥೆ ವಿಜಯನಗರ ಮತ್ತು ಹಿನಕಲ್ ಪ್ರದೇಶಗಳಾಗಿವೆ. ಇಲ್ಲಿಯ ಮಳೆ ನೀರು ಬೋಗಾದಿ ಕೆರೆಗೆ ಹರಿದು ಬರಲಿದೆ. ಲಿಂಗಾಂಬುದಿ ಕೆರೆ ನೀರಿನ ಸಂಗ್ರಹಣಾ ವ್ಯವಸ್ಥೆ 22 ಚದರ ಕಿ.ಮೀ. ಇದೆ. ಈ ಪೈಕಿ ಈ ಕೆರೆಯೂ ಸೇರುತ್ತದೆ.

-ಪ್ರೊ. ಯು.ಎನ್.ರವಿಕುಮಾರ್,
ಜಲತಜ್ಞರು.

ಮೈಸೂರು ಮಿತ್ರ ಗುರುವಾರ 20 ಮಾರ್ಚ್ 2025

ನಾಳೆಯಿಂದ 'ಪ್ರಭಿಗ್ಯಾನ್' ಉತ್ಸವ

ವಿಜ್ಞಾನ, ವಾಣಿಜ್ಯ, ನಿರ್ವಹಣಾ, ಸಾಂಸ್ಕೃತಿಕ, ಸಾಹಿತ್ಯಕ ಕಾರ್ಯಕ್ರಮ

ಮೈಸೂರು, ಮಾ.19(ಜಿಎ)–ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ವಿದ್ಯಾಲಯದಲ್ಲಿ ಮಾ.21 ಮತ್ತು 22ರಂದು 'ಪ್ರಭಿಗ್ಯಾನ್' ಎಂಬ ವಿಜ್ಞಾನ, ವಾಣಿಜ್ಯ, ನಿರ್ವಹಣಾ, ಸಾಂಸ್ಕೃತಿಕ ಹಾಗೂ ಸಾಹಿತ್ಯ ಉತ್ಸವ ಆಯೋಜಿಸಲಾಗಿದೆ ಎಂದು ಕಾಲೇಜಿನ ಉಪ ಪ್ರಾಚಾರ್ಯರಾದ ಸುಕ್ರುತ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.21ರಂದು ಬೆಳಗ್ಗೆ 9.30ಕ್ಕೆ ಉತ್ಸವ ಆರಂಭವಾಗಲಿದೆ. ಮಾ.22ರಂದು ಸಂಜೆ ಕಾರ್ಯಕ್ರಮಗಳು ಮುಗಿದ ನಂತರ ಸಮಾರೋಪ ಸಮಾರಂಭ ನಡೆಯಲಿದೆ. ಒಂದು ವೇಳೆ ಮಾ.22ರಂದು ಕರ್ನಾಟಕ ಬಂದ್ ಕಾರಣ ಬಸ್ ಮೊದಲಾದ ಸಾರಿಗೆ ಸಮಸ್ಯೆ ಎದುರಾಗುವುದು ಅರಿವಾದಲ್ಲಿ ಅಂದಿನ ಕಾರ್ಯಕ್ರಮವನ್ನು ಮುಂದೂಡಲಾಗುವುದು ಎಂದರು.

ಈ ಉತ್ಸವದಲ್ಲಿ ವಿಜ್ಞಾನ ಸ್ಪರ್ಧೆಗಳಲ್ಲಿ ಗುರುತ್ವ– ಫೋಟೋಗ್ರಫಿಯಲ್ಲಿನ ವಿಜ್ಞಾನ, ಇ–ಪೋಸ್ಟರ್ ಪ್ರಸ್ತುತಿ ಮೊದಲಾದವು, ವಾಣಿಜ್ಯ ಮತ್ತು ನಿರ್ವಹಣಾ ಸ್ಪರ್ಧೆ, ಮಾರ್ಕೆಟಿಂಗ್ ಸವಾಲು, ಹಣಕಾಸು ಸಂಬಂಧಿತ ಸ್ಪರ್ಧೆ, ಸಾಂಸ್ಕೃತಿಕ ಸ್ಪರ್ಧೆ, ಗಾಯನ ಸ್ಪರ್ಧೆ, ಫ್ಲಾಶ್ ಫಿಕ್ಷನ್ ಸ್ಪರ್ಧೆ, ಸಾಮಾನ್ಯ ಜ್ಞಾನ ಸ್ಪರ್ಧೆ, ಟ್ರೆಜರ್ ಹಂಟ್ ಮೊದಲಾದವು ಇರಲಿದೆ. ವಿಜೇತರಿಗೆ ನಗದು ಬಹುಮಾನ, ಟ್ರೋಫಿ ಇರಲಿವೆ. ಮೈಸೂರು ವಿವಿ ಅಡಿಯಲ್ಲಿ ಬರುವ ಯಾವುದೇ ಪದವಿ ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ.ವಿನೋದಾ, ಶಿವಬೀರಪ್ಪ, ತಸ್ವಿ ಗಂಗಮ್ಮ, ಪ್ರಶಾಂತ್ ಜೈನ್, ಜ್ಯೋತಿ ಲಕ್ಷ್ಮಿ, ಪ್ರಸನ್ನ ಉಪಸ್ಥಿತರಿದ್ದರು.

ಪುನೀತ್ ರಾಜ್‌ಕುಮಾರ್ ಜನ್ಮ ದಿನೋತ್ಸವ



ನಗುವಿನ ದೊರೆ, ಪರಮಾತ್ಮ ಡಾ.ಪುನೀತ್ ರಾಜ್‌ಕುಮಾರ್ ಅವರ 50ನೇ ಜನ್ಮ ದಿನೋತ್ಸವವನ್ನು ಶಿವು ಅಡ್ಡ ಮೈಸೂರು ವತಿಯಿಂದ ಲಕ್ಷ್ಮಿಪುರಂ ಬಳಿಯ ಆಟೋ ನಿಲ್ದಾಣದಲ್ಲಿ ಆಚರಿಸಲಾಯಿತು. ಈ ವೇಳೆ ಆಟೋ ಶಿವು, ಮಹೇಶ, ಶಿವಮಲ್ಲು, ಕೃಷ್ಣ, ಮನು, ಹರೀಶ್ ಗೌಡ ಇನ್ನಿತರರು ಉಪಸ್ಥಿತರಿದ್ದರು.

ಮನ್ವಂತರ ಪತ್ರಿಕೆ ಲೋಕಾರ್ಪಣೆ



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮ ಮಂದಿರದಲ್ಲಿ 23ನೇ ವರ್ಷದ ಮನ್ವಂತರ ಪತ್ರಿಕೆಯನ್ನು ಲೋಕಾರ್ಪಣೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ನಿರೂಪಕ ಮಹಾವೀರ ಪ್ರಸಾದ್, ಪತ್ರಿಕೆ ಸಂಪಾದಕಿ ಶ್ರೀಮತಿ ಬಿ.ವಿ.ಲಲಿತಾ ವೆಂಕಟರಾಂ ಕಶ್ಯಪ್, ವಿದುಷಿ ಶ್ರೀಮತಿ ಬಿ.ವಿ.ವಸಂತಲಕ್ಷ್ಮಿ ಇತರರು ಉಪಸ್ಥಿತರಿದ್ದರು.

ಡಿಸಿಪಿ ಮುತ್ತುರಾಜ್‌ಗೆ ಮನವಿ ಸಲ್ಲಿಕೆ...



ಮೈಸೂರು ನಗರದ ವಿವಿಧ ಬಡಾವಣೆಗಳ ಪಾರ್ಕ್‌ಗಳಲ್ಲಿ ಕುಡುಕರ ಹಾವಳಿ, ಸಿಗ್ನಲ್‌ಗಳಲ್ಲಿ ಮಂಗಳಮುಖಿಯರ ಕಾಟವನ್ನು ತಪ್ಪಿಸುವಂತೆ ಮೈಸೂರು ನಗರ (ಜಿಲ್ಲಾ) ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ಸಮಿತಿ ಸದಸ್ಯರು, ಡಿಸಿಪಿ ಮುತ್ತುರಾಜ್ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣೇಗೌಡ, ಡಾ.ರಾಜ್ ಸಂಘದ ಅಧ್ಯಕ್ಷ ಎಂ.ರಾಮೇಗೌಡ, ಉಪಾಧ್ಯಕ್ಷ ನಾಗರಾಜ್, ಕಾರ್ಯದರ್ಶಿ ಸರ್ದಾರ್ ಮಹೇಶ್, ಭಾಸ್ಕರ್, ಗೋಪಿ ಇನ್ನಿತರರಿದ್ದರು.

ಮಂಜೇಗೌಡರ ತಂಡಕ್ಕೆ ಜಯ



ಇತ್ತೀಚೆಗೆ ನಡೆದ ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕಿನ 2025–30ನೇ ಸಾಲಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ಡಾ. ಎಂ.ಬಿ. ಮಂಜೇಗೌಡರ ತಂಡ ಅಭೂತಪೂರ್ವ ಜಯ ಸಾಧಿಸಿದೆ.

ನಿಧನ

ಟಿ.ಕೆ.ರಾಜಣ್ಣ



ಮೈಸೂರು, ಮಾರ್ಚ್ 19– ಮೈಸೂರು ವಿಜಯನಗರ ಮೂರನೇ ಹಂತದ ನಿವಾಸಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಟಿ.ಕೆ.ರಾಜಣ್ಣ (67) ಬುಧವಾರ ಮುಂಜಾನೆ ನಿಧನರಾದರು.

ಅವರು ಪತ್ನಿ, ಪುತ್ರ, ಪುತ್ರಿ ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತ ರಾಜಣ್ಣನವರು ಪಶುಪಾಲನಾ ಸಚಿವ ಕೆ.ವೆಂಕಟೇಶ್ ಅವರ ಷಡ್ಡಕರಾಗಿದ್ದರು. ಮೈಸೂರು ತಾಲೂಕಿನ ಜಯಪುರ ಬಳಿಯ ಗೋಪಾಲಪುರದಲ್ಲಿರುವ ಅವರ ಜಮೀನಿನಲ್ಲಿ ಇಂದು ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲಮೇಲಮ್ಮ



ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಎರೆಗೌಡನಹಳ್ಳಿ ಗ್ರಾಮದ ಲೇಟ್ ಯಜಮಾನ್ ನಿಂಗೇಗೌಡರ ಧರ್ಮಪತ್ನಿ ಅಲಮೇಲಮ್ಮ (97) ಬುಧವಾರ ನಿಧನರಾದರು. ಮೃತರು ಜಗದೀಶ್ (ಮೈಸೂರು ಕಾಫಿ ವರ್ಕ್ಸ್) ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಸ್ವಗ್ರಾಮದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಸ್ಲಿಂ ಸಮುದಾಯಕ್ಕೆ ಮೀಸಲಾತಿಗಾಗಿ ಮಸೂದೆ ಕದ್ದುಮುಚ್ಚಿ ಸದನದಲ್ಲಿ ಮಂಡನೆ

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಾಗ್ದಾಳಿ

ಬೆಂಗಳೂರು, ಮಾ.19(ಕೆಎಂಶಿ)– ರಾಜ್ಯ ಕಾಂಗ್ರೆಸ್ ಸರ್ಕಾರ ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ನೀಡುವ ಮಸೂದೆಯನ್ನು ಸದನದಲ್ಲಿ ಕದ್ದುಮುಚ್ಚಿ ಮಂಡಿಸಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿರೋಧ ಪಕ್ಷದ ಕಣ್ಣು ತಪ್ಪಿಸಿ ಸದನದಲ್ಲಿ ನಿನ್ನೆ ಮಸೂದೆ ಮಂಡಿಸಲಾಗಿದೆ. ಸಿದ್ದರಾಮಯ್ಯ ಸರ್ಕಾರದ ಇಂತಹ ತುಘಲಕ್ ದರ್ಬಾರ್‌ನ್ನು ಬಿಜೆಪಿ ವಿರೋಧಿಸುತ್ತದೆ, ಸದನದ ಒಳಗೆ ಮತ್ತು ಹೊರಗೆ ಹೋರಾಟ ನಡೆಸುವುದಲ್ಲದೆ, ಅಗತ್ಯ ಬಿದ್ದಲ್ಲಿ ರಾಜ್ಯ ಹೈಕೋರ್ಟ್‌ನಲ್ಲೂ ಪ್ರಶ್ನಿಸಲಿದೆ ಎಂದರು.

ಕಾಂಗ್ರೆಸ್ ಸರ್ಕಾರದ ದುರಾಡಳಿತಕ್ಕೆ ಇತಿಮಿತಿ ಇದೆ. ಅಲ್ಪಸಂಖ್ಯಾತರ ಓಲೈಕೆ ರಾಜಕೀಯ ಮಾಡುತ್ತಿದೆ. ಸ್ವಾತಂತ್ರ್ಯ ನಂತರ ದೇಶದಲ್ಲಿ 50–55 ವರ್ಷಗಳ ಸುದೀರ್ಘ ಆಡಳಿತ ನಡೆಸಿದ ಪಕ್ಷ ಅಲ್ಪಸಂಖ್ಯಾತರ ಶಿಕ್ಷಣಕ್ಕೆ ಒತ್ತು ಕೊಟ್ಟು ಸಮಾಜದ ಮುಂಚೂಣಿಗೆ ತರುವ ಕೆಲಸ ಏಕೆ ಮಾಡಲಿಲ್ಲ, ಇಚ್ಛಾಶಕ್ತಿ ಇರಲಿಲ್ಲವೇ ಎಂದು ವಿಜಯೇಂದ್ರ ಪ್ರಶ್ನಿಸಿದ್ದಾರೆ.

ಬಿಜೆಪಿ ಅಲ್ಪಸಂಖ್ಯಾತರ ವಿರೋಧಿ ಎಂಬುದಾಗಿ ಬಿಂಬಿಸಲು ಹೊರಟಿದ್ದಾರೆ, ಪಕ್ಷ ಮುಸ್ಲಿಂ ವಿರೋಧಿಯಲ್ಲ, ಅಲ್ಪಸಂಖ್ಯಾತ ಮಹಿಳೆಯರಿಗೆ ನ್ಯಾಯ ಕೊಡಿಸಲು ತ್ರಿವಳಿ ತಲಾಖ್ ರದ್ದುಪಡಿಸಿದ್ದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ. ಕೇಂದ್ರ ಸರ್ಕಾರದ ಕಾರ್ಯಕ್ರಮಗಳಾದ ಜನ್ ಧನ್ ಖಾತೆ, ಉಜ್ವಲ, ಉಜಾಲ, ವಸತಿ ಸೇರಿದಂತೆ ಅನೇಕ ಯೋಜನೆಗಳನ್ನು ಎಲ್ಲ ಸಮುದಾಯಕ್ಕೂ ಕೊಟ್ಟಿದೆ. ಇವು ಹಿಂದೂಗಳಿಗೆ ಮಾತ್ರ ಸೀಮಿತವಾಗಿಲ್ಲ, ಎಲ್ಲ ಸಮುದಾಯದವರೂ ಸೌಲಭ್ಯ ಪಡೆದುಕೊಂಡಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸರ್ಕಾರ ಭಾಗ್ಯಲಕ್ಷ್ಮೀ ಯೋಜನೆಯನ್ನು ಹಿಂದೂಗಳಿಗಾಗಿ ಮಾಡಿರಲಿಲ್ಲ ಎಂದರು.



ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸುದ್ದಿಗಾರರೊಂದಿಗೆ ಮಾತನಾಡಿದರು.

ನಾಗ್ಪುರದಲ್ಲಿ ಮಹಿಳಾ ಪೊಲೀಸ್ ವಿವಸ್ತ್ರಗೊಳಿಸಲು ಯತ್ನ

ನಾಗ್ಪುರ: ನಾಗ್ಪುರದಲ್ಲಿ ಮೊಘಲ್ ರಾಜ ಔರಂಗಜೇಬನ ಸಮಾಧಿ ವಿಷಯವಾಗಿ ಭುಗಿಲೆದ್ದ ಹಿಂಸಾಚಾರದ ಸಂದರ್ಭದಲ್ಲಿ ಗಲಭೆಕೋರರ ಗುಂಪೊಂದು ಮಹಿಳಾ ಕಾನ್‌ಸ್ಟೆಬಲ್ ಒಬ್ಬರನ್ನು ವಿವಸ್ತ್ರಗೊಳಿಸಲು ಪ್ರಯತ್ನಿಸಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಹಿಂಸಾಚಾರದ ಸಮಯದಲ್ಲಿ ಜನ ಸಮೂಹ ಪೊಲೀಸರ ಮೇಲೆ ಪೆಟ್ರೋಲ್ ಬಾಂಬ್‌ಗಳನ್ನು ಎಸೆದಿದೆ. ಪೊಲೀಸರು ಇದುವರೆಗೆ 51 ಗಲಭೆಕೋರರನ್ನು ಬಂಧಿಸಿದ್ದಾರೆ. ಗಣೇಶಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳಲ್ಲಿ ಒಂದರಲ್ಲಿ, ನಗರದ ಭಾಲ್ದಾರ್ಪುರ ಚೌಕ್‌ನಲ್ಲಿ ಜನರ ಗುಂಪೊಂದು ಪೊಲೀಸ್ ಸಿಬ್ಬಂದಿ ಮೇಲೆ ದಾಳಿ ಮಾಡಿದೆ. ಗುಂಪು ಪೊಲೀಸ್ ಸಿಬ್ಬಂದಿ ಮೇಲೆ ಪೆಟ್ರೋಲ್ ಬಾಂಬ್‌ಗಳು ಮತ್ತು ಕಲ್ಲುಗಳನ್ನು ಎಸೆದಿದೆ. ಕತ್ತಲಿನ ಲಾಭ ಪಡೆದು, ಗುಂಪು ಗಲಭೆ ನಿಯಂತ್ರಣ ಪೊಲೀಸ್ (ಆರ್‌ಸಿಪಿ) ಮಹಿಳಾ ಕಾನ್‌ಸ್ಟೆಬಲ್ ಸಮವಸ್ತ್ರ ಬಿಚ್ಚಲು ಪ್ರಯತ್ನಿಸಿತು. ಅವರು ನಿಂದನೀಯ ಭಾಷೆಯನ್ನು ಬಳಸಿದರು ಮತ್ತು ಇತರ ಮಹಿಳಾ ಪೊಲೀಸ್ ಸಿಬ್ಬಂದಿಯ ವಿರುದ್ಧ ಅಸಭ್ಯ ಶಬ್ದಗಳನ್ನು ಬಳಸಿ ನಿಂದಿಸಿದ್ದಾರೆ.

ಉಚಿತ ಮದ್ಯ ವರ್ಜನ ಶಿಬಿರ

ಮೈಸೂರು,ಮಾ.19(ಪಿಎಂ)– ನಗರದ ಶ್ರೀರಾಂಪುರದ ಚೈತನ್ಯ ಫೌಂಡೇಷನ್‌ನ ಎರಡನೇ ವಾರ್ಷಿಕೋತ್ಸವದ ಪ್ರಯುಕ್ತ ಮಾ.24 ರಿಂದ 21 ದಿನಗಳ ಕಾಲ ಉಚಿತ ಮಾದಕ ವಸ್ತು, ಮದ್ಯ ವರ್ಜನ ಶಿಬಿರ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 63617 44190, 91644 69570 ಸಂಪರ್ಕಿಸಬಹುದು.


ಕಲೆಗೆ ಪ್ರಕೃತಿಯನ್ನು ಸುಂದರಗೊಳಿಸುವ ಗುಣವಿದೆ

● ರಂಗಾಯಣ ಮಾಜಿ ನಿರ್ದೇಶಕ ಜನ್ನಿ ಅಭಿಮತ ● ವಿದ್ಯಾವರ್ಧಕ ಕಾಲೇಜಲ್ಲಿ ಕಾಜಾಣ ನಾಟಕ ತಂಡ ಉದ್ಘಾಟನೆ

ಮೈಸೂರು, ಮಾ. 19– ಭವ್ಯ ಭಾರತದಲ್ಲಿ ನಮಗೆ ನಾವೇ ಸಂವಿಧಾನವನ್ನು ಅರ್ಪಿಸಿಕೊಂಡಿದ್ದೇವೆ. ಇಂತಹ ಸಂವಿಧಾನದಡಿ ಬದುಕುತ್ತಿರುವ ನಾವು ಸಮಾಜದ ಜೀವಿಗಳು. ಈ ಬದುಕಿಗೆ ಕಲೆ ಅತ್ಯಗತ್ಯ. ಕಲೆ ಇಲ್ಲದಿದ್ದರೆ ಪ್ರಕೃತಿ ವಿಕೃತಿಯಾಗುತ್ತದೆ, ಲಕ್ಷಣ ವಿಲಕ್ಷಣವಾಗುತ್ತದೆ. ಕಲೆಗೆ ಈ ಪ್ರಕೃತಿಯನ್ನು ಸುಂದರಗೊಳಿಸುವ ಗುಣವಿದೆ ಎಂದು ಮೈಸೂರಿನ ರಂಗಾಯಣದ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ ವಿಷಾದಿಸಿದರು.

ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಆಯೋಜಿಸಿದ್ದ ಕಾಲೇಜಿನ ಕಾಜಾಣ ನಾಟಕ ತಂಡದ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಿದ್ದ ಅವರು, ಒಂದು ಕಾಲೇಜಿನಲ್ಲಿ ಈ ರೀತಿಯ ಒಂದು ನಾಟಕ ತಂಡ ಉದ್ಘಾಟನೆಯಾಗುತ್ತಿರುವುದು ಬಹಳ ಸಂತಸದ ವಿಷಯ. ವಿದ್ಯಾವರ್ಧಕ ಕಾಲೇಜು ಈ ವಿಚಾರದಲ್ಲಿ ಮೈಸೂರಿಗೆ ಮಾದರಿ ಕಾಲೇಜಾಗಿದೆ. ರಂಗ ದಿಗ್ಗಜರೆನಿಸಿಕೊಂಡ ಬಿ.ವಿ. ಕಾರಂತರು ರಂಗಭೂಮಿಯನ್ನು ವಿಶ್ವ ಮಟ್ಟಕ್ಕೆ ತೆಗೆದುಕೊಂಡು ಹೋದರು. ನಾಟಕ ಎಂದರೆ ಅದು ಸಂಭ್ರಮ. ನಾಟಕ ಮನುಷ್ಯನಿಗೆ ಶಾಂತಿ, ಸಮಾಧಾನ, ಸಹಬಾಳ್ವೆ, ಸಮಾನತೆ ಅನುಸಂಧಾನವನ್ನು ಬಿತ್ತುತ್ತದೆ. ನಾಟಕ ವಾಸ್ತವವಾಗಿರುವುದನ್ನು ಹಾಗೆಯೇ ತೋರಿಸುತ್ತದೆ ಎಂದು ಹೇಳಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡಿ, ನಮ್ಮ ಕಾಲೇಜಿನಲ್ಲಿ ಈ ಹಿಂದೆಯೇ ಕಾಜಾಣ ತಂಡ ಚಾಲನೆಯಲ್ಲಿ ಇತ್ತು. ಕಾರಣಾಂತರಗಳಿಂದ ಅದರ ಕಾರ್ಯಚಟುವಟಿಕೆಗಳು ನಡೆಯುತ್ತಿರಲಿಲ್ಲ. ಇಂದು ಮತ್ತೊಮ್ಮೆ ಅದಕ್ಕೆ ಚಾಲನೆ ನೀಡಲಾಗಿದೆ ಎಂದರು.



ಕಾಜಾಣ ನಾಟಕ ತಂಡದ ಉದ್ಘಾಟನೆ ನೆರವೇರಿಸಿದ ರಂಗಾಯಣ ಮಾಜಿ ನಿರ್ದೇಶಕ ಜನ್ನಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಅಭಿವೃದ್ಧಿ ದೃಷ್ಟಿಯಿಂದ ಕೂಡಲೆ ನಗರಪಾಲಿಕೆ ಚುನಾವಣೆ ನಡೆಸಿ

ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಆಗ್ರಹ

ಮೈಸೂರು, ಮಾ.19(ಜಿಎ)– ಮೈಸೂರಿನ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯ ಸರ್ಕಾರ ಕೂಡಲೆ ಮೈಸೂರು ಮಹಾನಗರಪಾಲಿಕೆ ಚುನಾವಣೆ ನಡೆಸಬೇಕೆಂದು ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ.ಮಂಜು ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮಹಾನಗರಪಾಲಿಕೆ ಅವಧಿ ಮುಗಿದು ಒಂದು ವರ್ಷ ಮೂರು ತಿಂಗಳು ಕಳೆದಿದ್ದರೂ ರಾಜ್ಯ ಸರ್ಕಾರ ಚುನಾವಣೆ ನಡೆಸಲು ಹಿಂದೇಟು ಹಾಕುತ್ತಿದೆ. ಇದರಿಂದಾಗಿ ನಗರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆಯುತ್ತಿಲ್ಲ. ನಗರಪಾಲಿಕೆಯಲ್ಲೂ ಕೆಲಸ ಆಗುತ್ತಿಲ್ಲ. ಹೀಗಾಗಿ ಸರ್ಕಾರ ಕೂಡಲೆ ಚುನಾವಣೆ ನಡೆಸಬೇಕೆಂದು ಒತ್ತಾಯಿಸಿದರು.

ಚುನಾವಣೆ ನಡೆಸಬೇಕೆಂದು ಈಗಾಗಲೇ ಪ್ರಗತಿಪರರು, ವಿವಿಧ ಪಕ್ಷಗಳ ಮುಖಂಡರು ಪ್ರತಿಭಟನೆ ನಡೆಸಿ ಆಗ್ರಹಿಸಿದ್ದಾರೆ. ನಗರದ ಜನತೆಯ ಬೇಡಿಕೆಯೂ ಇದೇ ಆಗಿದೆ. ಆದರೆ ಕಾಂಗ್ರೆಸ್ ನಾಯಕರು ಕೇವಲ ಅಧಿಕಾರ ವಿಕೇಂದ್ರೀಕರಣ ಎಂದು ಬಾಯಿ ಮಾತಿನಲ್ಲೇ ಹೇಳಿ ಸುಮ್ಮನಾಗುತ್ತಿದ್ದಾರೆಂದು ಅವರು ಕಿಡಿಕಾರಿದರು.

ಜನರು ವಾರ್ಡ್‌ನಲ್ಲಿ ಇರುವ ಸಮಸ್ಯೆ ಬಗೆಹರಿಸುವಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವಂತೆ ಪಾಲಿಕೆ ಸದಸ್ಯರನ್ನು ಒತ್ತಾಯಿಸುತ್ತಿದ್ದಾರೆ. ಜನರಿಗೆ ಯಾವುದೇ ಉತ್ತರ ನೀಡುವ ಪರಿಸ್ಥಿತಿಯಲ್ಲಿ ನಾವು ಇಲ್ಲ. ಮತ್ತೊಂದೆಡೆ ಸ್ವಚ್ಛ ನಗರಿ ಪಟ್ಟಕ್ಕಾಗಿ ಸ್ವಚ್ಛ ಸರ್ವೇಕ್ಷಣ ನಡೆಯುತ್ತಿದೆ. ಈ ಹಿಂದೆ ನಾವು ಅದಕ್ಕಾಗಿ ಸಾಕಷ್ಟು ಶ್ರಮ ವಹಿಸಿದ್ದೇವೆ. ಆದರೆ, ಈಗ ಯಾವ ರೀತಿ ಸ್ವಚ್ಛತಾ ಅಭಿಯಾನ ನಡೆಯುತ್ತಿದೆ ಎಂದು ತಿಳಿಯುತ್ತಿಲ್ಲ. ಕೂಡಲೆ ಚುನಾವಣೆ ಮಾಡಿ ಎಂದು ಕಾನೂನು ಹೋರಾಟ, ಮುಖ್ಯಮಂತ್ರಿಗಳನ್ನು ನಿಯೋಗ ಭೇಟಿ ಮಾಡುವ ಬಗ್ಗೆ ಹಿರಿಯರೊಂದಿಗೆ ಚರ್ಚಿಸಿ ನಿರ್ಧರಿಸುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯರಾದ ಭಾಗ್ಯ ಮಹದೇಶ್, ಪ್ರೇಮಾ ಶಂಕರೇಗೌಡ, ಎಂ.ಶಿವಣ್ಣ, ಫಾಲ್ಕನ್ ಬೋರೇಗೌಡ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ.ಮಂಜು ಮಾತನಾಡಿದರು.

> "ವಾರ್ಡ್‌ಗಳಲ್ಲಿ ಅನುದಾನ ಇಲ್ಲದೇ ಯಾವುದೇ ಕೆಲಸ ಆಗುತ್ತಿಲ್ಲ. ಈ ಹಿಂದೆ ಪಾಲಿಕೆ ಕೆಲಸಗಳ ಹಣದ ಬಾಕಿ 40 ಕೋಟಿ ಇದ್ದದ್ದು ಈಗ 450 ಕೋಟಿಗೆ ಏರಿದೆ. ಜನಪ್ರತಿನಿಧಿಗಳು ಇಲ್ಲದ ಕಾರಣ ಕೇಂದ್ರ ಸರ್ಕಾರದಿಂದ ನಾನಾ ಯೋಜನೆ ಅಡಿ ಬಿಡುಗಡೆ ಆಗಬೇಕಾಗಿದ್ದ ಸುಮಾರು 65 ಕೋಟಿ 2 ವರ್ಷದಲ್ಲಿ ವಾಪಸು ಹೋಗಿದೆ ಎಂದು ಹೇಳಲಾಗುತ್ತಿದೆ. ಇದರಿಂದಾಗಿ ನಗರದ ಅಭಿವೃದ್ಧಿ ಕುಂಠಿತವಾಗಿದೆ. ಆಸ್ತಿ ತೆರಿಗೆಯಲ್ಲೂ ಪಾಲಿಕೆ ಹಿಂದೆ ಬೀಳುವಂತಾಗಿದೆ. ಆದ್ದರಿಂದ ನಗರದ ಬೆಳವಣಿಗೆ, ಅಭಿವೃದ್ಧಿ ದೃಷ್ಟಿಯಿಂದ ರಾಜ್ಯ ಸರ್ಕಾರ ಕೂಡಲೆ ಚುನಾವಣೆ ನಡೆಸಬೇಕು.
>
> –ಎಸ್‌ಬಿಎಂ ಎಂಜು, ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.03.2025 ಗುರುವಾರ, ಮಳೆ ನಕ್ಷತ್ರ: ಉತ್ತರಭಾದ್ರಾ 17.03.2025 ರಿಂದ 30.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಅನೂರಾಧ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಮೂಲವ್ಯಾಧಿ/ಪೈಲ್ಸ್ ರೋಗ ಚಿಕಿತ್ಸಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ :** ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಜ್ವಲ ವಾರ್ಷಿಕ ಸಂಚಿಕೆ ಬಿಡುಗಡೆ: ಸಂಸ್ಕೃತಿ ಚಿಂತಕ ಶಂಕರ ದೇವನೂರು, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಸ್ಥಳ: ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ** : ಸಮಾಜ ವಿಜ್ಞಾನದಲ್ಲಿ ಸಂಶೋಧನಾ ವಿದ್ವಾಂಸರಿಗೆ ಸಂಶೋಧನಾ ಪದ್ಧತಿ ಕುರಿತು ಕಾರ್ಯಾಗಾರ, ಉದ್ಘಾಟನೆ : ಬೆಂಗಳೂರು ವಿವಿ ಕುಲಪತಿ ಪ್ರೊ. ಲಿಂಗರಾಜ ಗಾಂಧಿ, ಪ್ರಾಸ್ತಾವಿಕ ನುಡಿ : ಮಂಡ್ಯ ವಿವಿ ಕುಲಪತಿ ಪ್ರೊ. ಕೆ. ಶಿವಚಿತ್ತಪ್ಪ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ಬಾಸುದೇವ ಸೋಮಾನಿ ಕಾಲೇಜು :** ಅತ್ಯುತ್ತಮ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಹಾಗೂ ಉತ್ತಮ ಘಟಕ ರಾಜ್ಯ ಪ್ರಶಸ್ತಿ ಪಡೆದವರಿಗೆ ಅಭಿನಂದನಾ ಕಾರ್ಯಕ್ರಮ, ಮುಖ್ಯ ಅತಿಥಿಗಳು :ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ಎಂ.ಬಿ. ಸುರೇಶ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಮ್ಯಾನೇಜಿಂಗ್ ಟ್ರಸ್ಟಿ ಡಾ. ಎಂ. ಪುಟ್ಟಸ್ವಾಮಿ, ಅಭಿನಂದಿತರು : ಬಾಸುದೇವ ಸೋಮಾನಿ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ. ಟಿ. ರಮೇಶ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.45ಕ್ಕೆ.

■ **ಹೆಚ್.ವಿ. ರಾಜೀವ್ ಸ್ನೇಹ ಬಳಗ :** ಪುರೋಹಿತ ವೃತ್ತಿ, ಶಾಸ್ತ್ರ ಹೇಳುವವರಿಗೆ ಉಚಿತ ಒಂಟಿಕೊಪ್ಪಲು ಪಂಚಾಂಗ ವಿತರಣೆ, ಮುಖ್ಯ ಅತಿಥಿಗಳು : ಉತ್ತರಾಧಿ ಮಠದ ವ್ಯವಸ್ಥಾಪಕ ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ, ಸ್ಥಳ: ಶ್ರೀ ದೇವೇಂದ್ರತೀರ್ಥ ಪ್ರತಿಷ್ಠಾನ, ಶ್ರೀ ರಾಘವೇಂದ್ರ ಸ್ವಾಮಿಗಳ ಸನ್ನಿಧಿ, ಉತ್ತರಾಧಿ ಮಠ, ಅಗ್ರಹಾರ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು :** ಕೃತಕ ಬುದ್ಧಿಮತ್ತೆ ಮತ್ತು ಉದಯೋನ್ಮುಖ ತಂತ್ರಜ್ಞಾನಗಳು ಕುರಿತು ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ, ಉದ್ಘಾಟನೆ : ಪ್ರಾಧ್ಯಾಪಕ ಡಾ. ಟೋನಿ ವಿನೀತ್, ಮುಖ್ಯ ಅತಿಥಿಗಳು : ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಬಿ. ಸುರೇಶ್, ಜೆಎಸ್‌ಎಸ್ ಎಸ್‌ಟಿಯುನ ಉಪಕುಲಪತಿ ಡಾ.ಎ.ಎನ್. ಸಂತೋಷ್ ಕುಮಾರ್, ರಿಜಿಸ್ಟ್ರಾರ್ ಡಾ. ಎಸ್.ಎ. ಧನರಾಜ್, ಸ್ಥಳ: ಸಿಎಂಎಸ್ ಸೆಮಿನಾರ್ ಹಾಲ್, ಜೆಎಸ್‌ಎಸ್, ಬೆಳಗ್ಗೆ 11ಕ್ಕೆ.

■ **ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ :** ವಿಶ್ವ ಗುಬ್ಬಚ್ಚಿ ದಿನಾಚರಣೆ ಅಂಗವಾಗಿ ಗುಬ್ಬಚ್ಚಿ ಹಬ್ಬ ಆಚರಣೆ, ಮುಖ್ಯ ಅತಿಥಿಗಳು : ಶ್ರೀ ಕ್ಷೇತ್ರ ಬೇಬಿ ಮಠ ಮತ್ತು ಚಂದ್ರವನ ಆಶ್ರಮದ ಪೀಠಾಧ್ಯಕ್ಷರಾದ ಡಾ ಶ್ರೀ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ವನ್ಯಜೀವಿ ಮಂಡಳಿಯ ರಾಜ್ಯ ಸದಸ್ಯ ಡಾ. ಸಂತೃಪ್ತಿ ಗೌಡ, ಕೆ ಆರ್ ವಿಭಾಗದ ಉಪ ಪೊಲೀಸ್ ಆಯುಕ್ತ ರಮೇಶ್ ಕುಮಾರ್, ಉರುಗ ತಜ್ಞ ಸ್ನೇಕ್ ಶ್ಯಾಮ್, ಚಿತ್ರನಟ ಆದಿ ಲೋಕೇಶ್, ಎನ್ ಎಂ ನವೀನ್ ಕುಮಾರ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಮಹಾರಾಜ ಮೈದಾನದ ಮುಂಭಾಗ, ಬೆಳಗ್ಗೆ 11ಕ್ಕೆ.

■ **ಶ್ರೀದೇವಿ ಪಟ್ಟಲದಮ್ಮ ಹಾಗೂ ಶ್ರೀ ಕತ್ತಿ ಮುನೇಶ್ವರ ದೇವಸ್ಥಾನ (ಕುಲ ಪಂಚಾಯತಿ ಸಮಿತಿ) :** 94ನೇ ವರ್ಷದ ಜ್ಯೋತಿ ಕರಗ ಜಾತ್ರಾ ಮಹೋತ್ಸವ, ಮಧ್ಯಾಹ್ನ 3 ಗಂಟೆಗೆ ಕರಗ ಹೊರುವವರ ಮೇಲೆ ಅರಿಶಿನ ನೀರಿನ ಅಭಿಷೇಕ, ಮೆರವಣಿಗೆ, ತಾಂಡವಪುರದ ಬಸವನ ದೇವಸ್ಥಾನದ ಹತ್ತಿರ ಕಪಿಲ ನದಿಯಲ್ಲಿ ವಿಸರ್ಜನೆ, ಸ್ಥಳ: ದೇವಸ್ಥಾನದ ಆವರಣ, ಅಶೋಕಪುರಂ.

■ **ಆದಿವಕ್ತ ಪರಿಷದ್, ಮೈಸೂರು ಘಟಕ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ನಿವೃತ್ತ ನ್ಯಾಯಾಧೀಶೆ ಎಸ್.ಹೆಚ್. ಪುಷ್ಪಾಂಜಲಿದೇವಿ, ಪ್ರಾಸ್ತಾವಿಕ ಭಾಷಣ : ನಿವೃತ್ತ ಹಿರಿಯ ಅಧಿಕಾರಿ ಮೀನಾ ಮೈಸೂರು, ಉಪಸ್ಥಿತರು : ಆದಿವಕ್ತ ಪರಿಷದ್ ಅಧ್ಯಕ್ಷೆ ವಿ. ಶಾರದಾ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ರವಿಕುಮಾರ್, ಸ್ಥಳ: ನೇಗಿಲಯೋಗಿ ಸಭಾ ಭವನ, ಸಂಜೆ 4ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ :** ರಾಜ್ಯ ಮಟ್ಟದ ಯುವ ಜನೋತ್ಸವ–2025, ಪ್ರೊ. ಕೆ.ಎಂ. ವೀರಯ್ಯ ಅವರಿಂದ ಸಾಮಾಜಿಕ ಸೌಹಾರ್ದತೆ ಮತ್ತು ದೀಪೋತ್ಸವ ಕುರಿತು ಉಪನ್ಯಾಸ, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚನ್ನಯ್ಯ ರಸ್ತೆ, ಬೆಳಗ್ಗೆ 6.30ರಿಂದ

■ **ಪ್ರಕೃತಿಂ ಸಂಸ್ಥೆ :** ವಿಶ್ವ ಗುಬ್ಬಚ್ಚಿ ದಿನಾಚರಣೆ, ಉಪಸ್ಥಿತರು : ಪಕ್ಷಿ ತಜ್ಞ ಪ್ರವೀಣ್, ಚಲನಚಿತ್ರ ನಟ ಪವನ್ ತೇಜ್, ರಾಯಲ್ ಮಾರ್ಟ್‌ನ ಮುಖ್ಯ ವ್ಯವಸ್ಥಾಪಕ ನವಾಝ್, ಸ್ಥಳ: ರಾಯಲ್ ಮಾರ್ಟ್ ಸೂಪರ್ ಮಾರ್ಕೆಟ್ ಆವರಣ, ಸಂಜೆ 7 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊಫೆಸರ್. ಸಿ. ನಾಗಣ್ಣ, ನಿರ್ಮಾಣ–ಚಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ದೀಪಿಕಾ ಪಂಡುರಂಗಿ, ವ್ಯಾಖ್ಯಾನ–ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಭಾಗವಹಿಸುತ್ತಾರೆ–ವನ್ಯಜೀವಿ ಚಿತ್ರಕಲಾವಿದ ಗುಂಡ್ಲುಪೇಟೆಯ ಶಕ್ತಿ ಪ್ರಸಾದ್, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ : ಟಿ. ನರಸೀಪುರ ತಾಲೂಕು ಬನ್ನೂರು ಹೋಬಳಿ ಯಡಹಳ್ಳಿಯ ಸಿದ್ಧಮ್ಮ ಮತ್ತು ಸಂಗಡಿಗರಿಂದ ಚಾಮುಂಡಮ್ಮನ ಹಾಡು ಮತ್ತು ಸೋಬಾನೆ ಪದ, 4.30 ವಿಜ್ಞಾನ ಭಾರತಿ : ಎ.ಐ ತಂತ್ರಜ್ಞಾನದ ಸಾಧಕ ಬಾದಕಗಳ ಕುರಿತು ಖ್ಯಾತ ವಿಜ್ಞಾನ ಬರಹಗಾರರಾದ ಕೊಳ್ಳೇಗಾಲ ಶರ್ಮ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಜಿ. ಶಾಂತಕುಮಾರ್, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ತೆಂಗು ಹಾಗೂ ತರಕಾರಿ ಬೇಸಾಯ ಹಾಗೂ ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ–ಮದ್ದೂರು ತಾಲೂಕು ಗೆಜ್ಜಲಗೆರೆಯ ಸಕ್ಕರೆ ನಾಡು ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ಜಿ.ಸಿ. ಮಹೇಂದ್ರ ಮತ್ತು ಮದ್ದೂರು ತಾಲೂಕು ಭಾರತೀನಗರದ ನೇಚರ್ ಪ್ಯೂರ್ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ತಿಮ್ಮೇಶ್. ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ. ನಡೆಸಿಕೊಡುತ್ತಾರೆ–ನಿವೇದಿತಾ. ಹೆಚ್., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಹೊರಗಡೆಯಿಂದ ಊಟ ತಿಂಡಿ ತರಿಸಬಾರದು

ಮಳವಳ್ಳಿ ಘಟನೆ ಬೆನ್ನಲ್ಲೇ ಮೈಸೂರು ಜಿಲ್ಲೆಯ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಆದೇಶ

ಮೈಸೂರು, ಮಾ.19(ಆರ್‌ಕೆ)– ಬಾಲ ನ್ಯಾಯ ಕಾಯ್ದೆ (Care and Protection Act)ಯಡಿ ನಡೆಯುತ್ತಿರುವ ಮಕ್ಕಳ ಪಾಲನಾ ಸಂಸ್ಥೆ (Child Care Institution)ಗಳಿಗೆ ಹೊರಗಿನಿಂದ ತಿಂಡಿ–ಊಟ ತರಿಸಬಾರದು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎನ್.ಟಿ. ಯೋಗೇಶ್ ತಾಕೀತು ಮಾಡಿದ್ದಾರೆ.

ಮಳವಳ್ಳಿಯ ಶಾಲಾ ಹಾಸ್ಟೆಲ್‌ನಲ್ಲಿ ಹೋಳಿ ಹಬ್ಬದ ಊಟ ಸೇವಿಸಿ ಬಾಲಕರಿಬ್ಬರು ಸಾವನ್ನಪ್ಪಿ ಇತರ 29 ಮಂದಿ ಅಸ್ವಸ್ಥರಾಗಿರುವ ಘಟನೆ ಬೆನ್ನಲ್ಲೇ ಎಚ್ಚೆತ್ತ ಮೈಸೂರು ಜಿಲ್ಲಾಡಳಿತವು ಅಗತ್ಯ ಮುಂಜಾಗ್ರತಾ ಕ್ರಮಕ್ಕೆ ಮುಂದಾಗಿದ್ದು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ (District Child Protection Officer-DCPO) ಯೋಗೇಶ್ ಇಂದು ಲಿಖಿತ ಆದೇಶ ಹೊರಡಿಸಿದ್ದಾರೆ.

ಜುವೆನೈಲ್ ಜಸ್ಟೀಸ್ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆಯಡಿ ನಡೆಯುತ್ತಿರುವ ಮೈಸೂರು ಜಿಲ್ಲೆಯ 28 ಖಾಸಗಿ (NGO) ಹಾಗೂ 3 ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳು ಹೊರಗೆ ತಯಾರಿಸಿದ ತಿಂಡಿ–ಊಟವನ್ನು ಮಕ್ಕಳಿಗೆ ಪೂರೈಸಬಾರದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.


ಅಡುಗೆ ಮನೆಯನ್ನು ಶುಚಿಯಾಗಿರಿಸಿ ಆಹಾರ ತಯಾರಿಸುವಾಗ ಕಟ್ಟೆಚ್ಚರ ವಹಿಸಿ ಗುಣಮಟ್ಟದ ಆಹಾರವನ್ನು ಸಂಸ್ಥೆಯ ಹಾಸ್ಟೆಲ್ ಮಕ್ಕಳಿಗೆ ನೀಡಬೇಕು. ಶುದ್ಧ ನೀರನ್ನು ಅಡುಗೆಗೆ ಮತ್ತು ಕುಡಿಯಲು ಬಳಸಬೇಕು ಎಂದು ಯೋಗೇಶ್ ಅವರು ಆದೇಶದಲ್ಲಿ ತಾಕೀತು ಮಾಡಿದ್ದಾರೆ.


ನಿಯಮಗಳನ್ನು ಪಾಲಿಸದೇ ನಿರ್ಲಕ್ಷ್ಯ ವಹಿಸಿದರೆ ಕಾನೂನಿನಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿರುವ ಅವರು, ಈ ಸಂಬಂಧ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಮಕ್ಕಳ ಕಲ್ಯಾಣ ಸಮಿತಿ (Child Welfare Committee) ಅಧಿಕಾರಿಗಳೊಂದಿಗೆ ಪರಿಶೀಲಿಸಲಾಗುವುದು ಎಂದು ಯೋಗೇಶ್ ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ 31 ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಒಟ್ಟು 320 ಮಕ್ಕಳು ಆಶ್ರಯ ಪಡೆದಿದ್ದು, ಈಗ ಪರೀಕ್ಷೆಗಳು ಮುಗಿದಿರುವುದರಿಂದ ಕೆಲ ಮಕ್ಕಳು ಪೋಷಕರ ಮನೆಗೆ ಹಿಂದಿರುಗಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮೈಸೂರಿನ ಫುಟ್‌ಪಾತ್‌ನಲ್ಲಿ ಫಾಸ್ಟ್‌ಫುಡ್‌ಗಳ ಹಾವಳಿ

- ತೆರಿಗೆ ಇಲ್ಲ, ಬಾಡಿಗೆ ಇಲ್ಲ, ಟ್ರೇಡ್ ಲೈಸೆನ್ಸ್ ಪಡೆಯುವ ಗೋಜು ಇಲ್ಲ
- ಲಕ್ಷಾಂತರ ವೆಚ್ಚದಲ್ಲಿ ನಿರ್ಮಿಸಿರುವ ಫುಡ್‌ಸ್ಟ್ರೀಟ್‌ಗೆ ಹೋಗಲು ತಯಾರಿಲ್ಲ!
- ಇಲ್ಲಿ ನೀಡುವಂತಹ ಆಹಾರ ಪದಾರ್ಥಗಳ ಗುಣಮಟ್ಟದ 'ಗ್ಯಾರಂಟಿ' ಇಲ್ಲ
- ಅನಾಹುತ ಸಂಭವಿಸಿದಾಗಲೇ ಅಧಿಕಾರಿಗಳಿಗೆ ಇಲ್ಲಿನ ಅವ್ಯವಸ್ಥೆ ಗಮನಕ್ಕೆ ಬರುತ್ತೆ





ಫಾಸ್ಟ್‌ಫುಡ್ ಹಾಗೂ ಚಾಟ್ ಸೆಂಟರ್‌ನವರಿಗಾಗಿ ನಿರ್ಮಿಸಲಾಗಿರುವ ಫುಡ್‌ಸ್ಟ್ರೀಟ್

ಮೈಸೂರು, ಮಾ.19(ಬಿಎಲ್‌ಯು)– ಮೈಸೂರು ನಗರದ ಫುಟ್‌ಪಾತ್‌ಗಳಲ್ಲಿ ಫಾಸ್ಟ್‌ಫುಡ್ ಹಾಗೂ ಚಾಟ್ ಸೆಂಟರ್‌ಗಳ ಹಾವಳಿಯಿಂದ ನಗರದ ಸ್ವಚ್ಛತೆ, ಸೌಂದರ್ಯ ಹಾಳಾಗುತ್ತಿದೆ. ತಿಂಡಿ–ತಿನಿಸು ಸೇವಿಸಿ, ಪ್ಲಾಸ್ಟಿಕ್, ಪೇಪರ್ ತಟ್ಟೆ ಹಾಗೂ ತ್ಯಾಜ್ಯ ಅಲ್ಲೇ ಬಿಸಾಡುತ್ತಿದ್ದು, ಸುತ್ತಲಿನ ವಾತಾವರಣ ಗಬ್ಬು ನಾರುತ್ತಿದೆ. ಈ ಹಿನ್ನೆಲೆಯಲ್ಲಿ ಶಿಸ್ತು ಹಾಗೂ ವ್ಯವಸ್ಥಿತವಾಗಿ ತಿಂಡಿ ತಿನಿಸುಗಳನ್ನು ಮಾರಾಟ ಮಾಡಲು ನಗರಪಾಲಿಕೆ ಮೈಸೂರಿನಲ್ಲಿ ಫುಡ್ ಸ್ಟ್ರೀಟ್ ನಿರ್ಮಿಸಿದೆ. ಆದರೆ ಲಕ್ಷಾಂತರ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಫುಡ್‌ಸ್ಟ್ರೀಟ್ ಉಪಯೋಗಿಸದೆ ಪಾಳು ಬಿದ್ದಿವೆ.

ಫಾಸ್ಟ್‌ಫುಡ್ ಹಾಗೂ ಚಾಟ್ ಸೆಂಟರ್ ನಡೆಸುವವರು ಫುಟ್‌ಪಾತ್ ಜಾಗವನ್ನು ಅತಿಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಇಲ್ಲಿಗೆ ಬರುವ ಗ್ರಾಹಕರು ರಸ್ತೆಯಲ್ಲೇ ತಮ್ಮ ವಾಹನಗಳ ನಿಲ್ಲಿಸುವುದರಿಂದ ಪಾದಚಾರಿಗಳು, ವಾಹನಗಳು ಸಂಚರಿಸುವುದು ದುಸ್ತರವಾಗಿದೆ. ಇದರಿಂದ ರಸ್ತೆ ಅಪಘಾತಗಳಾಗಿರುವ ಬಹಳಷ್ಟು ನಿದರ್ಶನಗಳಿವೆ.

ಫಾಸ್ಟ್ ಫುಡ್ ಹಾಗೂ ಚಾಟ್ ಸೆಂಟರ್‌ನವರಿಗಾಗಿ ಬಲ್ಲಾಳ್ ವೃತ್ತ, ಉದಯಗಿರಿ ಸೇರಿದಂತೆ ಇತರೆಡೆ ಫುಡ್‌ಸ್ಟ್ರೀಟ್ ನಿರ್ಮಿಸಲಾಗಿದೆ. ಆದರೆ ಫುಡ್‌ಸ್ಟ್ರೀಟ್ ಉಪಯೋಗಿಸದೆ ಪಾಳು ಬಿದ್ದಿವೆ.

ಮಳೆ, ಬಿಸಿಲಿನ ತೊಂದರೆ ಆಗದಂತೆ ಶೀಟ್ ಹೊದಿಕೆ ಹಾಕಲಾಗಿದೆ. ವಿದ್ಯುತ್ ಬೆಳಕಿನ ವ್ಯವಸ್ಥೆ ಕೂಡ ಮಾಡಲಾಗಿದೆ. ಇಷ್ಟೆಲ್ಲಾ ವ್ಯವಸ್ಥೆ ಇರುವ ಫುಟ್‌ಸ್ಟ್ರೀಟ್ ನಿರ್ಮಿಸಿ ವರ್ಷ ಕಳೆದಿದೆ. ಆದರೆ, ಅಲ್ಲಿಗೆ ವ್ಯಾಪಾರಕ್ಕೆ ಯಾರೂ ಹೋಗುತ್ತಿಲ್ಲ.

ಫುಟ್‌ಸ್ಟ್ರೀಟ್‌ನಲ್ಲೇ ತಿಂಡಿ–ತಿನಿಸು ಮಾರಾಟ ಮಾಡುವಂತೆ ನಗರ ಪಾಲಿಕೆ ಅಧಿಕಾರಿಗಳು ಕೂಡ ಮಾರಾಟಗಾರರಿಗೆ ತಾಕೀತು ಮಾಡಿಲ್ಲ. ಇದರಿಂದ ಫುಟ್‌ಪಾತ್‌ಗಳಲ್ಲಿ ನೂರಾರು ಫಾಸ್ಟ್‌ಫುಡ್ ಹಾಗೂ ಚಾಟ್ ಸೆಂಟರ್‌ಗಳು ರಾಜಾರೋಷವಾಗಿ ವ್ಯಾಪಾರ ಮಾಡುತ್ತಿವೆ.

ಹೋಟೆಲ್‌ಗಳಂತೆ ಫುಟ್‌ಪಾತ್‌ನಲ್ಲೇ ತಮಗೆ ಬೇಕಾದಷ್ಟು ಜಾಗ ಆಕ್ರಮಿಸಿ, ಟೇಬಲ್, ಚೇರ್‌ಗಳನ್ನು ಹಾಕಿ ತಿಂಡಿ–ತಿನಿಸು ಹಾಗೂ ಚಾಟ್ಸ್ ಮಾರಾಟ ಮಾಡುತ್ತಿದ್ದಾರೆ. ಪಾದಚಾರಿಗಳಿಗೆ ಮೀಸಲಾಗಿರುವ ಫುಟ್‌ಪಾತ್‌ಗಳು ಈಗ ಫಾಸ್ಟ್‌ಫುಡ್ ಹಾಗೂ ಚಾಟ್ ಸೆಂಟರ್‌ನವರ ವ್ಯಾಪಾರ ಸ್ಥಳವಾಗಿ ಮಾರ್ಪಟ್ಟಿದ್ದು, ನಗರದ ಸೌಂದರ್ಯಕ್ಕೆ ಧಕ್ಕೆಯಾಗಿದೆ. ಪಾರಂಪರಿಕ ಹಾಗೂ ಪ್ರಸಿದ್ಧ ಸ್ಥಳಗಳ ಬಳಿ ಚಿಕನ್, ಫಿಶ್, ಕಬಾಬ್ ಸೆಂಟರ್‌ಗಳಿವೆ. ಯಾವ ತಿಂಡಿ ಪದಾರ್ಥ, ವಸ್ತುಗಳ ಎಲ್ಲಿ ಮಾರಾಟಕ್ಕೆ ಅವಕಾಶ ಮಾಡಿಕೊಡಬೇಕು ಎಂಬ ಕನಿಷ್ಠ ಪರಿಜ್ಞಾನ ಪಾಲಿಕೆ ಅಧಿಕಾರಿಗಳಿಗಿಲ್ಲ. ಇದು ಮೈಸೂರಿನ ಘನತೆಗೆ ಧಕ್ಕೆ ತರುತ್ತದೆ ಎಂಬ ಅರಿವು ಅಧಿಕಾರಿಗಳಿಗೆ ಇಲ್ಲವಾಗಿದೆ. ಕೇಳಿದರೆ ಅವರು ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ ಎಂಬ ಸಬೂಬು ಹೇಳುತ್ತಾರೆ. ಅದನ್ನು ತೆರವು ಮಾಡಿಸಬೇಕೆಂಬ ಅರಿವು, ಕಾನೂನು ಸಿಬ್ಬಂದಿ ಇಲ್ಲವಾಗಿದೆ.

ತೆರಿಗೆ ನೀಡಬೇಕಿಲ್ಲ, ಬಾಡಿಗೆ ಪಾವತಿಸಬೇಕಿಲ್ಲ, ನೀರು ಹಾಗೂ ವಿದ್ಯುತ್ ಶುಲ್ಕ ಕಟ್ಟಬೇಕಿಲ್ಲ, ಟ್ರೇಡ್ ಲೈಸೆನ್ಸ್‌ಗೆ ಹಣ ನೀಡಬೇಕಿಲ್ಲ. ಇದಾವುದೂ ಇಲ್ಲದಿದ್ದರೂ ಫಾಸ್ಟ್‌ಫುಡ್ ಹಾಗೂ ಚಾಟ್ ಸೆಂಟರ್‌ನವರು ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡಿ ಲಾಭಗಳಿಸುತ್ತಾರೆಯೇ ಹೊರತು ತಮ್ಮ ಕರ್ತವ್ಯ ಅರಿತಿಲ್ಲ.

ಫುಟ್‌ಪಾತ್ ವ್ಯಾಪಾರವಾದರೂ ಇಲ್ಲಿನ ತಿಂಡಿ–ತಿನಿಸುಗಳ ದರ ಕಡಿಮೆ ಏನೂ ಇರುವುದಿಲ್ಲ. ಏನೇ ತೆಗೆದುಕೊಂಡರೂ ದುಬಾರಿ. ಎಲ್ಲದಕ್ಕಿಂತ ಪ್ರಮುಖವಾಗಿ ಸ್ವಚ್ಛತೆ ಇಲ್ಲ. ಇದರಿಂದ ಹಲವು ಸಾಂಕ್ರಾಮಿಕ ರೋಗಕ್ಕೆ ಕಾರಣವಾಗಬಹುದು.

ಗ್ರಾಹಕರು ಸೇವಿಸಿದ ತಿಂಡಿ–ತಿನಿಸಿನ ತ್ಯಾಜ್ಯ ಹಾಗೂ ತಟ್ಟೆಗಳನ್ನು ಬೇಕಾಬಿಟ್ಟಿಯಾಗಿ ಬಿಸಾಡಿರುತ್ತಾರೆ. ವ್ಯಾಪಾರ ಮುಗಿಸಿ ಹೋಗುವಾಗ ಆ ಸ್ಥಳವನ್ನು ಸ್ವಚ್ಛ ಕೂಡ ಮಾಡುವುದಿಲ್ಲ. ಮಾರನೇ ದಿನ ಬೆಳಿಗ್ಗೆ ಪೌರ ಕಾರ್ಮಿಕರು ಈ ಜಾಗವನ್ನು ಸ್ವಚ್ಛ ಮಾಡಬೇಕಿದೆ.

ಇನ್ನು ಇಂತಹ ವ್ಯಾಪಾರಿಗಳು ವಹಿವಾಟು ನಡೆಸುವ ಸ್ಥಳ ಅತ್ಯಂತ ಅಪಾಯಕಾರಿ. ಹೈಟೆನ್ಷನ್ ವಿದ್ಯುತ್ ವೈರ್ ಕೆಳಗಡೆ, ವಾಹನ ದಟ್ಟಣೆ ಇರುವ ಕಡೆ ಹಾಗೂ ವಸತಿ ಸ್ಥಳಗಳಲ್ಲಿ ವ್ಯಾಪಾರ–ವಹಿವಾಟು ನಡೆಯುತ್ತಿದೆ. ಇದರಿಂದ ನಾನಾ ಸಮಸ್ಯೆಗಳಿಗೆ ಕಾರಣವೂ ಆಗಿದೆ.

ಫುಟ್‌ಪಾತ್ ವ್ಯಾಪಾರ ತೆರವು ಮಾಡಿ

ಫುಟ್‌ಪಾತ್‌ನಲ್ಲಿ ಮಾರಾಟ ಮಾಡುತ್ತಿರುವ ಫಾಸ್ಟ್‌ಫುಡ್ ಹಾಗೂ ಚಾಟ್ ಸೆಂಟರ್‌ಗಳನ್ನು ಕೂಡಲೇ ಫುಡ್‌ಸ್ಟ್ರೀಟ್‌ಗೆ ಸ್ಥಳಾಂತರ ಮಾಡಬೇಕು. ಇಲ್ಲಿ ನೀಡುವ ಆಹಾರ ಸ್ವಚ್ಛತೆಯಿಂದ ಕೂಡಿರುವುದಿಲ್ಲ. ಹೋಟೆಲ್‌ಗಳಿಗಿಂತ ಬೆಲೆ ಕೂಡ ಹೆಚ್ಚಾಗಿರುತ್ತದೆ. ಆಹಾರ ತ್ಯಾಜ್ಯ ಅಲ್ಲೇ ಎಸೆಯುವ ಕಾರಣ ಸುತ್ತಲಿನ ವಾತಾವರಣ ಗಬ್ಬು ನಾರುತ್ತಿರುತ್ತದೆ.

ಹೋಟೆಲ್‌ನವರು ಜಿಎಸ್‌ಟಿ, ಟ್ರೇಡ್ ಲೈಸೆನ್ಸ್, ನೀರಿನ ಶುಲ್ಕ, ವಿದ್ಯುತ್ ಶುಲ್ಕ ಸೇರಿದಂತೆ ಸರ್ಕಾರಕ್ಕೆ ಹಲವು ತೆರಿಗೆ ಪಾವತಿ ಮಾಡುತ್ತಾರೆ. ಆದರೆ ಯಾವುದೇ ತೆರಿಗೆ ಪಾವತಿ ಮಾಡದ ಫುಟ್‌ಪಾತ್ ಹಾಗೂ ಚಾಟ್ ಸೆಂಟರ್‌ನವರು ರಾಜಾರೋಷವಾಗಿ ವ್ಯಾಪಾರ ಮಾಡುತ್ತಿದ್ದಾರೆ. ಈ ಹಿನ್ನೆಲೆ ನಗರ ಪಾಲಿಕೆ ಇದನ್ನು ಗಂಭೀರವಾಗಿ ಪರಿಗಣಿಸಿ ಫುಟ್‌ಪಾತ್ ವ್ಯಾಪಾರ ತೆರವು ಮಾಡಬೇಕು.

- ನಾರಾಯಣ ಗೌಡ, ಅಧ್ಯಕ್ಷ, ಮೈಸೂರು ಹೋಟೆಲ್ ಮಾಲೀಕರ ಸಂಘ

ವಿಧಾನಸಭೆಯಲ್ಲಿ ಕೇಂದ್ರದ ವಕ್ಫ್ ತಿದ್ದುಪಡಿ ಮಸೂದೆ ವಿರುದ್ಧ ನಿರ್ಣಯ

ಬಿಜೆಪಿ ಸಭಾತ್ಯಾಗ

ಬೆಂಗಳೂರು, ಮಾ.19– ಬಿಜೆಪಿ ಶಾಸಕರ ಸಭಾತ್ಯಾಗದ ನಡುವೆ ಕೇಂದ್ರ ಸರ್ಕಾರದ ವಕ್ಫ್ ತಿದ್ದುಪಡಿ ಮಸೂದೆ ವಿರುದ್ಧ ರಾಜ್ಯ ಸರ್ಕಾರ ಬುಧವಾರ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಿದೆ.

ಇಂದು ವಿಧಾನಸಭೆಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಅವರು ನಿರ್ಣಯವನ್ನು ಮಂಡಿಸಿದರು. ಇದಕ್ಕೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿ, ಸಭಾತ್ಯಾಗ ಮಾಡಿತು.

ಸಂವಿಧಾನದ ಮೂಲಭೂತ ತತ್ವಗಳನ್ನು ಉಲ್ಲಂಘಿಸುವ ನಿಬಂಧನೆಗಳನ್ನು ಒಳಗೊಂಡಿರುವ ವಕ್ಫ್ (ತಿದ್ದುಪಡಿ) ಮಸೂದೆ, 2024 ಅನ್ನು ಕೇಂದ್ರ ಸರ್ಕಾರ ತಕ್ಷಣವೇ ಹಿಂತೆಗೆದುಕೊಳ್ಳುವ ಮೂಲಕ ದೇಶದ ಸರ್ವಾನುಮತದ ಅಭಿಪ್ರಾಯಗಳನ್ನು ಗೌರವಿಸಬೇಕು ಎಂದು ಈ ಸದನವು ಸರ್ವಾನುಮತದಿಂದ ಒತ್ತಾಯಿಸುತ್ತದೆ ಎಂದು ಹೆಚ್.ಕೆ.ಪಾಟೀಲ್ ಹೇಳಿದರು.

ಬಿಜೆಪಿ ಶಾಸಕರು ಮಸೂದೆಗೆ ತಮ್ಮ ವಿರೋಧ ವ್ಯಕ್ತಪಡಿಸಿದರು ಮತ್ತು ಇದು 'ಮಿತಿ ಮೀರಿದ ಓಲೈಕೆ' ಎಂದು ಟೀಕಿಸಿದರು. ನಾವು ಈ ನಿರ್ಣಯವನ್ನು ವಿರೋಧಿಸುತ್ತೇವೆ. ಈ ಸರ್ಕಾರ 'ಪಾಕಿಸ್ತಾನ'ವನ್ನು ಬೆಂಬಲಿಸುತ್ತದೆ ಮತ್ತು ಇದು ಮುಸ್ಲಿಂ ತುಷ್ಟೀಕರಣದ ಪರಮಾವಧಿ ಎಂದು ಬಿಜೆಪಿ ಶಾಸಕರೊಬ್ಬರು ಹೇಳಿದರು.

ವಕ್ಫ್ ಮಂಡಳಿಯ ಪರವಾಗಿ ಭೂ ದಾಖಲೆಗಳನ್ನು ಬದಲಾಯಿಸಿದ್ದರೂ ಆಡಳಿತಾರೂಢ ಕಾಂಗ್ರೆಸ್ ರೈತರ ನೋವಿಗೆ ಸ್ಪಂದಿಸುತ್ತಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲಾತಿ

ಸಿಎಂ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಲೋಕಸಭೆಯಲ್ಲಿ ತೇಜಸ್ವಿ ಸೂರ್ಯ ವಾಗ್ದಾಳಿ



ನವದೆಹಲಿ, ಮಾ.19– ಕರ್ನಾಟಕದಲ್ಲಿ ಸರ್ಕಾರಿ ಟೆಂಡರ್‌ಗಳಲ್ಲಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ ನೀಡುವ ಮಸೂದೆಯನ್ನು ಸಿದ್ದರಾಮಯ್ಯ ಸರ್ಕಾರ ಮಂಡಿಸಿದೆ. ಈ ವಿಚಾರ ಬುಧವಾರ ಲೋಕಸಭೆಯಲ್ಲಿ ಭಾರೀ ಚರ್ಚೆಗೆ ಸಾಕ್ಷಿಯಾಯಿತು.

ಬಿಜೆಪಿ ಸದಸ್ಯರಾದ ಡಾ.ನಿಶಿಕಾಂತ್ ದುಬೆ ಹಾಗೂ ತೇಜಸ್ವಿ ಸೂರ್ಯ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಶೂನ್ಯ ವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ ನಿಶಿಕಾಂತ್ ದುಬೆ ಅವರು, ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು. ಇದರ ಬಳಿಕ ಮಾತನಾಡಿದ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ, ಸರ್ಕಾರಿ ಟೆಂಡರ್‌ಗಳಲ್ಲಿ ಶೇ. 4ರಷ್ಟು ಮೀಸಲಾತಿ ಕಲ್ಪಿಸುವ ಮೂಲಕ ಕರ್ನಾಟಕ ಕಾಂಗ್ರೆಸ್ ಸರ್ಕಾರವು ಅತಿಯಾದ ಮುಸ್ಲಿಂ ತುಷ್ಟೀಕರಣಕ್ಕೆ ಮುಂದಾಗಿದ್ದು, ಸೆಕ್ಯುಲರ್ ಸರ್ಕಾರಗಳು ಈ ರೀತಿ ಧರ್ಮದ ಆಧಾರದ ಮೇಲೆ ಓಲೈಸುವ ಕ್ರಮಗಳನ್ನು ಕೈಗೊಳ್ಳುವ ಯಾವುದೇ ಅಧಿಕಾರ ಹೊಂದಿರುವುದಿಲ್ಲ. ಈಗಾಗಲೇ ನಿಷೇಧಕ್ಕೆ ಒಳಗಾಗಿರುವ ಪಿಎಫ್‌ಐ ಮತ್ತು ಕೆಎಫ್‌ಡಿಯಂತಹ ಸಮಾಜ ಘಾತುಕ ಶಕ್ತಿಗಳ ಕೈಗಳನ್ನು ಇನ್ನಷ್ಟು ಭದ್ರಪಡಿಸುವ ಹುನ್ನಾರ ಇದಾಗಿದೆ. ಸಿದ್ದರಾಮಯ್ಯ ಸರ್ಕಾರದ ಮುಸ್ಲಿಂ ಮೀಸಲಾತಿ ವಿಧೇಯಕವು ಅಸಂವಿಧಾನಿಕವಾಗಿದ್ದು, ಈ ವಿಧೇಯಕವನ್ನು ಕೂಡಲೇ ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿದರು.

ಡಾ.ಭಾನುಪ್ರಕಾಶ್ ಶರ್ಮ ಗೆಲುವಿಗೆ ಮೈಸೂರಲ್ಲಿ ಒಗ್ಗಟ್ಟಿನ ಪ್ರಯತ್ನವಾಗಬೇಕು

ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಕರೆ



ಮೈಸೂರಿನ ಅಗ್ರಹಾರದಲ್ಲಿ ಜಿಲ್ಲಾ ಮತ್ತು ನಗರ ಬ್ರಾಹ್ಮಣ ಸಂಘದಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣಾ ಕಚೇರಿ ಉದ್ಘಾಟಿಸಲಾಯಿತು.

ಮೈಸೂರು, ಮಾ.19(ಎಂಕೆ)– ವೈದಿಕ ವಿದ್ವಾಂಸ ಡಾ.ಭಾನುಪ್ರಕಾಶ್ ಶರ್ಮ ಅವರನ್ನು ಗೆಲ್ಲಿಸಲು ಮೈಸೂರಿನಲ್ಲಿ ಒಗ್ಗಟ್ಟು ಅವಶ್ಯವಾಗಿದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಕರೆ ನೀಡಿದರು.

ಮೈಸೂರಿನ ಅಗ್ರಹಾರದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆ ಸಂಬಂಧ ತೆರೆದಿರುವ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷೀಯ ಚುನಾವಣೆ ಏ.13 ರಂದು ನಡೆಯಲಿದ್ದು, ಮಹಾಸಭಾದ ಹಾಲಿ ಅಧ್ಯಕ್ಷ ಹಾಗೂ ಮಾಜಿ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿ ಅವರ ಬೆಂಬಲಿತ ಅಭ್ಯರ್ಥಿ ಡಾ. ಭಾನುಪ್ರಕಾಶ್ ಶರ್ಮ ಅವರಿಗೆ ಬೆಂಬಲ ನೀಡುವಂತೆ ತಿಳಿಸಿದರು.

ಕಳೆದ 30 ವರ್ಷಗಳಿಂದ ವೈದಿಕ ಧರ್ಮದ ವೃತ್ತಿಯಲ್ಲಿ ತೊಡಗಿರುವ ಡಾ.ಭಾನುಪ್ರಕಾಶ್ ಶರ್ಮ, ಮೈಸೂರು ಭಾಗದಲ್ಲಿ ಮನೆ ಮಾತಾಗಿದ್ದಾರೆ. ವಿಶ್ವ ಹಿಂದೂ ಪರಿಷತ್, ಕರ್ನಾಟಕ ಸರ್ಕಾರದ ಬ್ರಾಹ್ಮಣ ಅಭಿವೃದ್ಧಿ ಪ್ರಾಧಿಕಾರ, ಶ್ರೀರಂಗಪಟ್ಟಣ ತಾಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಹಲವು ಸಂಘ–ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಧರ್ಮ ನಿರತ ಅಭ್ಯರ್ಥಿಯನ್ನು ಬೆಂಬಲಿಸೋಣ ಎಂದು ಕರೆ ನೀಡಿದರು.

ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ರಾಜ್ಯಾಧ್ಯಕ್ಷ ಸ್ಥಾನಕ್ಕೆ ಡಾ.ಭಾನುಪ್ರಕಾಶ್ ಶರ್ಮ, ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಡಿ.ಟಿ.ಪ್ರಕಾಶ್ ಹಾಗೂ ಬ್ರಾಹ್ಮಣ ಯುವ ವೇದಿಕೆಗೆ ಕಡಕೊಳ ಜಗದೀಶ್ ಅವರನ್ನು ಸಹ ಬೆಂಬಲಿಸಬೇಕೆಂದು ಮನವಿ ಮಾಡಿದರು. ಮೇಲುಕೋಟೆ ವೆಂಗಿಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಬ್ರಾಹ್ಮಣ ಸಂಘದ ಗ್ರಾಮಾಂತರ ಅಧ್ಯಕ್ಷ ಗೋಪಾಲರಾವ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಹೆಚ್.ಎನ್.ಶ್ರೀಧರ್ ಮೂರ್ತಿ, ಮುಖಂಡರಾದ ಸೂರ್ಯನಾರಾಯಣ, ನಾಗೇಂದ್ರ ರವಿಶಂಕರ್, ನಾಗರಾಜ್, ಶ್ರೀನಿವಾಸ್ ಭಾಷ್ಯಂ, ಸುಧೀಂದ್ರ, ಜ್ಯೋತಿ, ಲತಾ ಬಾಲಕೃಷ್ಣ ಮತ್ತಿತರರಿದ್ದರು.

ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿಗೆ ಸನ್ಮಾನ



ಮೈಸೂರಿನ ಕನ್ನೇಗೌಡನ ಕೊಪ್ಪಲು ಪೈಲ್ವಾನ್ ಬಸವಯ್ಯ ವೃತ್ತದ ಶ್ರೀ ಸಿದ್ದಪ್ಪಾಜಿ ದೇವಸ್ಥಾನದಲ್ಲಿ ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ರಾಜೇಶ್, ರವಿ, ಕುಮಾರ. ರಾಜಣ್ಣ, ನಿಂಗಪ್ಪ ಗುಡ್ಡಪ್ಪ ಕುಮಾರ್ ರಮೇಶ್ ಹಾಜರಿದ್ದರು.

ಗೃಹಲಕ್ಷ್ಮಿ ಹಣ 4 ಸಾವಿರಕ್ಕೆ ಏರಿಕೆ: ಕುಣಿಗಲ್ ಶಾಸಕ ರಂಗನಾಥ್ ಘೋಷಣೆ



ಬೆಂಗಳೂರು, ಮಾ.19– ವಿಧಾನ ಸಭೆಯಲ್ಲಿ ಮಾತನಾಡಿದ ಕುಣಿಗಲ್ ಶಾಸಕ ರಂಗನಾಥ್, ಗೃಹಲಕ್ಷ್ಮೀ ಯೋಜನೆಯನ್ನು ವಿರೋಧಿಸುವವರಿಗೆ ಜನರ ಶಾಪ ತಟ್ಟುತ್ತದೆ. 2028 ರಲ್ಲಿ ನಮ್ಮದೇ ಸರ್ಕಾರ ಬಂದರೆ ಗೃಹಲಕ್ಷ್ಮೀ ಹಣವನ್ನು 2 ಸಾವಿರದಿಂದ 4 ಸಾವಿರಕ್ಕೆ ಏರಿಕೆ ಮಾಡುವುದಾಗಿ ಘೋಷಿಸಿದ್ದಾರೆ.

ವಿಧಾನಸಭೆಯಲ್ಲಿ ಗ್ಯಾರಂಟಿ ಯೋಜನೆಯ ಬಗ್ಗೆ ಮಾತನಾಡಿದ ರಂಗನಾಥ್, ಗೃಹಲಕ್ಷ್ಮಿ ಯೋಜನೆಯಿಂದ ಏನಾಗುತ್ತೆ ಎಂದು ಕೆಲವರು ಪ್ರಶ್ನೆ ಮಾಡುತ್ತಿದ್ದಾರೆ. ಬಡವರಿಗೆ ಪ್ರತಿವರ್ಷ 24,000 ರೂ. ಕೊಟ್ಟರೆ ಅವರ ಬದುಕಿನಲ್ಲಿ ಬದಲಾವಣೆ ಬರುತ್ತದೆ. ಗೃಹಲಕ್ಷ್ಮಿ ಯೋಜನೆಯನ್ನು ವಿರೋಧಿಸಿದರೆ ಜನರ ಶಾಪ ತಟ್ಟುತ್ತದೆ. ಮುಂದೆ ಸರ್ಕಾರ ಬದಲಾವಣೆ ಆದರೂ ಗ್ಯಾರಂಟಿ ಯೋಜನೆ ನಿಲ್ಲಿಸಲು ಅಸಾಧ್ಯ. 2028 ರಲ್ಲಿ ನಮ್ಮ ಸರ್ಕಾರ ಬಂದರೆ ಗೃಹಲಕ್ಷ್ಮಿ ಹಣವನ್ನು 2 ಸಾವಿರದಿಂದ 4 ಸಾವಿರಕ್ಕೆ ಏರಿಕೆ ಮಾಡಲಿದ್ದೇವೆ ಎಂದು ಘೋಷಣೆ ಮಾಡಿದ್ದಾರೆ.

ಇದೇ ವೇಳೆ ಜನಗಣತಿ ಆಧಾರದ ಮೇಲೆ ಕ್ಷೇತ್ರ ಪುನರ್ ವಿಂಗಡಣೆಗೆ ವಿರೋಧ ವ್ಯಕ್ತಪಡಿಸಿದ ರಂಗನಾಥ್, ಕೇಂದ್ರ ಸರ್ಕಾರದ ಕುಟುಂಬ ಕಲ್ಯಾಣ ಯೋಜನೆ ಜಾರಿ ಮಾಡಿದ್ದೇವೆ. ದಕ್ಷಿಣ ಭಾರತದ ರಾಜ್ಯಗಳು ಜಾರಿ ಮಾಡಿವೆ. ಮನೆಗೆ ಎರಡೇ ಮಕ್ಕಳ ಮೂಲಕ ಕಡಿವಾಣ ಹಾಕಿದ್ದೇವೆ. ಆದರೆ, ಕೇಂದ್ರ ಸರ್ಕಾರ ಜನಗಣತಿ ಆಧಾರ ಮೇಲೆ ಕ್ಷೇತ್ರ ವಿಂಗಡಿಸುತ್ತಿದೆ. ಇದರಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ ಆಗಲಿದೆ. ಉತ್ತರಪ್ರದೇಶ, ಬಿಹಾರ ರಾಜ್ಯಗಳಿಗೆ ಲಾಭವಾಗಲಿದೆ. ಕೇಂದ್ರ ಸರ್ಕಾರ ಜನಗಣತಿ ಆಧಾರ ಮೇಲೆ ಕ್ಷೇತ್ರ ಪುನರ್ ವಿಂಗಡಣೆ ಮಾಡಬಾರದು ಎಂದು ಒತ್ತಾಯ ಮಾಡಿದ್ದಾರೆ.

ಈ ವೇಳೆ ಸ್ವ ಪಕ್ಷದ ಸಚಿವ ರಾಜಣ್ಣ ಮೇಲೆ ಆಕ್ರೋಶ ಹೊರಹಾಕಿದ ರಂಗನಾಥ್, ಜಿಲ್ಲಾ ಉಸ್ತುವಾರಿ ಸಚಿವ ಪರಮೇಶ್ವರ್ ಅಭಿವೃದ್ಧಿಗೆ ಸಹಕಾರ ನೀಡುತ್ತಾರೆ. ಆದರೆ, ಸಹಕಾರ ಸಚಿವರ ಸಹಕಾರ ಸಿಗುತ್ತಿಲ್ಲ ಎಂದು ಹೇಳುವ ಮೂಲಕ ಪರೋಕ್ಷವಾಗಿ ರಾಜಣ್ಣ ವಿರುದ್ಧ ಶಾಸಕ ರಂಗನಾಥ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರು ಅರಮನೆ ಮಂಡಳಿ ಕಚೇರಿಯಲ್ಲಿ ಲೋಕಾಯುಕ್ತ ಪೊಲೀಸರ ಪರಿಶೀಲನೆ

ಮೈಸೂರು, ಮಾ.19(ಎಂಕೆ)– ಮೈಸೂರು ಅರಮನೆ ಮಂಡಳಿ ಕಚೇರಿ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ಟಿಕೆಟ್ ಕಲೆಕ್ಷನ್ ವಹಿವಾಟು ಕುರಿತು ಪರಿಶೀಲನೆ ನಡೆಸಿದ್ದಾರೆ.

ಅರಮನೆ ಪ್ರವೇಶ ಟಿಕೆಟ್ ಕಲೆಕ್ಷನ್ ಸಂಬಂಧ' ದೂರಿನ ಮೇರೆಗೆ ಮಂಗಳವಾರ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ಸುಮಾರು ನಾಲ್ಕು ಗಂಟೆಗಳ ಕಾಲ ಶೋಧ ಕಾರ್ಯ ನಡೆಸಿದ್ದಾರೆ. 2024ರಲ್ಲಿಯೂ ಅರಮನೆ ಮಂಡಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿತ್ತು. ಮತ್ತೆ ದೂರು ಬಂದ ಹಿನ್ನಲೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಅಡಿಯಲ್ಲಿ ತನಿಖೆ ನಡೆಯುತ್ತಿದೆ. ತನಿಖೆ ಪೂರ್ಣಗೊಂಡ ಬಳಿಕ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಳೆದ ವರ್ಷವೂ ಪರಿಶೀಲನೆ ನಡೆದಿತ್ತು. ಲೋಕಾಯುಕ್ತ ಅಧಿಕಾರಿಗಳು ಕೇಳುವ ಮಾಹಿತಿಯನ್ನು ನೀಡಿ ಸಹಕರಿಸುತ್ತಿದ್ದೇವೆ ಎಂದರು.

ಇಂದು ವಿಕಲಚೇತನ ವ್ಯಕ್ತಿಗಳ ಕುಂದುಕೊರತೆ ಸಭೆ

ಮೈಸೂರು, ಮಾ.19– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಮೈಸೂರು ಜಿಲ್ಲೆಯ ವಿಕಲಚೇತನ ವ್ಯಕ್ತಿಗಳ ಕುಂದುಕೊರತೆಗಳನ್ನು ಶೀಘ್ರ ಇತ್ಯರ್ಥಗೊಳಿಸುವ ಸಲುವಾಗಿ, ತ್ವರಿತ ಕ್ರಮ ಕೈಗೊಳ್ಳಲು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾರ್ಚ್ 20 ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಸಭೆಯನ್ನು ಏರ್ಪಡಿಸಲಾಗಿದೆ.

ಮಾನಸ ಯುವ ಸಂವರ್ಧನೆ-2025 ಸಮಾರೋಪ

ಮತ್ತೆ ಮತ್ತೆ ಪರೀಕ್ಷೆ ಎದುರಿಸುವುದರಿಂದ ಯಶಸ್ಸು ಕಟ್ಟಿಟ್ಟಬುತ್ತಿ

- ಐಎಸ್‌ಡಿ ಮಂಗಳೂರು ವಿಭಾಗದ ಪೊಲೀಸ್ ಅಧೀಕ್ಷಕ ಎ.ಎನ್.ಪ್ರಕಾಶ್ ಗೌಡ ಕಿವಿಮಾತು
- ಗುರಿ ಇದ್ದರೆ ಸಾಧನೆ ಸಾಧ್ಯವಿದೆ; ಪರಿಶ್ರಮಕ್ಕೆ ಯಶಸ್ಸು ಸಿಕ್ಕೇ ಸಿಗುತ್ತೆ



'ಮಾನಸ ಯುವ ಸಂವರ್ಧನೆ–2025' ಸಮಾರೋಪದಲ್ಲಿ ಐಎಸ್‌ಡಿ ಮಂಗಳೂರು ವಿಭಾಗದ ಪೊಲೀಸ್ ಅಧೀಕ್ಷಕ ಎ.ಎನ್.ಪ್ರಕಾಶ್ ಗೌಡ ಮಾತನಾಡಿದರು.

ಮೈಸೂರು, ಮಾ.19(ಎಂಕೆ)– ಐದೇ ಹುದ್ದೆ ಇದ್ದರೂ ಆ ಐದರಲ್ಲಿ ಮೊದಲ ಸ್ಥಾನ ನನ್ನದೇ ಆಗಿರಬೇಕೆಂಬ ಗುರಿಯೊಂದಿಗೆ ಕಠಿಣ ಪರಿಶ್ರಮ ಪಟ್ಟರೆ ಯಶಸ್ಸು ಲಭಿಸುತ್ತದೆ ಎಂದು ಐಎಸ್‌ಡಿ ಮಂಗಳೂರು ವಿಭಾಗದ ಪೊಲೀಸ್ ಅಧೀಕ್ಷಕ ಎ.ಎನ್. ಪ್ರಕಾಶ್ ಗೌಡ ಕಿವಿಮಾತು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಆಯೋಜಿಸಿದ್ದ 'ಮಾನಸ ಯುವ ಸಂವರ್ಧನೆ–2025' ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಯಶಸ್ಸನ್ನು ಪಡೆಯಲು ಒಂದು ದೊಡ್ಡ ಗುರಿ ಇಟ್ಟುಕೊಳ್ಳಬೇಕು. ಆಗ ಮಾತ್ರ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಸಾಧಿಸುವ ಪ್ರಯತ್ನಗಳಲ್ಲಿ ವಿಫಲವಾದರೂ ಎದೆಗುಂದದೆ ಮುನ್ನಡೆಯಬೇಕು, ಪುನಃ ಪ್ರಯತ್ನಿಸಬೇಕು ಎಂದು ಹೇಳಿದರು.

ವ್ಯಾಪಾರವಿರಲಿ, ವ್ಯವಸಾಯವಿರಲಿ ಪ್ರತಿಯೊಂದು ಕ್ಷೇತ್ರಕ್ಕೂ ಅದರದೇ ಆದಂತಹ ಮಹತ್ವವಿರಲಿದ್ದು, ನಮ್ಮ ಆಯ್ಕೆ ಯಾವುದು ಎಂಬುದು ಬಹಳ ಮುಖ್ಯವಾಗುತ್ತದೆ. ವಿವಿಧ ಇಲಾಖೆಗಳಲ್ಲಿ ಹಲವು ಬಗೆಯ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯುತ್ತವೆ. ಇದಕ್ಕಾಗಿ ಒಂದೆರಡು ವರ್ಷ ತರಬೇತಿ ಪಡೆದು ಉತ್ತೀರ್ಣರಾಗದಿದ್ದರೆ, ನಿರಾಶೆಯಿಂದ ಮನೆಯಲ್ಲಿ ಕೂರುವ ಬದಲು ಮತ್ತೆ ಮತ್ತೆ ಪರೀಕ್ಷೆಗಳನ್ನು ಬರೆಯಬೇಕು. ಪರೀಕ್ಷೆಗಳು ನಮ್ಮನ್ನು ಮತ್ತಷ್ಟು ಪರಿಣಿತರನ್ನಾಗಿಸುತ್ತದೆ.

ಸಾಕಷ್ಟು ಮಂದಿ ಅಪ್ಲಿಕೇಶನ್ ಸಲ್ಲಿಸಲು ಇರುವ ಸಮಯದಲ್ಲಿ ಕೊನೆಯ ದಿನದವರೆಗೂ ಕಾದು ಹಾಕುವ ಪ್ರವೃತ್ತಿಯನ್ನು ಬಿಡಬೇಕು. ಅರ್ಜಿ ಕರೆದ ಕೂಡಲೇ ಸಲ್ಲಿಸಿ, ಪೂರ್ವಸಿದ್ಧತೆ ನಡೆಸುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಪ್ರತಿಕ್ಷಣ ನಡೆಯುವ ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳಬೇಕು. ಪತ್ರಿಕೆಗಳು, ಟಿವಿ ಮಾಧ್ಯಮಗಳಲ್ಲಿ ಬರುವ ಮಾಹಿತಿ, ನಮ್ಮ ಸುತ್ತಮುತ್ತಲಿನ ಸಂಗತಿಗಳ ಸಂಗ್ರಹ ಮಾಡಿ ನಾಳೆ ಮಾಡುವಂತಹ ಕೆಲಸಕ್ಕೆ ಅಥವಾ ಪರೀಕ್ಷೆಗೆ ಇವತ್ತೇ ಸಿದ್ಧರಾಗಿದ್ದರೆ, ಸ್ಪರ್ಧಾತ್ಮಕ ಪರೀಕ್ಷೆಗಳ ಉತ್ಸಾಹದಿಂದ ಬರೆಯಬಹುದು. ಇಂತಹ ಉತ್ಸಾಹವನ್ನು ಕೊನೆಯವರೆಗೂ ಇಟ್ಟುಕೊಂಡರೆ, ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಬಹುದು ಎಂದು ಸಲಹೆ ನೀಡಿದರು.

ಮಾಹಿತಿ ಹಂಚಿಕೆ ಒಳಿತು: ಪರೀಕ್ಷೆ ಸಿದ್ಧತೆಯಲ್ಲಿ ಸ್ನೇಹಿತರೊಂದಿಗೆ ಮುಕ್ತವಾಗಿ ಮಾಹಿತಿ ಹಂಚಿಕೊಳ್ಳಬೇಕು. ಜ್ಞಾನದ ವಿನಿಮಯವಾಗಬೇಕು. ಇದರಿಂದ ಕೆಲ ಗೊಂದಲಗಳು ಬಗೆಹರಿಯಲಿವೆ. ಅವಕಾಶಗಳು ಸಿಗಬಹುದು, ಸಿಗದೇ ಇರಬಹುದು. ಪ್ರಯತ್ನಶೀಲರಾಗಿ ಮುನ್ನುಗ್ಗುವ ಮನಸ್ಸು ಮಾಡಬೇಕು ಎಂದರು.

ಅವಕಾಶಗಳ ಆಯ್ಕೆ ಮುಖ್ಯ: ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವರಾದ ಎಂ.ಕೆ ಸವಿತಾ ಅವರು ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಸಾಕಷ್ಟು ಅವಕಾಶಗಳು ಕಣ್ಣಮುಂದಿದ್ದು, ತಮ್ಮ ಅಧ್ಯಯನ, ಕಲಿಕಾ ಆಸಕ್ತಿಗೆ ಅನುಗುಣವಾಗಿ ಆಯ್ಕೆಯೂ ಮುಖ್ಯವಾಗುತ್ತದೆ. ಜ್ಞಾನಾರ್ಜನೆಗಾಗಿ ಪತ್ರಿಕೆಗಳನ್ನು ದಿನ ಓದಬೇಕು. ಹಾಗೆಯೇ ಇಂಗ್ಲಿಷ್ ಮುಖ್ಯವಾಗಿದ್ದು, ಬಹುಭಾಷೆ ಕಲಿಯುವತ್ತಲೂ ಗಮನ ಹರಿಸಬೇಕು. ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಎನ್.ಕೆ. ಲೋಕನಾಥ್, ಕುಲಸಚಿವ(ಪರೀಕ್ಷಾಂಗ)ಎನ್.ನಾಗರಾಜು. ಮಾನಸ ಯುವ ಸಂವರ್ಧನೆ–2025 ಸಲಹಾ ಸಮಿತಿ ಅಧ್ಯಕ್ಷ ಪ್ರೊ. ಡಿ.ಆನಂದ್ ಉಪಸ್ಥಿತರಿದ್ದರು.

ಇಂದು ಬಜೆಟ್ ಸಭೆ

ಮೈಸೂರು,ಮಾ.19– ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮಾರ್ಚ್ 20 ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ಮಹಾನಗರ ಪಾಲಿಕೆಯ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಆಡಳಿತಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಬಜೆಟ್ (ಆಯ್ಯವಯ) ಸಭೆಯನ್ನು ಏರ್ಪಡಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಕಾರ್ಯದರ್ಶಿ (ಪ್ರಭಾರ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಉಪಾಧ್ಯಾಯರು : ಗಣೇಶ, ನೀನು ಯುವಕನಾದ ಮೇಲೆ ಯಾವ ಕೆಲಸಕ್ಕೆ ಸೇರಬೇಕು ಅಂತ ಯೋಚಿಸಿದ್ದೀಯಾ?
ಗಣೇಶ : ಒಬ್ಬ ಉಪಾಧ್ಯಾಯ ಆಗಬೇಕೆಂದು
ಉಪಾಧ್ಯಾಯರು : ಯಾಕೆ?
ಗಣೇಶ : ಯಾಕಂದ್ರೆ, ನನಗೆ ಕಿರುಚುವುದೆಂದರೆ ಬಹಳ ಇಷ್ಟ

ಮೈಸೂರು ಮಿತ್ರ
ಗುರುವಾರ, 20 ಮಾರ್ಚ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಜನ್ಮ ಪೂರ್ತಿ ಪುಸ್ತಕ ಓದಿದೆ ಏನು ಕಲಿಯಲಿಕ್ಕೆ ಆಗಲಿಲ್ಲ. ಹತ್ತಿರದಿಂದ ಕೆಲವು ಮುಖಗಳ ಓದಿದೆ. ನೂರಾರು ಪಾಠ ಕಲಿತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಹೇಳಿದ ಹಾಗೆ.

ನಿಮ್ಮ ಪತ್ರಗಳು

ಅಪ್ಪು ನಿಮಗೆ ನೀವೇ ಸಾಟಿ

ಮಾನ್ಯರೆ,



ಅಬ್ಬಾ! ಏನಿದು ಜನಮನ್ನಣೆ. ಇದುವರೆಗೂ ನಮ್ಮ ರಾಜ್ಯದಲ್ಲಿ ಕಾಲವಾದ ನಂತರ ಇಷ್ಟೊಂದು ಜನಮನ್ನಣೆ ಗಳಿಸಿದ ಮತ್ತೊಬ್ಬ ವ್ಯಕ್ತಿಯನ್ನು ನಾನು ಕಂಡಿಲ್ಲ. ನೀವು ಮತ್ತೇ ಬಾರದೂರಿಗೆ ಇಷ್ಟೊಂದು ಬೇಗ ಹೋಗಿ ಬಿಡುವ ಧಾವಂತವಾದರೂ ಏನಿತ್ತು ಎಂಬುದು ಕನ್ನಡಿಗರಾದ ನಮ್ಮ ಮನಸ್ಸಿನಲ್ಲಿ ಇಂದಿಗೂ ಇದೆ. ನಿಮ್ಮಲ್ಲಿರುವ ಹಾವ, ಭಾವ ಹಾಗೂ ಸೃಜನಶೀಲತೆಯನ್ನು ಕನ್ನಡ ಚಿತ್ರರಂಗದ ಕಲಾವಿದರಲ್ಲಿ ಮತ್ತೊಬ್ಬರಲ್ಲಿ ನಾ ಕಾಣೆ. ನಿಮ್ಮ ನಗುವಂತೂ ಕರ್ನಾಟಕ ರಾಜ್ಯದ ಪ್ರತಿಯೊಬ್ಬರ ಕಿವಿಯಲ್ಲಿ ಈಗಲೂ ಕೇಳಿಸುತ್ತಿದೆ. ನೀವು ನಗುವಿನ ಪರಮಾತ್ಮನೇ ಸರಿ. ಬಾಲಕನಾಗಿದ್ದಾಗಲೇ ತನ್ನ 12ನೇ ವಯಸ್ಸಿಗೆ ಬೆಟ್ಟದ ಹೂವು ಚಲನಚಿತ್ರದ ನಟನೆಗೆ ರಾಷ್ಟ್ರ ಪ್ರಶಸ್ತಿ ಗಳಿಸಿದ ಪ್ರತಿಭಾವಂತ ನಟ. ನೀವು ಇನ್ನೂ ಹೆಚ್ಚಿನ ಕಾಲ ಬದುಕಿದ್ದಿದ್ದರೆ ಎಂತೆಂತಹ ಪ್ರಶಸ್ತಿಗೆ ಭಾಜನರಾಗುತ್ತಿದ್ದಿರೋ ಆ ಭಗವಂತನೇ ಬಲ್ಲ. ಅದಕ್ಕೋಸ್ಕರ ಇರಬೇಕು ಆದಷ್ಟು ಬೇಗ ಅವನ ಬಳಿಗೆ ನಿಮ್ಮನ್ನು ಕರೆದುಕೊಂಡನು. ಪುನೀತ್ ಅವರ 50ನೇ ವರ್ಷದ ಹುಟ್ಟುಹಬ್ಬವನ್ನು ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ನಮ್ಮ ರಾಜ್ಯದ ಪ್ರತಿಯೊಂದು ಹಳ್ಳಿಗಳಲ್ಲೂ ಹಾಗೂ ನಗರ ಪ್ರದೇಶಗಳಲ್ಲೂ ಆಚರಿಸುವ ಮೂಲಕ ಅಪ್ಪು ನೀವು ಇನ್ನೂ ಅಜರಾಮರ ಎಂದು ಸಾಬೀತುಪಡಿಸಿದಂತಿದೆ. ಅತ್ಯುತ್ತಮ ವ್ಯಕ್ತಿಗಳನ್ನು ಭಗವಂತನು ಆದಷ್ಟು ಬೇಗನೆ ತನ್ನ ಬಳಿಗೆ ಕರೆಸಿಕೊಳ್ಳುತ್ತಾನೆ. ಸ್ವಾಮಿ ವಿವೇಕಾನಂದರು, ಬಾಲಕ ದ್ರುವ(ದ್ರುವ ನಕ್ಷತ್ರ) ಹಾಗೂ ನೀವು ಎಂದರೆ ತಪ್ಪಾಗಲಾರದು. ನಿಮ್ಮ ಸೇವಾ ಕಾರ್ಯಗಳನ್ನು ನಿಮ್ಮ ಧರ್ಮಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಮುಂದುವರೆಸಿಕೊಂಡು ಹೋಗುತ್ತಿರುವುದು ತುಂಬಾ ಶ್ಲಾಘನೀಯ.

–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.

ಕನಿಷ್ಠ ಸೌಲಭ್ಯವಾದರೂ ಬೇಕು

ಮಾನ್ಯರೆ,

ರಾಜ್ಯದ ಹಲವಾರು ಪ್ರವಾಸೋದ್ಯಮ ಸ್ಥಳ, ಬಸ್ಸು ನಿಲ್ದಾಣ, ರೈಲು ನಿಲ್ದಾಣ ಹಾಗೂ ಪ್ರಮುಖ ಧಾರ್ಮಿಕ ಸ್ಥಳಗಳಲ್ಲಿರುವ ಪಾರ್ಕಿಂಗ್ ಜಾಗವು ರಸ್ತೆ ಬದಿಗಳಲ್ಲಿಯೇ ಇರುತ್ತದೆ. ಜೊತೆಗೆ ವಾಹನಗಳ ಶುಲ್ಕ ಕಟ್ಟಿಯೂ ಸಹ ಬಿಸಿಲು, ಮಳೆಯಿಂದ ರಕ್ಷಣೆಯೂ ಇಲ್ಲ. ಅದರಲ್ಲಿಯೂ ಶುಲ್ಕವೂ ದುಬಾರಿ, ರಕ್ಷಣೆ ಇಲ್ಲದ ನಮ್ಮ ವಾಹನಗಳಿಗೆ ಶುಲ್ಕವೇಕೆ?

ಕನಿಷ್ಠ ರಕ್ಷಣೆಯಾದರೂ ನೀಡಿ ಶುಲ್ಕ ಭರಿಸಿ ಬೇಸರವಿಲ್ಲ. ಆದರೆ ಸುಖಾಸುಮ್ಮನೆ ರಸ್ತೆ ಬದಿಯಲ್ಲಿ ಅಥವಾ ಸ್ಥಳೀಯ ನೆರೆ ಪ್ರದೇಶದಲ್ಲಿ ವಾಹನಗಳನ್ನು ನಿಲ್ಲಿಸಿಕೊಂಡು ಶುಲ್ಕ ವಸೂಲಿ ಮಾಡುವುದು ಬೇಡವೆಂದು ವಿನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ದಯಮಾಡಿ ಪ್ರವಾಸೋದ್ಯಮ ಇಲಾಖೆ ಹಾಗೂ ಮುಜರಾಯಿ ಇಲಾಖೆಯ ನಿರ್ದೇಶಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ ಸಮಸ್ಯೆ ಬಗೆ ಹರಿಸಬೇಕೆಂದು ಮನವಿ.

–ಪ್ರದೀಪ್, ಯರಗನಹಳ್ಳಿ, ಮೈಸೂರು

ಉದ್ಯಾನವನಗಳಿಗೆ ಭದ್ರತೆ ಅಗತ್ಯ

ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರು ನಗರದಾದ್ಯಂತ ಅನೇಕ ಉದ್ಯಾನವನಗಳಿದ್ದು ಇತ್ತೀಚಿನ ದಿನಗಳಲ್ಲಿ ಕೆಲ ಉದ್ಯಾನವನಗಳಲ್ಲಿ ಯುವಕ ಯುವತಿಯರ ಪುಂಡಾಟಿಕೆಗಳ ಜೊತೆಗೆ ಮೋಜು ಮಸ್ತಿ, ಮಧ್ಯಪಾನ, ಧೂಮಪಾನ, ಮಾದಕ ವಸ್ತುಗಳ ಬಳಕೆಯ ತಾಣವಾಗಿದೆ. ಮುಂಜಾನೆ ಮತ್ತು ಸಂಜೆ ವಾಯು ವಿಹಾರಕ್ಕೆ ಬರುವ ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು, ಗರ್ಭಿಣಿಯರಿಗೆ ಮತ್ತು ಸಾರ್ವಜನಿಕರ ಆರೋಗ್ಯದ ಮೇಲೆ ಇದು ಪರಿಣಾಮ ಬೀರುವಂತಾಗಿದೆ ಮತ್ತು ಜೊತೆಗೆ ಅದರಲ್ಲೂ ಬೆಳ್ಳಗೆ 10 ಗಂಟೆಯಿಂದ ಮಧ್ಯಾಹ್ನ 3:30ರ ವೇಳೆಗಳಲ್ಲಿ ಕೆಲ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಪೋಷಕರಿಗೆ ಶಾಲಾ ಕಾಲೇಜುಗಳ ತೆರಳುತ್ತೇವೆ ಎಂದು ಹೇಳಿ, ಉದ್ಯಾನವನಗಳಿಗೆ ಬಂದು ಸಮಯ ವ್ಯರ್ಥ ಮಾಡುತ್ತಿದ್ದಾರೆ. ಆದ್ದರಿಂದ ನಗರದಲ್ಲಿರುವ ಎಲ್ಲಾ ಉದ್ಯಾನವನಗಳಿಗೆ ಸಮಯ ನಿಗದಿ ಪಡಿಸಿ, ಮತ್ತು ಕಾವಲು ಸಿಬ್ಬಂದಿಗಳನ್ನು ನೇಮಕ ಮಾಡಬೇಕು. ಉದ್ಯಾನವನಗಳಲ್ಲಿ ಅಕ್ರಮ ಚಟುವಟಿಕೆ ನಿಯಂತ್ರಿಸಲು ಸಹಾಯವಾಣಿ ಕೇಂದ್ರ ತೆರೆಯಲು ನಗರ ಪಾಲಿಕೆ ಕ್ರಮ ವಹಿಸುವ ಜೊತೆಗೆ ಉದ್ಯಾನವನಗಳಲ್ಲಿ ಪುಂಡಾಟಿಕೆಗಳಿಗೆ ಕಡಿವಾಣ ಹಾಕುವಂತೆ ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ರನ್ಯಾಳನ್ನು ದುಬೈ ಪೊಲೀಸರಿಗೊಪ್ಪಿಸಿ!

ಮಾನ್ಯರೆ,

ಚಿನ್ನ ಸ್ಮಗ್ಲಿಂಗ್ ಮಾಡಿ ಸಿಕ್ಕಿಬಿದ್ದಿರುವ ರನ್ಯಾ ರಾವ್ ಈಗ ತನಿಖಾಧಿಕಾರಿಗಳೊಂದಿಗೆ ತನಿಖೆಗೆ ಸಹಕರಿಸುತ್ತಿಲ್ಲ ಎಂಬ ಸತ್ಯ ಬಯಲಾಗಿದೆ. ಆಕೆ ನಮ್ಮ ಅಧಿಕಾರಿಗಳೊಂದಿಗೆ ತನಿಖೆಗೆ ಸಹಕರಿಸುವಂತೆ ಮಾಡುವುದು ಹೇಗೆ? ಇದಕ್ಕಿರುವುದು ಒಂದೇ ಉಪಾಯ!

ರನ್ಯಾ ರಾವ್ ಅಪರಾಧ ಎಸಗಿರುವುದು ದುಬೈನಲ್ಲಿ! ಆಕೆ ವಂಚಿಸಿರುವುದು ದುಬೈ ಪೊಲೀಸರನ್ನು. ಆದರೆ ಆಕೆ ಸಿಕ್ಕಿಹಾಕಿಕೊಂಡಿರುವುದು ಮಾತ್ರ ಬೆಂಗಳೂರಿನಲ್ಲಿ. ಅಕಸ್ಮಾತ್ ಆಕೆ ದುಬೈ ವಿಮಾನ ನಿಲ್ದಾಣದಲ್ಲಿಯೇ ಸಿಕ್ಕಿಹಾಕಿಕೊಂಡಿದ್ದರೆ ಆಕೆಯು ಮರಣದಂಡನೆಯಿಂದ ತಪ್ಪಿಸಿಕೊಳ್ಳಲು ಖಂಡಿತಾ ಸಾಧ್ಯವಾಗುತ್ತಿರಲಿಲ್ಲ. ಆಕೆ ದುಬೈ ಪೊಲೀಸರಿಂದ ತಪ್ಪಿಸಿಕೊಂಡು ಬಂದು ಬೆಂಗಳೂರು ತಲುಪಿ ಕರ್ನಾಟಕದ ಅಧಿಕಾರಿಗಳ ಕೈಗೆ ಸಿಕ್ಕಿಹಾಕಿಕೊಂಡಿರುವುದರಿಂದ ಆಕೆಯ ಜೀವ ಉಳಿದುಕೊಂಡಿದೆ. ಆಕೆಯು ಎಸಗಿದ ಈ ಅಪರಾಧದಲ್ಲಿ ಯಾರ ಯಾರ ಕೈವಾಡ ಇದೆ ಎಂಬ ಸತ್ಯವನ್ನು ಆಕೆಯು ಬಾಯಿ ಬಿಡದಿದ್ದರೆ ಆಕೆಯನ್ನು ದುಬೈ ಪೊಲೀಸರಿಗೆ ಒಪ್ಪಿಸುವುದು ಸೂಕ್ತ! ಈ ವಿಚಾರವಾಗಿ ಭಾರತ ಸರಕಾರ ಕ್ರಮ ಕೈಗೊಳ್ಳಲು ಪ್ರಯತ್ನ ಪಟ್ಟ ಮರುಕ್ಷಣವೇ ಆಕೆ ಸಂಪೂರ್ಣ ಸತ್ಯವನ್ನು ಬಾಯಿಬಿಡುವುದರಲ್ಲಿ ಅನುಮಾನವೇ ಇಲ್ಲ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

ಅಗ್ನಿಪರೀಕ್ಷೆಯಲ್ಲೂ ಗೆದ್ದು ಬೀಗಿದ ಭಾಗೀರಥಿಯರು



ಏರಿಯಲ್ ಡ್ಯುರಾಂಟ್



ಐರೀನ್ ಜೋಲಿಯೋ ಕ್ಯೂರಿ



ಆಗ್ನೊಡೈಸ್



ಜೇಮ್ಸ್ ಬ್ಯಾರಿ



ಲೀ ಮೇಟ್ನರ್



ಎಲಿಜಬೆತ್ ಬ್ಲಾಕ್ವೆಲ್

ವಿಲ್ ಡ್ಯುರಾಂಟ್ ತನ್ನ ORIGIN OF SCIENCE ಎನ್ನುವ ಪ್ರಬಂಧದಲ್ಲಿ ಮಹಿಳೆಯರು ಪ್ರಪಂಚದ ಮೊದಲ ವೈದ್ಯರು ಎಂದು ಉಲ್ಲೇಖಿಸಿದ್ದಾರೆ. ನಾವು ಸ್ವಲ್ಪ ಮುಂದೆ ಹೋಗಿ ಮಹಿಳೆಯರೇ ಈ ಪ್ರಪಂಚದ ಮೊದಲ ವಿಜ್ಞಾನಿಗಳು ಎಂದರೆ ಅದು ಅತಿಶಯೋಕ್ತಿ ಖಂಡಿತಾ ಅಲ್ಲ. ಅಡುಗೆಯನ್ನು ಒಂದು ವಿಜ್ಞಾನ ಎಂದು ಎಲ್ಲರೂ ಈಗಾಗಲೇ ಒಪ್ಪಿಕೊಂಡಿರುವುದರಿಂದ ತಕರಾರು ಬರಲಾರದು ಎಂದುಕೊಳ್ಳುತ್ತೇನೆ. ಸ್ವತಃ ತನ್ನ ಹೆಂಡತಿ, ವಿಜ್ಞಾನಿ ಏರಿಯಲ್ ಡ್ಯುರಾಂಟ್‌ನ ಸಹಭಾಗಿತ್ವದಲ್ಲಿ History of Civilisation ನಂತಹ ಮಹತ್ಕೃತಿಯನ್ನು ರಚಿಸಿದ್ದ ವಿಲ್‌ನ ಲೇಖನಿಯಿಂದ ಇಂತಹ ವಾಸ್ತವವಾದ ಮಾತು ಹೊರಬೀಳುವುದು ಶಕ್ಯವೇ.

ಆದರೂ ವಿಜ್ಞಾನಿ ಎಂದರೆ ನಮ್ಮ ಕಣ್ಣ ಮುಂದೆ ಒಬ್ಬ ಗಂಡಸು ಪ್ರಯೋಗಾಲಯದಲ್ಲಿ ಕೆಲಸ ಮಾಡುತ್ತಿರುವ ಚಿತ್ರಣ ಕಣ್ಣಿಗೆ ಕಟ್ಟುತ್ತದೆಯೇ ಹೊರತು, ಮಹಿಳೆಯರ ಚಿತ್ರ ಅಪ್ಪಿ ತಪ್ಪಿಯೂ ಸುಳಿಯುವುದಿಲ್ಲ. ಈ ವಿಜ್ಞಾನ ದಿನ ಬಂದಾಗ, ಅದಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳಬೇಕು ಎಂದಾಗ ಕೂಡ, ಬೋಸ್, ಕಲಾಂ, ರಾಮನ್, ಸಾರಾಭಾಯ್ ನೆನಪಾಗುತ್ತಾರೆಯೇ ಹೊರತು, ಯಾವ ಮಹಿಳಾ ವಿಜ್ಞಾನಿಯ ಹೆಸರೂ ಥಟ್ಟನೆ ಹೊಳೆಯುವುದೇ ಇಲ್ಲ. ಮುಂಚಿನಿಂದಲೂ ಪಠ್ಯಗಳಲ್ಲಿ ಪುರುಷ ವಿಜ್ಞಾನಿಗಳ ಬಗ್ಗೆಯೇ ಹೆಚ್ಚು ಓದಿದ ಪರಿಣಾಮವೂ ಇರಬಹುದು. ಏನೇ ಆದರೂ ಮಹಿಳಾ ವಿಜ್ಞಾನಿಗಳ ಬಗ್ಗೆ ನಮಗೆ ಹೆಚ್ಚು ತಿಳಿದಿಲ್ಲ ಎನ್ನುವ ಅಂಶ ಮಾತ್ರ ಸ್ಪಷ್ಟ.

STEM-Science Technology Engineering Maths ಎಂದು ಕರೆಯಲ್ಪಡುವ ವಿಜ್ಞಾನ ಕುರಿತಾದ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗಿಯಾಗುವಿಕೆ ಅಥವಾ ಪಾತ್ರ ಸ್ವಲ್ಪ ಕಡಿಮೆಯೇ. ಇಂದು ಭಾರತದಲ್ಲಿ ಕೇವಲ 10% ಮಹಿಳೆಯರು ಮಾತ್ರ ಸಂಶೋಧನಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಎಂಜಿನಿಯರಿಂಗ್, ಮೆಡಿಕಲ್ ಮತ್ತು ವಿವಿಗಳಲ್ಲಿ ಹೆಚ್ಚು ಅಂಕಗಳನ್ನು ಗಳಿಸುವವರು, ಚಿನ್ನದ ಪದಕಕ್ಕೆ ಕೊರಳೊಡ್ಡುವವರು ಮಹಿಳೆಯರೇ ಆಗಿದ್ದರೂ ಸಕ್ರಿಯ ಪಾತ್ರ ವಹಿಸುವಲ್ಲಿ ಅವರ ಸಂಖ್ಯೆ ಕಡಿಮೆ. ಕಾರಣ ಬಹುಶಃ ನಮಗೆಲ್ಲರಿಗೂ ತಿಳಿದೇ ಇದೆ. ಮಹಿಳೆಯೇ ಮನೆ ನಡೆಸಬೇಕು, ಅಡುಗೆ ಮಾಡಬೇಕು, ಮಕ್ಕಳನ್ನು ನೋಡಿಕೊಳ್ಳಬೇಕು ಎಂಬ ಆರ್ಷೇಯ ಭಾವನೆ ಇನ್ನೂ ಜೀವಂತವಿರುವುದರಿಂದ.

ಅಂಕಿ–ಅಂಶಗಳನ್ನು ಗಮನಿಸಿದರೆ, ಮಹಿಳೆಯರು ಹಿಂದೆ ಬಿದ್ದಿರುವುದೂ ಅಥವಾ ಅವರಿಗೆ ಹೆಚ್ಚು ಮನ್ನಣೆ ಸಿಕ್ಕಿಲ್ಲದಿರುವುದು ಕಣ್ಣಿಗೆ ರಾಚುತ್ತದೆ. ನಾಸಾದಲ್ಲಿ 10% ಮಹಿಳಾ ಗಗನಯಾತ್ರಿಗಳಿದ್ದಾರೆ. 28% ಕಾರ್ಯಕಾರಿ ಅಧಿಕಾರಿಗಳಿದ್ದಾರೆ ಮತ್ತು 16% ಸಂಶೋಧಕರಿದ್ದಾರೆ. ಎಲ್ಲಿಯೂ 30% ದಾಟಿಲ್ಲ. ನೊಬೆಲ್ ಪಡೆದ ಒಟ್ಟು ಮಹಿಳೆಯರ ಸಂಖ್ಯೆ 66. ಅದರಲ್ಲೂ ವಿಜ್ಞಾನ ಕ್ಷೇತ್ರದಲ್ಲಿ ಕೇವಲ 24 ಮಂದಿ. ಎರಡು ಬಾರಿ ನೊಬೆಲ್ ಪಡೆದ ಮೇರಿ ಕ್ಯೂರಿ ಅವರ ಮಗಳು ಐರೀನ್ ಜೋಲಿಯೋ ಕ್ಯೂರಿ ಕೂಡಾ ಕೆಮಿಸ್ಟ್ರಿಯಲ್ಲಿ ತನ್ನ ಪತಿಯೊಂದಿಗೆ ಸೇರಿ ನಡೆಸಿದ ಸಂಶೋಧನೆಗಾಗಿ ನೊಬೆಲ್ ಪಡೆದಿದ್ದಾರೆ. ನೊಬೆಲ್ ಪಡೆದ ಏಕೈಕ ಅಮ್ಮ– ಮಗಳ ಜೋಡಿಯಾಗಿ ಅವರ ಹೆಸರು ಇತಿಹಾಸದಲ್ಲಿ ದಾಖಲಾಗಿದೆ.

ನಮ್ಮ ಇಸ್ರೋ ಅನ್ನೇ ತೆಗೆದುಕೊಂಡರೆ, ಮಹಿಳಾ ವಿಜ್ಞಾನಿಗಳ ಸಂಖ್ಯೆ ಅಲ್ಲಿ 20% ಅನ್ನೂ ದಾಟುವುದಿಲ್ಲ. ಜೊತೆಗೆ ಇಸ್ರೋ ಇನ್ನೂ ಒಬ್ಬ ಮಹಿಳಾ ಅಧ್ಯಕ್ಷರನ್ನು ಕಂಡಿಲ್ಲ. ಭಾರತದಲ್ಲಿ ಕೊಡಮಾಡುವ ಅತ್ಯುನ್ನತ ವಿಜ್ಞಾನ ಪ್ರಶಸ್ತಿ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ ಪಡೆದುಕೊಂಡ 552 ವಿಜ್ಞಾನಿಗಳಲ್ಲಿ ಮಹಿಳಾ ವಿಜ್ಞಾನಿಗಳ ಸಂಖ್ಯೆ ಕೇವಲ 19! ಆದರೆ ಖಂಡಿತವಾಗಿ ಪರಿಸ್ಥಿತಿ ನಿರಾಶಾದಾಯಕವಾಗಿಲ್ಲ. ನಮ್ಮ ಭಾರತದಲ್ಲಿ 14% ಮಹಿಳೆಯರು ಅನೇಕ ವೈಜ್ಞಾನಿಕ ಸಂಶೋಧನೆಗಳಲ್ಲಿ ತೊಡಗಿದ್ದಾರೆ. ಬಹಳಷ್ಟು ಮುಂದುವರಿದ ದೇಶಗಳಲ್ಲಿ ಇಷ್ಟೂ ಇಲ್ಲ ಎಂಬುದು ಅಚ್ಚರಿಯ ವಿಷಯ.

2023ರಲ್ಲಿ ನಡೆದ 108ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮಾವೇಶದ ಘೋಷವಾಕ್ಯ 'ಮಹಿಳೆಯರ ಸಶಕ್ತೀಕರಣಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ' ಎಂಬುದು. 2015ರಿಂದ ಫೆಬ್ರವರಿ 11 ಅನ್ನು ಅಂತಾರಾಷ್ಟ್ರೀಯ ಮಹಿಳಾ ಮತ್ತು ಮಕ್ಕಳ ವಿಜ್ಞಾನ ದಿನವನ್ನಾಗಿ ವಿಶ್ವಸಂಸ್ಥೆ ಆಚರಿಸುತ್ತಿರುವುದೇ, ಸ್ಟೆಮ್ ಅಲ್ಲಿ ಮಹಿಳೆಯರಿಗೂ ಪೂರ್ಣ ಪ್ರಾತಿನಿಧ್ಯ ದೊರೆಯಬೇಕೆಂದು.

ಗಂಡು ತತ್ವಜ್ಞಾನ ಎಂದು ವಿಜ್ಞಾನವನ್ನು ಕರೆದು, ಆ ಕ್ಷೇತ್ರದಲ್ಲಿ ಪುರುಷರ ಪಾರಮ್ಯ ಸಾಧಿಸಿದ್ದು ಎಷ್ಟು ನಿಜವೋ, ಅಷ್ಟೇ ನಿಜ ಮಹಿಳೆಯರ ಅಗಾಧ ಕೊಡುಗೆ ಇರುವುದು. ತನಗಿರುವ ನಿರ್ಬಂಧಿತ ವಾತಾ ವರಣದಲ್ಲಿಯೇ ಮಹಿಳೆ ವಿಜ್ಞಾನ ಕ್ಷೇತ್ರದಲ್ಲೂ ಅಪರಿಮಿತವಾದ ಸಾಧನೆ ಗೈದಿದ್ದಾಳೆ. ಅದಕ್ಕಾಗಿ ತನ್ನ ಜೀವನವನ್ನೇ ಮುಡಿಪಿಟ್ಟಿದ್ದಾಳೆ, ಜೀವ ಪಣಕ್ಕೆ ಒಡ್ಡಿದ್ದಾಳೆ. ತಾನು ಹಗಲಿರುಳು ಶ್ರಮಿಸಿ ಮಾಡಿದ ಶೋಧನೆ ಯನ್ನು, ಕುಟಿಲತೆಯಿಂದ ಪುರುಷ ಹೈಜಾಕ್ ಮಾಡಿದ್ದನ್ನು ನೋಡಿದ್ದಾಳೆ.

> ಇಂದು ಎಲ್ಲಾ ಕ್ಷೇತ್ರಗಳ ತರಹ ಮಹಿಳೆ ವಿಜ್ಞಾನ ಕ್ಷೇತ್ರದಲ್ಲೂ ತನ್ನ ಛಾಪನ್ನು ಮೂಡಿಸಿದ್ದಾಳೆ. ದೊಡ್ಡ ದೊಡ್ಡ ಯೋಜನೆಗಳಲ್ಲಿ ತನ್ನ ಮಹತ್ತರವಾದ ಕೊಡುಗೆಗಳನ್ನು ನೀಡುತ್ತಾ ಬಂದಿದ್ದಾಳೆ. ಇಂದಿನ ತನ್ನ ಯಶಸ್ವೀ ದಿನಗಳನ್ನು ನೋಡುವುದಕ್ಕೆ ಆಕೆ ಕ್ರಮಿಸಿದ ಹಾದಿ ಸುಲಭದ್ದಾಗಿರಲಿಲ್ಲ. ಪುರುಷ ಪ್ರಧಾನವಾದ ಸಮಾಜದಿಂದ ಪ್ರಬಲವಾದ ವಿರೋಧವನ್ನು ಆಕೆ ಎದುರಿಸಬೇಕಾಗಿದ್ದು ಇತಿಹಾಸದಲ್ಲಿನ ಕಪ್ಪು ಅಧ್ಯಾಯವೆಂದೇ ಹೇಳಬಹುದು.

ಇಂದು ಎಲ್ಲ ಕ್ಷೇತ್ರಗಳ ತರಹ ಮಹಿಳೆ ವಿಜ್ಞಾನ ಕ್ಷೇತ್ರದಲ್ಲೂ ತನ್ನ ಛಾಪನ್ನು ಮೂಡಿಸಿದ್ದಾಳೆ. ದೊಡ್ಡ ದೊಡ್ಡ ಯೋಜನೆಗಳಲ್ಲಿ ತನ್ನ ಮಹತ್ತರವಾದ ಕೊಡುಗೆಗಳನ್ನು ನೀಡುತ್ತಾ ಬಂದಿದ್ದಾಳೆ. ಇಂದಿನ ತನ್ನ ಯಶಸ್ವೀ ದಿನಗಳನ್ನು ನೋಡುವುದಕ್ಕೆ ಆಕೆ ಕ್ರಮಿಸಿದ ಹಾದಿ ಸುಲಭ ದ್ದಾಗಿರಲಿಲ್ಲ. ಪುರುಷ ಪ್ರಧಾನವಾದ ಸಮಾಜದಿಂದ ಪ್ರಬಲವಾದ ವಿರೋಧವನ್ನು ಆಕೆ ಎದುರಿಸಬೇಕಾಗಿದ್ದು ಇತಿಹಾಸದಲ್ಲಿನ ಕಪ್ಪು ಅಧ್ಯಾಯವೆಂದೇ ಹೇಳಬಹುದು. ಭಾರತೀಯ ಮಹಿಳಾ ವಿಜ್ಞಾನಿಗಳ ಬಗ್ಗೆ ಮಾತನಾಡುವುದಕ್ಕೆ ಮುನ್ನ, ಪಶ್ಚಿಮದ ಮಹಿಳಾ ವಿಜ್ಞಾನಿಗಳ ಬಗ್ಗೆ ಮಾತನಾಡಲೇಬೇಕಾಗುತ್ತದೆ. ಹಾಗಾಗಿ ಯುರೋಪ್, ಅಮೆರಿಕಾದ ಮಹಿಳಾ ವಿಜ್ಞಾನಿಗಳ ಬಗ್ಗೆ ಒಂದಷ್ಟು ಹೇಳುವುದು ಅಗತ್ಯ.

ಈಗ ನಾವು ಪಶ್ಚಿಮವನ್ನು ಮುಂದುವರಿದ ಸಮಾಜದ ಉದಾಹರಣೆ ಕೊಡಲು ಬಳಸುತ್ತೇವೆಯಾದರೂ, ಕೇವಲ 50–60 ವರುಷಗಳ ಹಿಂದೆ ಕೂಡ, ಪಶ್ಚಿಮದಲ್ಲಿ ಲಿಂಗ ಸಮಾನತೆ ಮರೀಚಿಕೆಯಾಗಿತ್ತು ಎಂದರೆ ನೀವು ನಂಬಲೇಬೇಕು. ಬ್ರಿಟಿಷ್ ವಿಜ್ಞಾನ ಕೇಂದ್ರವಾದ ರಾಯಲ್ ಸೊಸೈಟಿ ಮತ್ತು ಫ್ರಾನ್ಸ್‌ನ ವಿಜ್ಞಾನ ಅಕ್ಯಾಡೆಮಿಗಳು ಮಹಿಳಾ ವಿಜ್ಞಾನಿಗಳನ್ನು ತನ್ನ ಹೊಸಿಲು ತುಳಿಯಲೂ ಬಿಟ್ಟಿರಲಿಲ್ಲ.

ಪ್ರಾಚೀನ ಕಾಲದಲ್ಲಿ ಸ್ತ್ರೀಯರಿಗೆ ಎಲ್ಲ ಬಗೆಯ ಶಿಕ್ಷಣದ ಅವಕಾಶವಿತ್ತು. ಈಜಿಪ್ಟ್ ಮತ್ತು ಗ್ರೀಕ್‌ನ ಇತಿಹಾಸದಲ್ಲಿ ಹಲವಾರು ಮಹಿಳಾ ವಿಜ್ಞಾನಿಗಳ ಸಾಧನೆಗಳ ಉಲ್ಲೇಖ ನಮಗೆ ದೊರಕುತ್ತದೆ. ವೈದ್ಯಳಾಗಿದ್ದ ಮೆರಿಟ್ ತಾ, ಗಣಿತಜ್ಞೆಯಾಗಿದ್ದ ಕಾರ್ತೇಜ್‌ನ ಎಲಿಸ್ಸರ್ ಡಿಡೋ, ಅಲೆಕ್ಸಾಂಡ್ರಿಯಾದ ಹಿಪಾಶಿಯಾ, ಜರ್ಮನಿಯ ಹೈಲ್ಡ್ ಗಾರ್ಡ್ ಎಂಬ ವೈದ್ಯೆ. ಸ್ತ್ರೀರೋಗಗಳಲ್ಲದೆ, ಚರ್ಮ ಶಾಸ್ತ್ರ, ಮೂರ್ಛೆ ರೋಗಗಳ ಚಿಕಿತ್ಸೆ ಯಲ್ಲೂ ಸಾಕಷ್ಟು ಪರಿಣತಿ ಗಳಿಸಿದ್ದ ಟ್ರೋಟ್ಯುಲಾ ಪ್ಲತೀರಿಯಸ್ ಹೀಗೆ.

ಗ್ರೀಕ್‌ನಲ್ಲಿ ಆಗ್ನೊಡೈಸ್ ಎಂಬಾಕೆ ವೈದ್ಯಕೀಯದಲ್ಲಿ ಆಸಕ್ತಿ ಹೊಂದಿದ್ದಳು. ಆದರೆ ಹೆಣ್ಣು ಆಗ ವೈದ್ಯಳಾಗುವಂತಿರಲಿಲ್ಲ. ಅದಮ್ಯ ಕುತೂಹಲಿಯಾಗಿದ್ದ ಆಕೆ, ಪುರುಷನ ವೇಷ ಧರಿಸಿ ಗ್ರೀಕ್‌ನ ಪ್ರಸಿದ್ಧ ವೈದ್ಯ ಹಿರೋಫಿಲಿಸ್‌ನ ತರಗತಿಗಳಿಗೆ ಹಾಜರಾಗಿ ವೈದ್ಯಕೀಯ ಕಲಿತಳು. ಪುರುಷ ವೇಷದಲ್ಲಿಯೇ ಚಿಕಿತ್ಸೆಯನ್ನೂ ನೀಡುತ್ತಿದ್ದಳು. ಗುಟ್ಟು ಬಯಲಾದಾಗ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಯಿತು. 1795ರಲ್ಲಿ ಜನಿಸಿದ್ದ ಜೇಮ್ಸ್ ಬ್ಯಾರಿ, ತನ್ನ ಜೀವನದುದ್ದಕ್ಕೂ ಗಂಡಸಿನ ವೇಷದಲ್ಲಿಯೇ ಇದ್ದು, ವೈದ್ಯಳಾಗಿ ಮಿಲಿಟರಿಯಲ್ಲಿ ಸೇವೆ ಸಲ್ಲಿಸಿದ್ದಳು. ಮರಣಾನಂತರವೇ ಆಕೆ ಸ್ತ್ರೀ ಎಂಬುದು ಜಗತ್ತಿಗೆ ತಿಳಿದದ್ದು. ಹೆನ್ರಿಟಾ ಫೇಬರ್ ಹಾಗೆ ಗಂಡುವೇಷದಲ್ಲಿ ಸೇವೆ ಸಲ್ಲಿಸುತ್ತಿದ್ದವಳು, ತನ್ನ ಮದುವೆಯ ಸಂದರ್ಭದಲ್ಲಿ ಗುಟ್ಟು ರಟ್ಟಾಗಿ ತೀವ್ರ ಶಿಕ್ಷೆಗೆ ಗುರಿಯಾದಳು.

1543ರಲ್ಲಿ ಕೊಪರ್ನಿಕಸ್ ತನ್ನ ಸೂರ್ಯಕೇಂದ್ರಿತ ಸಿದ್ಧಾಂತವನ್ನು ಪ್ರಕಟಿಸುವುದರ ಜೊತೆಗೆ ಪ್ರಾರಂಭವಾದ ಆಧುನಿಕ ವೈಜ್ಞಾನಿಕ ಕ್ರಾಂತಿ, ಮುಂದೆ ಪುರುಷರ ಹಾಗೆ ಮಹಿಳೆಯರನ್ನೂ ಆಕರ್ಷಿಸಿತು. ಆದರೆ ಕಠಿಣವಾದ ಸಾಮಾಜಿಕ ಕಟ್ಟುಪಾಡುಗಳು ಮಹಿಳೆಯರನ್ನು ಮುನ್ನೆಲೆಗೆ ಬರದಂತೆ ತಡೆಯಿತು.

ಗಣಿತ–ವಿಜ್ಞಾನಗಳು ಮಹಿಳೆಯರ ಆರೋಗ್ಯಕ್ಕೆ ಮಾರಕ ಎಂದು ನಂಬಿದ್ದ ಸಮಾಜ, ಹೆಂಗಸರಿಗೆ ಅಡುಗೆ, ಕಸೂತಿ, ಹೊಲಿಗೆಯಂತಹ ಕೆಲಸ ಮಾತ್ರ ಹೇಳಿಮಾಡಿಸಿದ್ದು ಎಂದು ಬಲವಾಗಿ ಪ್ರತಿಪಾದಿಸುತ್ತಿದ್ದ ಕಾಲದಲ್ಲಿಯೇ, ಮಹಿಳೆಯರು ಸಂಶೋಧನೆಗಳಲ್ಲಿ ತೊಡಗಿಸಿಕೊಂಡು ಹೊಸ ಹೊಸ ಆವಿಷ್ಕಾರಗಳನ್ನು ಮಾಡುತ್ತಿದ್ದರು ಎಂಬುದು ಅಚ್ಚರಿ ಹುಟ್ಟಿಸಬಹುದು.

18ನೇ ಶತಮಾನದ ಆದಿಯಲ್ಲಿಯೇ, ಅಮೆರಿಕೆಯ ಪೆನ್ಸಿಲ್ವೇನಿಯಾದ ಸಿಬಿಲ್ಲಾ ಎಂಬ ರೈತ ಮಹಿಳೆ, ಮುಸುಕಿನ ಜೋಳದಿಂದ ಕಾಳುಗಳನ್ನು ಬೇರ್ಪಡಿಸುವ ಯಂತ್ರವನ್ನು ಕಂಡುಹಿಡಿದಿದ್ದಳು. ಆಗಿನ ಸಮಾಜದ ಕಟ್ಟುಪಾಡಿನಂತೆ, ಆಕೆಯ ಗಂಡನ ಹೆಸರಿನಲ್ಲಿ ಅವಳ ಸಂಶೋಧನೆ ಪೇಟೆಂಟ್ ಪಡೆಯಿತು! 1809ರ ನಂತರ ಮಹಿಳೆಯರಿಗೆ ತಮ್ಮ ಹೆಸರಿನಲ್ಲಿ ಪೇಟೆಂಟ್ ಪಡೆಯುವ ಹಕ್ಕು ದೊರೆತದ್ದು. ಮೊದಲನೆಯ ವಿಶ್ವ ಯುದ್ಧದ ಸಂದರ್ಭದಲ್ಲಿ ಆಟೋಮ್ಯಾಟಿಕ್ ಪಿಸ್ತೂಲ್, ಬಾಂಬ್ ಲಾಂಚಿಂಗ್ ವೆಹಿಕಲ್, ಸಬ್‌ಮೆರಿನ್ ಮೈನ್ ನಂತಹ ಆವಿಷ್ಕಾರಗಳ ಮೇಲೆ ಮಹಿಳೆ ಯರು ಪೇಟೆಂಟ್ ಪಡೆದಿದ್ದರು. 50ಕ್ಕೂ ಹೆಚ್ಚು ಪೇಟೆಂಟ್ ಪಡೆದ ಲೂಯಿ ಹೆನ್ರಿ ಅನ್ನು, ಲೇಡಿ ಎಡಿಸನ್ ಎಂದು ಕರೆಯುತ್ತಿದ್ದರು. ಆಧುನಿಕ ರಸಾಯನಶಾಸ್ತ್ರದ ಪಿತಾಮಹ, ಎ.ಎಲ್.ಲಾವೊಸಿಯರ್‌ನ ಎಲ್ಲ ಸಂಶೋಧನೆಗಳಿಗೆ ಆತನ ಪತ್ನಿ ಮೇರಿ ಸಹಾಯಕಳಾಗಿ ದುಡಿದಿದ್ದಾಳೆ.

18ನೇ ಶತಮಾನದ ಹೊತ್ತಿಗೆ ಎಲ್ಲೋ ಸ್ವಲ್ಪ ಬದಲಾದ ವಾತಾ ವರಣ ಮಹಿಳಾ ವಿಜ್ಞಾನಿಗಳ ಸಾಧನೆಗಳನ್ನು ಗುರುತಿಸಿ ಮನ್ನಣೆ ನೀಡುತ್ತಾ ಬಂತು. 18 ಧೂಮಕೇತುಗಳನ್ನು ಕಂಡುಹಿಡಿದ ಹರ್ಷಲ್ ಕ್ಯಾರೋಲೀನ್, ನಂಬರ್ ಥಿಯರಿ ಮತ್ತು ಥಿಯರಿ ಆಫ್ ಎಲಾಸ್ಟಿಸಿಟಿ ರೂಪಿಸಿದ ಸೋಫಿಯಾ ಜರ್ಮೇನ್, ಸುಪ್ರಸಿದ್ಧ ಗಣಿತಜ್ಞೆ ಮೇರಿ ಸೋಮರ್ವಿಲ್ಲೆ, ಅಮೆರಿಕೆಯ ಮೊಟ್ಟ ಮೊದಲ ಅಧಿಕೃತ ವೈದ್ಯ ಪದವಿ ಪಡೆದ ಎಲಿಜಬೆತ್ ಬ್ಲಾಕ್ವೆಲ್(ಜಿನೀವಾ ವೈದ್ಯಕೀಯ ಕಾಲೇಜು), ಫ್ರಾಯ್ಡ್‌ನ ಸ್ತ್ರೀಯರ ಮನಃಶಾಸ್ತ್ರವನ್ನು ತಿರಸ್ಕರಿಸಿ ಹೊಸ ಸಿದ್ಧಾಂತ ಗಳನ್ನು ನೀಡಿದ ಕಾರೆನ್ ಹಾರ್ನಿ(ಪುರುಷರ ಧೋರಣೆಯೇ ಸ್ತ್ರೀಯರ ಮನೋವೈಕಲ್ಯಕ್ಕೆ ಕಾರಣ), ಎರಡು ಬಾರಿ ನೊಬೆಲ್ ಪಡೆದ ಮೇರಿ ಕ್ಯೂರಿ, ಪರಿಸರದ ಮೇಲೆ ಡಿಡಿಟಿಯ ದುಷ್ಪರಿಣಾಮಗಳನ್ನು ನಿರೂಪಿಸಿ, ಡಿಡಿಟಿಯ ನಿಷೇಧಕ್ಕೆ ಕಾರಣಳಾದ ರಾಚೇಲ್ ಕಾರ್ಸನ್, ಕಂಪ್ಯೂಟರ್ ಪ್ರೋಗ್ರಾಮಿಂಗ್ ಕಂಡು ಹಿಡಿದದ್ದು ಆಡಾ ಆಗಸ್ತಾ ಎಂಬುದು ಬಹುತೇಕರಿಗೆ ತಿಳಿದಿಲ್ಲ. ಕಂಪ್ಯೂಟರ್ ಸಾಫ್ಟ್‌ವೇರ್ ಕಂಡುಹಿಡಿಯುವುದರಲ್ಲಿ ಗ್ರೇಸ್ ಹಾಪ್ಪರ್‌ನ ಪಾತ್ರವನ್ನು ಕಡೆಗಣಿಸು ವಂತಿಲ್ಲ. ಇವರೆಲ್ಲರೂ ಅದ್ವಿತೀಯ ಕೊಡುಗೆ ನೀಡಿದವರು. ಇಂದು ಮಹಿಳಾ ವಿಜ್ಞಾನಿಗಳ ಸಂಖ್ಯೆ ಇಷ್ಟರಮಟ್ಟಿಗೆ ಹೆಚ್ಚಾಗಲಿಕ್ಕೆ ಸ್ಫೂರ್ತಿ ತುಂಬಿರುವವರು.

ನಿಮಗೆ ಗೊತ್ತೇ ಇದೆ. ಕೆಲವು ವಸ್ತುಗಳಿಲ್ಲದೆ ಇಂದು ನಾವು ಜೀವನ ಮಾಡುವುದೇ ದುಸ್ತರವಾಗಿಬಿಟ್ಟಿದೆ. ಅಂತಹಾ ಎಷ್ಟೋ ವಸ್ತುಗಳ ಸಂಶೋಧಕಿ ಮಹಿಳೆ! ಕಾರ್‌ನ ವೈಪರ್, ಮೆಡಿಕಲ್ ಸಿರೀಂಜ್, ಐಸ್ಕ್ರೀಮ್ ಮೇಕರ್, ರ್‍ಯಾಫ್ಟ್ ಬೋಟ್, ಮಕ್ಕಳ ಡೈಪರ್, ಫ್ರಿಡ್ಜ್, ಡಿಶ್ ವಾಶರ್, ಪೇಪರ್ ಬ್ಯಾಗ್ ಇವೆಲ್ಲ ಮಹಿಳೆಯರ ಆವಿಷ್ಕಾರವೇ! ಕಾರ್ಲ್ ಬೆನ್ಜ್ ತಯಾರಿಸಿದ ಮೊಟ್ಟ ಮೊದಲ ಮೋಟಾರು ವಾಹನವನ್ನು ಮೊದಲು ಓಡಿಸಿ, ಬ್ರೇಕ್ ಲೈನರ್ ಸೇರಿದಂತೆ ಹಲವಾರು ಆಟೋಮೊಬೈಲ್ ವಸ್ತುಗಳನ್ನು ಅನ್ವೇಷಿಸಿದ್ದು ಆಕೆಯ ಪತ್ನಿ ಬೆರ್ಥಾ ಬೆನ್ಜ್! ಮೂಗಿನ ಮೇಲೆ ಬೆರಳಿಟ್ಟು ಕೊಳ್ಳಬೇಕು ಎನಿಸುತ್ತಿದೆಯೇ? ಇವು ಒಂದೆರಡಷ್ಟೇ.

ತಮ್ಮ ಸಾಧನೆಗಳಿಗೆ ಸೂಕ್ತ ಮನ್ನಣೆ ದೊರಕಿಸಿಕೊಂಡವರ ನಡುವೆಯೇ, ಅತ್ಯಂತ ಘೋರ ಬೌದ್ಧಿಕ ಅತ್ಯಾಚಾರಕ್ಕೆ ಒಳಪಟ್ಟ ಮಹಿಳಾ ವಿಜ್ಞಾನಿಗಳು ಇದ್ದಾರೆಂಬುದು ಕಠೋರ ಸತ್ಯ. ಡಿ.ಎನ್‌ಗಳ ಜೋಡಿ ಸುರುಳಿ ರಚನೆಯನ್ನು ಕಂಡುಹಿಡಿದ ರೋಸಾಲಿಂಡ್ ಫ್ರಾಂಕ್ಲಿನಳಿಗೆ ದೊರಕಬೇಕಾದ ಮನ್ನಣೆ, ಅವಳ ಸಂಶೋಧನೆಯನ್ನು ಅನುಮತಿ ಇಲ್ಲದೆಯೆ ಬಳಸಿಕೊಂಡ ವ್ಯಾಟ್ಸನ್ ಮತ್ತು ಕ್ರಿಕ್ ಜೋಡಿಗೆ ನೊಬೆಲ್ ಪ್ರಶಸ್ತಿಯ ರೂಪದಲ್ಲಿ ದೊರಕುತ್ತದೆ.

ಅಂತೆಯೇ ಮನ್ನಣೆ ಸಿಗದ ಮತ್ತೊಬ್ಬ ವಿಜ್ಞಾನಿ ಲೀ ಮೇಟ್ನರ್ ಯುರೇನಿಯಂ ವಿದಳನವನ್ನು ಪ್ರಪ್ರಥಮವಾಗಿ ಕಂಡುಹಿಡಿದ ಮೇಟ್ನರ್, ಜ್ಯೂ ಆಗಿದ್ದರಿಂದ ಹಿಟ್ಲರ್‌ನ ಹತ್ಯಾಕಾಂಡಕ್ಕೆ ಒಳಗಾಗಲೊಲ್ಲದೆ ಜರ್ಮನಿ ತೊರೆಯುತ್ತಾಳೆ. ಅದನ್ನೇ ಬಳಸಿಕೊಂಡ ಓಟೋಹಾನ್, ಸಂಶೋಧನೆಯನ್ನು ಅಕ್ಷರಶಃ ಹೈಜಾಕ್ ಮಾಡಿ ನೊಬೆಲ್ ಪಡೆಯುತ್ತಾನೆ. ಇವರಿಗೆ ಆದ ಅನ್ಯಾಯ ಕಾಲಾಂತರದಲ್ಲಿ ಎಲ್ಲರ ಗಮನಕ್ಕೆ ಬಂತಾದರೂ, ಅವರುಗಳ ಜೀವಿತ ಕಾಲದಲ್ಲಿ ಪಟ್ಟ ವೇದನೆಗೆ ಹೊಣೆ ಯಾರು?

ಇಂದು ಪಶ್ಚಿಮದಲ್ಲಿ ಪರಿಸ್ಥಿತಿ ಬಹಳಷ್ಟು ಬದಲಾಗಿದೆ.

(ಮುಂದುವರೆಯುವುದು)

ಸುನೀತಾ ವಿಲಿಯಮ್ಸ್, ಬುಚ್ ಸುರಕ್ಷಿತವಾಗಿ ಭೂಮಿಗೆ; ಮೈಸೂರಲ್ಲಿ ಸಂಭ್ರಮಾಚರಣೆ



ಮೈಸೂರಿನ ಶ್ರೀ ದುರ್ಗಾ ಫೌಂಡೇಶನ್‌ನಿಂದ ಸಂಭ್ರಮ ಆಚರಿಸಲಾಯಿತು.

ಮೈಸೂರು, ಮಾ. 19– ಮೈಸೂರಿನ ಅಗ್ರಹಾರದಲ್ಲಿ ಶ್ರೀ ದುರ್ಗಾ ಫೌಂಡೇ ಶನ್ ವತಿಯಿಂದ ಬಾಹ್ಯಾಕಾಶದಿಂದ ಸುರಕ್ಷಿತವಾಗಿ ಭೂಮಿಗೆ ವಾಪಸ್ಸಾಗಿರುವ ಭಾರತೀಯ ಮೂಲದ ನಾಸಾ ಗಗನ ಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಹಾಗೂ ಬುಚ್ ವಿಲ್ಮೋರ್ ಭಾವಚಿತ್ರ ಹಿಡಿದು ಸಂಭ್ರಮಾಚರಿಸಲಾಯಿತು.

ನಂತರ ಮಾತನಾಡಿದ ವೈದ್ಯರಾದ ಡಾ.ಶ್ರೀನಿವಾಸ್ ಆಚಾರ್ಯ, ಸಂಶೋ ಧನೆಯ ನಿಮಿತ್ತ ಒಂದು ವಾರದ ಮಟ್ಟಿಗೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪಯಣ ಬೆಳೆಸಿದ್ದ ಸುನಿತಾ ವಿಲಿಯಮ್ಸ್ ಅವರು ತಾಂತ್ರಿಕ ವೈಫಲ್ಯದಿಂದ ಭೂಮಿಗೆ ಮರಳಲಾಗದೆ 9 ತಿಂಗಳಿಂದ ಬಾಹ್ಯಾಕಾಶದಲ್ಲೇ ಉಳಿಯುವಂತಾಗಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ದಿಟ್ಟತನ ದಿಂದ ಎದುರಿಸಿ, ಅಂತಿಮವಾಗಿ ಸುರಕ್ಷಿತ ವಾಗಿ ಭೂಮಿಗೆ ವಾಪಸ್ ಆಗಿದ್ದಾರೆ. ಇವರ ಸಾಹಸ ಮತ್ತು ಸಾಧನೆ ಅಸಂಖ್ಯಾತ ಯುವ ವಿಜ್ಞಾನಿಗಳಿಗೆ, ಸಂಶೋಧಕರಿಗೆ ಹಾಗೂ ಮಹಿಳೆಯರಿಗೆ ಸ್ಫೂರ್ತಿಯಾಗಿದೆ ಎಂದು ಹೇಳಿದರು.

ಮೈಸೂರು ವಿವಿ ವಿಶ್ರಾಂ ಕುಲಸಚಿವ ಬಾಬುರಾವ್, ಸಾಯಿಬಾಬಾ ದೇವಸ್ಥಾನದ ಅರ್ಚಕ ಮಹೇಶ್‌ಕುಮಾರ್, ಡಾ.ಶ್ರೀನಿವಾಸ್ ಆಚಾರ್ಯ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕಾಂಗ್ರೆಸ್ ಯುವ ಮುಖಂಡ ಸಂತೋಷ್ ಕಿರಾಲು, ಹೇಮಾ ಇನ್ನಿತರರಿದ್ದರು.

ಗೌರವ ಪ್ರಶಸ್ತಿ ; ಪುಸ್ತಕ ಪುರಸ್ಕಾರ

ಮೈಸೂರು, ಮಾ.19– ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಹಾಗೂ ಕೊಂಕ್ಣಿ ಕ್ರಿಶ್ಚಿಯನ್ ಅಸೋಸಿಯೇಷನ್ ಸಹಯೋಗದಲ್ಲಿ ಮೈಸೂರು ವಿಜಯನಗರ, ಎರಡನೇ ಹಂತದಲ್ಲಿರುವ ಕೊಂಕಣಿ ಭವನ ದಲ್ಲಿ ಮಾ.23ರಂದು ಸಂಜೆ 5.30ಕ್ಕೆ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಪುರಸ್ಕಾರ ಸಮಾರಂಭವನ್ನು ಏರ್ಪಡಿಸಲಾಗಿದೆ. ಶಾಸಕ ಕೆಹರೀಶ್ ಗೌಡರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಂಕಿ ಸ್ಟ್ಯಾನಿ ಆಲ್ವಾರಿಸ್ ಅಧ್ಯಕ್ಷತೆ ವಹಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ಕೊಂಕಣಿಯ ಹಿರಿಯ ಸಾಹಿತಿ ವಲೇರಿಯನ್ ಡಿಸೋಜ(ವಲ್ಲಿ ವಗ್ಗ), ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ಭಗವಂತನ ಸ್ಮರಣೆಯಿಂದ ಮನಸು ಸುಂದರ: ರಾಜೇಂದ್ರ ಸ್ವಾಮೀಜಿ



ಹಾರನಹಳ್ಳಿ ಕೋಡಿಮಠದಲ್ಲಿ ಮಹದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ 3ನೇ ದಿನದ ಧಾರ್ಮಿಕ ಸಮಾರಂಭದಲ್ಲಿ ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು.

ಅರಸೀಕೆರೆ: ಮನುಷ್ಯನಿಗೆ ಸುಖ, ಶಾಂತಿ, ನೆಮ್ಮದಿ ಮುಖ್ಯ. ಜೀವನ ನಡೆಸಲು ಮನಸ್ಸು ಸಂತಸದಿಂದ ಕೂಡಿರಬೇಕು. ಮನಸ್ಸು ಸುಂದರವಾಗಿ ಇರಬೇಕಾದರೆ ಭಗವಂತನ ಸ್ಮರಣೆ, ಧ್ಯಾನದಿಂದ ಮಾತ್ರ ಸಾಧ್ಯ ಎಂದು ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಹೇಳಿದರು.

ತಾಲೂಕಿನ ಹಾರನಹಳ್ಳಿ ಕೋಡಿಮಠದಲ್ಲಿ ಮಹದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ 3ನೇ ದಿನದ ಧಾರ್ಮಿಕ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ದೇವಸ್ಥಾನ, ಮಠ– ಮಂದಿರಗಳು ಮನುಷ್ಯನಿಗೆ ನೆಮ್ಮದಿ ನೀಡುವ ತಾಣಗಳಾಗಿವೆ. ಎಲ್ಲರೂ ಒಂದಾಗಿ ದೇವರ ಆರಾಧನೆಯನ್ನು ಶಾಂತಿಯಿಂದ ಆಚರಿಸಿದಾಗ ಸುಖ, ಶಾಂತಿ, ನೆಮ್ಮದಿ ದೊರೆಯುತ್ತದೆ. ಆಧುನಿಕತೆಯ ಪರಿಣಾಮವಾಗಿ ಇಂದಿನ ದಿನಗಳಲ್ಲಿ ಹಿಂದಿನ ಕಾಲದ ಸಂಸ್ಕಾರ ಮರೆಯಾಗುತ್ತಿದೆ. ತಾಯಂದಿರು ಬಾಲ್ಯದಲ್ಲಿಯೇ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು ಎಂದರು.

ತಂದೆ–ತಾಯಿಗಳನ್ನು ಗೌರವದಿಂದ ಕಂಡಾಗ, ಸಮಾಜದ ಶ್ರೇಯಸ್ಸಿಗೆ ದುಡಿದಾಗ, ದೇಶದ ಬಗ್ಗೆ ಅಭಿಮಾನ ಹೊಂದಿದಾಗ, ಗುರುಗಳನ್ನು ಪೂಜ್ಯ ಭಾವನೆಯಿಂದ ನೋಡಿದಾಗ, ದೇವರಲ್ಲಿ ಭಕ್ತಿಯನ್ನು ಸಮರ್ಪಿಸಿದಾಗ ಎಲ್ಲ ಋಣಗಳನ್ನು ತೀರಿಸಲು ಸಾಧ್ಯವಾಗುತ್ತದೆ. ಮನುಷ್ಯನಲ್ಲಿ ಸದ್ಗುಣಗಳು, ನಡೆ–ನುಡಿ ಇತರರಿಗೆ ಮಾದರಿ ಆಗಿರಬೇಕು. ಇವುಗಳು ರೂಢಿಸಿಕೊಳ್ಳಬೇಕಾದರೆ ಗುರುಗಳ ಹಾಗೂ ಭಗವಂತನಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಜಗದ್ಗುರು ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಮಾತನಾಡಿ, ಅಪಾರ ಭಕ್ತ ಸಮೂಹ ಹೊಂದಿರುವ ಕೋಡಿಮಠವು ಇತಿಹಾಸವುಳ್ಳದ್ದಾಗಿದೆ. ಲಕ್ಷಾಂತರ ಭಕ್ತರಿಗೆ, ವಿದ್ಯಾರ್ಥಿಗಳಿಗೆ ದಾರಿದೀಪವಾಗಿ ಸದಾ ಪ್ರಜ್ವಲಿಸುತ್ತಿರುತ್ತದೆ. ಪೀಠಾಧಿಪತಿ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಸಮಾಜದಲ್ಲಿನ ಆಗುಹೋಗುಗಳ ಬಗ್ಗೆ ಭವಿಷ್ಯ ನುಡಿಯುತ್ತ ಸಮಾಜಕ್ಕೆ ಸಂದೇಶ ನೀಡುತ್ತಿರುತ್ತಾರೆ. ಕೋಡಿಮಠದಲ್ಲಿ ಸದಾ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಪ್ರಸಿದ್ಧ ಧಾರ್ಮಿಕ ಸ್ಥಳವಾಗಿದೆ ಎಂದು ಹೇಳಿದರು.

ವೇದಿಕೆಯಲ್ಲಿ ವಿವಿಧ ಸಂಘಗಳು ಭಜನೆಯನ್ನು ನಡೆಸಿಕೊಟ್ಟವು. ಅಭಿನವ ಸಿದ್ಧಾರೂಢ ಸ್ವಾಮೀಜಿ, ಜಯಚಂದ್ರಶೇಖರ ಸ್ವಾಮೀಜಿ, ರುದ್ರಮುನಿ ಸ್ವಾಮೀಜಿ, ಜ್ಞಾನಪ್ರಭು ಸಿದ್ದರಾಮ ದೇಶಿಕೇಂದ್ರ ಸ್ವಾಮೀಜಿ, ತೇಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಮೃತ್ಯುಂಜಯ ಸ್ವಾಮೀಜಿ, ಕಲ್ಲಿನಾಥ ಶಾಸ್ತ್ರಿ ಹಾಗೂ ಉತ್ತರಾಧಿಕಾರಿ ಚೇತನ್ ಮರಿದೇವರು ಹಾಗೂ ಮಠದ ಭಕ್ತರು ಉಪಸ್ಥಿತರಿದ್ದರು.

ಅರಸೀಕೆರೆ ಹಾರನಹಳ್ಳಿ ಕೋಡಿಮಠದಲ್ಲಿ ಮಹದೇಶ್ವರ ಜಾತ್ರೆ ಅಂಗವಾಗಿ 3ನೇ ದಿನದ ಧಾರ್ಮಿಕ ಸಮಾರಂಭದಲ್ಲಿ ದಿವ್ಯ ಸಾನ್ನಿಧ್ಯ ಜಗದ್ಗುರು ಪಂಚಮ ಶಿವಲಿಂಗೇಶ್ವರ ಶ್ರೀಗಳು ಹಾಗೂ ಪೀಠಾಧಿಪತಿ ಶಿವಾನಂದ ಶಿವಯೋಗಿ ರಾಜೇಂದ್ರ ಶ್ರೀಗಳು ಉಪಸ್ಥಿತರಿದ್ದರು.

ಕಾದಾಡಿ ಕಾಳಿಂಗಸರ್ಪ ಕೊಂದು ಪ್ರಾಣ ಬಿಟ್ಟ ಶ್ವಾನ

ಮಾಲೀಕರ ಮಕ್ಕಳು, ಕಾರ್ಮಿಕರ ಜೀವ ಉಳಿಸಿದ ಶ್ವಾನಗಳು




ಹಾಸನ: ತಾಲೂಕಿನ ಕಟ್ಟಾಯ ಗ್ರಾಮದಲ್ಲಿ ಶ್ವಾನಗಳೆರಡು ಕಾಳಿಂಗಸರ್ಪದೊಂದಿಗೆ ಕಾದಾಡಿ ಮಾಲೀಕರ ಮಕ್ಕಳು ಹಾಗೂ ಕೂಲಿ ಕಾರ್ಮಿಕರನ್ನು ಕಾಪಾಡಿದ್ದು, ನೆಚ್ಚಿನ ಶ್ವಾನವೊಂದು ಮೃತಪಟ್ಟಿದೆ.

ಗ್ರಾಮದ ಶಮಂತ್ ಎಂಬುವವರು ತೋಟದಲ್ಲಿ ಪಿಟ್‌ಬುಲ್ ಹಾಗೂ ಡಾಬರ್‌ಮನ್ ನಾಯಿಗಳನ್ನು ಸಾಕಿದ್ದರು. ಮಂಗಳವಾರ ತೋಟದಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾಗ, 12 ಅಡಿ ಉದ್ದದ ಬಿಳಿ ಬಣ್ಣದ ಕಾಳಿಂಗ ಸರ್ಪ ಮನೆ ಬಳಿ ಕಾಣಿಸಿಕೊಂಡಿದೆ. ಆಟವಾಡುತ್ತಿದ್ದ ಮಕ್ಕಳ ಬಳಿಗೆ ಬಂದ ಸರ್ಪ, ನಂತರ ತೆಂಗಿನಗರಿಯ ಕೆಳಗೆ ಅವಿತಿತ್ತು. ಇದನ್ನು ಗಮನಿಸಿದ ಶ್ವಾನಗಳು ಏಕಾಏಕಿ ಕಾಳಿಂಗಸರ್ಪದ ಮೇಲೆ ಎರಗಿವೆ. ಮಾಲೀಕ ಕರೆದರೂ ಬಾರದೇ ಸುಮಾರು 15 ನಿಮಿಷಗಳಿಗೂ ಹೆಚ್ಚು ಸಮಯ ಹಾವಿನ ಜೊತೆಗೆ ಸೆಣಸಾಡಿವೆ. ಈ ವೇಳೆ ಪಿಟ್‌ಬುಲ್ ನಾಯಿಯ ಮುಖಕ್ಕೆ ಹಾವು ಕಚ್ಚಿದೆ. ಆದರೂ ಹಟ ಬಿಡದ ಶ್ವಾನ ನಿರಂತರವಾಗಿ ಹಾವಿನೊಂದಿಗೆ ಸೆಣಸಾಡಿ 12 ಅಡಿ ಉದ್ದದ ಸರ್ಪವನ್ನು 10 ತುಂಡುಗಳಾಗಿ ಮಾಡಿ ಸಾಯಿಸಿವೆ. ಆದರೆ ವಿಷವೇರಿ ಪಿಟ್‌ಬುಲ್ ಶ್ವಾನ ಪ್ರಾಣಬಿಟ್ಟಿದೆ. ಒಂದು ವೇಳೆ ಶ್ವಾನಗಳು ಬಾರದಿದ್ದರೆ, ಕೂಲಿ ಕಾರ್ಮಿಕರು ಅಥವಾ ಮಕ್ಕಳ ಮೇಲೆ ಕಾಳಿಂಗ ಸರ್ಪ ದಾಳಿ ಮಾಡುತ್ತಿತ್ತು. ಶ್ವಾನಗಳ ಸಮಯ ಪ್ರಜ್ಞೆಯಿಂದ ಸಂಭವಿಸಬಹುದಾದ ದುರಂತವೊಂದು ತಪ್ಪಿದಂತಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಪಿಟ್‌ಬುಲ್ ಹಲವಾರು ಶ್ವಾನ ಪ್ರದರ್ಶನದಲ್ಲಿ ಪಾಲ್ಗೊಂಡು ಬಹುಮಾನಗಳನ್ನೂ ಪಡೆದಿತ್ತು. ಮನೆಯ ಮಗನಂತಿದ್ದ ಶ್ವಾನವನ್ನು ಕಳೆದುಕೊಂಡ ಶಮಂತ್ ಕುಟುಂಬ ಹಾಗೂ ಕೂಲಿ ಕಾರ್ಮಿಕರು ಕಣ್ಣೀರಿಟ್ಟಿದ್ದಾರೆ. ಮತ್ತೊಮ್ಮೆ ಹುಟ್ಟಿ ಬಾ ಎಂದು ಸಮಾಧಿ ಬಳಿ ಕಣ್ಣೀರು ಹಾಕುತ್ತಿದ್ದ ದೃಶ್ಯ ಮನ ಕಲಕುವಂತಿತ್ತು. ಜೊತೆಗಾರನನ್ನು ಕಳೆದುಕೊಂಡ ಡಾಬರ್‌ಮನ್ ನಾಯಿಯು ಮೂಕರೋದನೆ ಕರಳು ಹಿಂಡುತ್ತಿತ್ತು ಎಂದು ಕುಟುಂಬದವರು ತಿಳಿಸಿದ್ದಾರೆ.

ನಾಳೆಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಸಿದ್ಧತೆ ಪೂರ್ಣಗೊಂಡಿದೆ: ಬಿಇಓ ಕೃಷ್ಣೇಗೌಡ



ಆಲೂರು: ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಮಾ.21ರಿಂದ ಏ.4 ರವರೆಗೆ ನಡೆಯಲಿದ್ದು, ಸಿದ್ಧತೆ ಪೂರ್ಣಗೊಂಡಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎ.ಜೆ.ಕೃಷ್ಣೇಗೌಡ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಟ್ಟಣದಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜು, ಬೆಥೆಸ್ಡಾ ಪ್ರೌಢಶಾಲೆ, ಬೈರಾಪುರ, ಸರ್ಕಾರಿ ಪ್ರೌಢಶಾಲೆ, ಕಾಮತಿ ಕೂಡಿಗೆ, ಕರ್ನಾಟಕ ಪಬ್ಲಿಕ್ ಶಾಲೆ ರಾಯರಕೊಪ್ಪಲು ಮತ್ತು ಎಸ್.ಕೆ.ಎನ್.ಆರ್.ಎಚ್. ಪ್ರೌಢಶಾಲೆ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಹೇಳಿದರು.

ತಾಲೂಕಿನ ಒಟ್ಟು 18 ಸರ್ಕಾರಿ ಪ್ರೌಢಶಾಲೆಗಳು, 3 ಸರ್ಕಾರಿ ವಸತಿ ಶಾಲೆಗಳು, 4 ಅನುದಾನಿತ ಶಾಲೆಗಳು ಮತ್ತು 9 ಅನುದಾನರಹಿತ ಶಾಲೆಗಳು ಸೇರಿ ಒಟ್ಟು 34 ಪ್ರೌಢಶಾಲೆಗಳ 988 ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗೆ ಹಾಜರಾಗಲಿದ್ದಾರೆ. ತಾಲೂಕು ಹಂತದಿಂದ ಪ್ರತಿ ಪರೀಕ್ಷಾ ಕೇಂದ್ರಕ್ಕೆ ಮುಖ್ಯ ಅಧೀಕ್ಷಕರು, ಪ್ರಶ್ನೆಪತ್ರಿಕೆ ಪಾಲಕರು, ಮೊಬೈಲ್ ಸ್ವಾಧೀನಾಧಿಕಾರಿಗಳು, ಸ್ಥಾನಿಕ ಜಾಗೃತ ದಳ ಹಾಗೂ ಕೊಠಡಿ ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಪ್ರತಿ ಪರೀಕ್ಷಾ ಕೊಠಡಿ ಹಾಗೂ ಪ್ರಶ್ನೆಪತ್ರಿಕೆ ತೆರೆಯುವ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಎಲ್ಲಾ ಪರೀಕ್ಷಾ ಸಿಬ್ಬಂದಿಗೆ ತರಬೇತಿ ನೀಡಲಾಗಿದ್ದು, ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಎಲ್ಲಾ ಶಾಲೆಗಳಲ್ಲಿ ಪೂರ್ವಸಿದ್ಧತಾ ಪರೀಕ್ಷೆಗಳನ್ನು ಸಿಸಿಟಿವಿ ಕ್ಯಾಮೆರಾ ಕಣ್ಗಾವಲಿನಲ್ಲಿ ನಡೆಸಲಾಗಿದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದ ಪರಿಚಯ ಆಗಿದೆ. ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆ ಪ್ರಾರಂಭವಾಗುವ ಒಂದು ಗಂಟೆ ಮೊದಲು ಕೇಂದ್ರಕ್ಕೆ ಹಾಜರಾಗಿ, ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಲು ಸಲಹೆ ನೀಡಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣೇಗೌಡ ತಿಳಿಸಿದರು.

ಕ್ಯಾತಮಾರನಹಳ್ಳಿ ಮಸೀದಿ ವಿವಾದ: ಡಿಸಿ, ಎಸಿಪಿಗೆ ಹೈಕೋರ್ಟ್ ತರಾಟೆ


ಶಾಂತಿ ಸಭೆ ನಡೆಸಿ ಶೀಘ್ರ ವಿವಾದ ಇತ್ಯರ್ಥ: ಜಿ.ಲಕ್ಷ್ಮೀಕಾಂತರೆಡ್ಡಿ

ಮೈಸೂರು, ಮಾ.19(ಆರ್‌ಕೆ)– ಮೈಸೂರಿನ ಕ್ಯಾತಮಾರನಹಳ್ಳಿಯ ಮಸೀದಿಯ ವಿವಾದ ಬಗೆಹರಿಸುವುದು ವಿಳಂಬವಾಗಿರುವುದಕ್ಕೆ ರಾಜ್ಯ ಹೈಕೋರ್ಟ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮತ್ತು ದೇವರಾಜ ಉಪ ವಿಭಾಗದ ಎಸಿಪಿ ಕೆ.ರಾಜೇಂದ್ರ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಉದಯಗಿರಿ ಠಾಣಾ ವ್ಯಾಪ್ತಿಯ ಹಳೇ ಸಾದಿಯಾ ಮಸೀದಿಯ ವಿವಾದವು ಕಾನೂನು–ಸುವ್ಯವಸ್ಥೆಗೆ ಭಂಗ ತರಬಹುದು ಎಂಬ ಹಿನ್ನೆಲೆಯಲ್ಲಿ ಯಥಾಸ್ಥಿತಿ ಕಾಪಾಡುವಂತೆ ಆದೇಶಿಸಿ, ಈ ಸಮಸ್ಯೆಯನ್ನು ಸಂಪೂರ್ಣ ಪರಿಹರಿಸದೇ ಇರುವುದು ಸರಿಯಲ್ಲ ಎಂದು ಹೈಕೋರ್ಟ್, ಜಿಲ್ಲಾಧಿಕಾರಿಗಳಿಗೆ ಮಂಗಳವಾರ ತಾಕೀತು ಮಾಡಿದೆ.

ಮಸ್ಜಿದ್ ಎ ಸಿದ್ದಿಖಿ ಅಕ್ಬರ್ ಟ್ರಸ್ಟ್ ಸಲ್ಲಿಸಿರುವ ಮನವಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಆದೇಶ ಪಾಲನೆ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು, ಗಾಯತ್ರಿಪುರಂ 2ನೇ ಹಂತದಲ್ಲಿರುವ ಹಳೇ ಸಾದಿಯಾ ಶೈಕ್ಷಣಿಕ ಸಂಸ್ಥೆ ಮತ್ತು ಮಸ್ಜಿದ್ ಎ ಸಿದ್ದಿಖಿ ಅಕ್ಬರ್ ಟ್ರಸ್ಟ್‌ನ ಪ್ರತಿನಿಧಿ ಮುನಾವರ್ ಪಾಷಾ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ಪೀಠವು ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಮೊಹಮದ್ ತಾಹೀರ್, ಸರ್ಕಾರವು ಉದ್ದೇಶಪೂರ್ವಕವಾಗಿಯೇ ಸಮಸ್ಯೆ ಬಗೆಹರಿಸಲು ಮನಸ್ಸು ಮಾಡುತ್ತಿಲ್ಲ ಎಂದು ದೂರಿದರು. ಅದನ್ನು ಅಲ್ಲಗಳೆದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಸಿ.ಎಸ್. ಪ್ರದೀಪ್ ಮತ್ತು ಸರ್ಕಾರದ ಪರ ವಕೀಲೆ ನಮಿತಾ ಮಹೇಶ್, ಈ ವಿವಾದ ಇವತ್ತಿನದ್ದಲ್ಲ, ದಶಕಗಳಿಂದ ನನೆಗುದಿಗೆ ಬಿದ್ದಿರುವ ವಿಷಯವಾಗಿದ್ದು, ಇದರ





ಸಂಬಂಧ ನಡೆದ ಗಲಭೆಯಲ್ಲಿ ಸಾವು–ನೋವುಗಳಾಗಿವೆ. ಸುಮಾರು 60 ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದು ವಸ್ತುಸ್ಥಿತಿಯನ್ನು ವಿವರಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಮೂರ್ತಿಗಳು, ವಿಚಾರಣೆ ವೇಳೆ ಖುದ್ದು ಹಾಜರಿದ್ದ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮತ್ತು ಮೈಸೂರು ನಗರದ ದೇವರಾಜ ಉಪ ವಿಭಾಗದ ಎಸಿಪಿ ಕೆ.ರಾಜೇಂದ್ರ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಯಥಾಸ್ಥಿತಿ ಕಾಪಾಡುವ ಆದೇಶವನ್ನೇ ಮುಂದುವರೆಸಿಕೊಂಡು ಹೋಗುತ್ತೇವೆ ಎನ್ನುವುದಾದರೆ ನೀವು ಇರುವುದಾದರೂ ಏಕೆ? ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿಗಳ ಜಿಲ್ಲೆಯಲ್ಲೇ ಕಾನೂನು–ಸುವ್ಯವಸ್ಥೆ ಕಾಪಾಡಿಕೊಂಡು, ಒಂದು ವಿವಾದ ಬಗೆಹರಿಸದಿದ್ದರೆ, ನೀವು ಇನ್ನಾವ ಜಿಲ್ಲೆಯ ಸಮಸ್ಯೆ ಬಗೆಹರಿಸಬಲ್ಲಿರಿ ಎಂದ ನ್ಯಾಯಮೂರ್ತಿಗಳು, ಜಿಲ್ಲಾಧಿಕಾರಿ ಹುದ್ದೆ ಎಂದರೆ ಎಂಜಾಯ್ ಮಾಡುವುದಕ್ಕೆ ಎಂದುಕೊಂಡಿದ್ದೀರಾ? ಎಂದು ಕಿಡಿಕಾರಿದರು.

ಈ ವೇಳೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರು, ಮಸೀದಿ ವಿವಾದ ಬಗೆಹರಿಸಲು ನಾವು ಪ್ರಯತ್ನಿಸುತ್ತಿದ್ದೇವೆ. ಈಗಾಗಲೇ ಸಭೆ ನಡೆಸಿ ಉಭಯತ್ವರಿಯರಿಂದ ಸಲಹೆ, ಅಭಿಪ್ರಾಯ ಪಡೆದು ವಸ್ತುಸ್ಥಿತಿ ಬಗ್ಗೆ ಮಾಹಿತಿ ಸಂಗ್ರಹಿಸಿದ್ದು, ಶೀಘ್ರ ವಿವಾದವನ್ನು ಇತ್ಯರ್ಥಪಡಿಸುತ್ತೇವೆ ಎಂದು ಸಮಜಾಯಿಷಿ ನೀಡಿದರು.

ಜಿಲ್ಲಾಧಿಕಾರಿಗಳ ಮಾತಿಗೆ ದನಿಗೂಡಿಸಿದ ಪ್ರದೀಪ್ ಅವರು, ಶಾಂತಿ ಸಭೆ ನಡೆಸಿದರೆ ಅಲ್ಲಿ ಭಾಗವಹಿಸಿದ್ದವರನ್ನು ಗುರಿ ಮಾಡಿ ತೊಂದರೆ ಕೊಡುತ್ತಾರೆ. ಈ ಪ್ರಕರಣದಲ್ಲಿ ಎರಡೂ ಕೋಮಿನ ಜನರಿಗೂ ಅಪಾಯವಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅಂತಿಮವಾಗಿ ಕೂಡಲೇ ಶಾಂತಿ ಸಭೆ ನಡೆಸಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಮಸ್ಯೆ ಬಗೆಹರಿಸುವ ಬಗ್ಗೆ ಮುಂದಿನ ವಿಚಾರಣೆಯಲ್ಲಿ ಅದರ ವರದಿ ಸಲ್ಲಿಸಿ ಎಂದು ನ್ಯಾಯಪೀಠವು ಸೂಚನೆ ನೀಡಿ, ಪ್ರಕರಣದ ವಿಚಾರಣೆಯನ್ನು ಏಪ್ರಿಲ್ 3ಕ್ಕೆ ಮುಂದೂಡಿತು.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಡಿಸಿ ಲಕ್ಷ್ಮೀಕಾಂತ ರೆಡ್ಡಿ, ಹೈಕೋರ್ಟ್ ಸೂಚನೆಯಂತೆ ಅತಿ ಶೀಘ್ರದಲ್ಲೇ ಶಾಂತಿ ಸಭೆ ಕರೆದು ಚರ್ಚಿಸಿದ ಬಳಿಕ ಸೂಕ್ತ ನಿರ್ಧಾರ ಕೈಗೊಂಡು ಮಸೀದಿ ವಿವಾದವನ್ನು ಬಗೆಹರಿಸಲಾಗುವುದು ಎಂದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಕಂಪನಿ ವತಿಯಿಂದ ಇತ್ತೀಚೆಗೆ ಟಿಕೆಎಂನ ಬಿಡದಿಯ ಉತ್ಪಾದನಾ ಘಟಕದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಈ ವೇಳೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ, ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀಮತಿ ಆರ್.ಲತಾ (ಐಎಎಸ್), ಶ್ರೀಮತಿ ಲತಾ, ಟೊಯೊಟಾ ಕಿರ್ಲೋಸ್ಕರ್ ಮೋಟಾರ್‌ನ ಫೈನಾನ್ಸ್–ಆಡಳಿತ ವಿಭಾಗದ ಕಾರ್ಯನಿರ್ವಾಹಕ ಉಪಾಧ್ಯಕ್ಷ ಜಿ.ಶಂಕರ್ ಮತ್ತಿತರರಿದ್ದರು.

ಇಡಿಯಿಂದ ರಾಜಕಾರಣಿಗಳ ವಿರುದ್ಧ 193 ಪ್ರಕರಣ; ಎರಡರಲ್ಲಿ ಮಾತ್ರ ಶಿಕ್ಷೆ

ನವದೆಹಲಿ,ಮಾ.19–ಕಳೆದ 10 ವರ್ಷಗಳಲ್ಲಿ (2015–2025) ಜಾರಿ ನಿರ್ದೇಶನಾಲಯ (ಇಡಿ) ಸಂಸದರು, ಶಾಸಕರು ಸೇರಿದಂತೆ ರಾಜಕಾರಣಿಗಳ ವಿರುದ್ಧ ಅಕ್ರಮ ಹಣ ವರ್ಗಾವಣೆ ಆರೋಪದಡಿ ಒಟ್ಟು 193 ಪ್ರಕರಣಗಳನ್ನು ದಾಖಲಿಸಿದ್ದು ಈ ಪ್ರಕರಣಗಳಲ್ಲಿ ಕೇವಲ ಇಬ್ಬರಿಗೆ ಮಾತ್ರ ಶಿಕ್ಷೆಯಾಗಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. ಇಡಿ ತನಿಖೆಗೆ ತೆಗೆದುಕೊಂಡ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಆದರೆ ಶಿಕ್ಷೆಯ ಪ್ರಮಾಣ ಕೇವಲ ಶೇ 1ಕ್ಕಿಂತ ಕಡಿಮೆ ಇರುವುದು ಗಮನಾರ್ಹ. ಈ ಅಂಕಿ–ಅಂಶಗಳು ಇಡಿಯ ಕಾರ್ಯವೈಖರಿ ಬಗ್ಗೆ ಚರ್ಚೆಗೆ ಕಾರಣವಾಗಿವೆ. ಕೇಂದ್ರ ಸರ್ಕಾರವು ಇಡಿ ತನಿಖೆಗಳು ವಿಶ್ವಾಸಾರ್ಹ ಸಾಕ್ಷ್ಯಗಳ ಆಧಾರದ ಮೇಲೆ ನಡೆಯುತ್ತವೆ ಮತ್ತು ರಾಜಕೀಯ ಸಂಬಂಧಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಸಮರ್ಥಿಸಿಕೊಂಡಿದೆ. ವಿರೋಧ ಪಕ್ಷಗಳು ಈ ಮಾಹಿತಿಯನ್ನು ಆಧರಿಸಿ ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿವೆ. ಇಡಿ ಎಂಬುದು ಬಿಜೆಪಿ ಸರ್ಕಾರದ ಅಸ್ತ್ರವಾಗಿದ್ದು, ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಿ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಅವರನ್ನು ಮಟ್ಟ ಹಾಕುವ ಪ್ರಯತ್ನ ನಡೆಸುತ್ತಿದೆ ಎಂದು ಆರೋಪಿಸಿವೆ. ಪ್ರಕರಣಗಳ ಸಂಖ್ಯೆ ಹೆಚ್ಚಿದ್ದರೂ ಶಿಕ್ಷೆಯ ಪ್ರಮಾಣ ಅತ್ಯಂತ ಕಡಿಮೆ ಇರುವುದು ಈ ಆರೋಪಕ್ಕೆ ಬಲ ನೀಡಿದೆ ಎಂದು ವಿರೋಧ ಪಕ್ಷಗಳು ವಾದಿಸಿವೆ.

ಎಲ್‌ಕೆಜಿ, ಯುಕೆಜಿ ಮಕ್ಕಳಿಗೂ ಮಧ್ಯಾಹ್ನದ ಬಿಸಿಯೂಟದ ಸವಿ

ಬೆಂಗಳೂರು: ಪ್ರಸ್ತುತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಸೀಮಿತವಾಗಿರುವ ಮಧ್ಯಾಹ್ನದ ಬಿಸಿಯೂಟ ಯೋಜನೆ ಇನ್ನು ಮುಂದೆ ಪೂರ್ವ ಪ್ರಾಥಮಿಕ ಶಾಲೆಗಳಿಗೂ ವಿಸ್ತರಣೆಯಾಗಲಿದೆ. ಮುಂದಿನ ಶೈಕ್ಷಣಿಕ ವರ್ಷದಿಂದಲೇ ಎಲ್‌ಕೆಜಿ, ಯುಕೆಜಿ ಮಕ್ಕಳಿಗೂ ಬಿಸಿಯೂಟ ಸಿಗಲಿದೆ.

ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ, ಹಾಜರಾತಿ ಹಾಗೂ ಕಲಿಕಾ ಸಾಮರ್ಥ್ಯ ಹೆಚ್ಚಿಸುವ ಉದ್ದೇಶದಿಂದ ರಾಜ್ಯ ಸರಕಾರ 2002–03ರಲ್ಲಿ ಪ್ರಾಥಮಿಕ ಶಾಲಾ ಮಕ್ಕಳಿಗಾಗಿ ಮಧ್ಯಾಹ್ನದ ಬಿಸಿಯೂಟ ಯೋಜನೆ ಆರಂಭಿಸಿತು. ನಂತರ ಹಂತ–ಹಂತವಾಗಿ ಅದನ್ನು ಪ್ರೌಢ ಹಾಗೂ ಅನುದಾನಿತ ಶಾಲೆಗಳಿಗೂ ವಿಸ್ತರಿಸಲಾಗಿದೆ. ಪ್ರಸ್ತುತ 1ರಿಂದ 10ನೇ ತರಗತಿ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಈಗ ಪೂರ್ವ ಪ್ರಾಥಮಿಕ ಶಾಲೆಗಳಿಗೂ ಯೋಜನೆಯನ್ನು ವಿಸ್ತರಿಸುವಂತೆ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ರಾಜ್ಯ ಸರಕಾರ ಇತ್ತೀಚೆಗೆ ಆರಂಭಿಸಿರುವ ಎಲ್‌ಕೆಜಿ, ಯುಕೆಜಿ ಶಾಲೆಗಳಿಗೆ ರಾಜ್ಯದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಸದ್ಯ, ಪೂರ್ವ ಪ್ರಾಥಮಿಕ ತರಗತಿಗಳು



ಪ್ರಾಥಮಿಕ ಶಾಲೆಗಳಲ್ಲಿಯೇ ನಡೆಯುತ್ತಿದ್ದರೂ ಆ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟ ಒದಗಿಸಲಾಗುತ್ತಿಲ್ಲ. ಬದಲಿಗೆ ಪ್ರಾಥಮಿಕ ಶಾಲೆ ಮಕ್ಕಳು ಪುಟಾಣಿಗಳೊಂದಿಗೆ ಊಟ ಹಂಚಿಕೊಳ್ಳುತ್ತಿದ್ದಾರೆ. ಹೀಗಾಗಿ ಎಲ್‌ಕೆಜಿ–ಯುಕೆಜಿ ಮಕ್ಕಳಿಗೂ ಬಿಸಿಯೂಟ ಒದಗಿಸಬೇಕೆಂಬ ಉದ್ದೇಶ ಸರಕಾರ ಹೊಂದಿದೆ. ಇದಕ್ಕೆ ಕೇಂದ್ರದಿಂದ ಗ್ರೀನ್ ಸಿಗ್ನಲ್ ದೊರೆತರೆ, ಬರುವ ಶೈಕ್ಷಣಿಕ ವರ್ಷದಿಂದಲೇ ಎಲ್‌ಕೆಜಿ, ಯುಕೆಜಿ ಮಕ್ಕಳಿಗೂ ಬಿಸಿಯೂಟ ಸಿಗಲಿದೆ.

ಪ್ರಸ್ತುತ ರಾಜ್ಯದಲ್ಲಿರುವ 20,174 ಕಿರಿಯ ಪ್ರಾಥಮಿಕ, 21,739 ಹಿರಿಯ ಪ್ರಾಥಮಿಕ ಹಾಗೂ 4,844 ಸರಕಾರಿ ಪ್ರೌಢಶಾಲೆಗಳು ಮತ್ತು 6,320 ಅನುದಾನಿತ ಶಾಲೆಯ 55 ಲಕ್ಷ ವಿದ್ಯಾರ್ಥಿಗಳು ಮಧ್ಯಾಹ್ನದ ಬಿಸಿಯೂಟದ ಪ್ರಯೋಜನ ಪಡೆಯುತ್ತಿದ್ದಾರೆ. ಸರಕಾರಿ ಶಾಲೆಗಳ ಪೈಕಿ 1ರಿಂದ 10ನೇ ತರಗತಿಯ 42.92 ಲಕ್ಷ ಮತ್ತು ಅನುದಾನಿತ ಶಾಲೆಯ 12.32 ಲಕ್ಷ ವಿದ್ಯಾರ್ಥಿಗಳಿದ್ದಾರೆ. ಮುಂದಿನ ಶೈಕ್ಷಣಿಕ ವರ್ಷದಿಂದ ಪೂರ್ವ ಪ್ರಾಥಮಿಕ ಶಾಲಾ ಮಕ್ಕಳ ಸಂಖ್ಯೆ 2 ಲಕ್ಷಕ್ಕೆ ಹೆಚ್ಚಿಸಲಾಗುತ್ತಿದ್ದು, ಅವರಿಗೂ ಯೋಜನೆ ಪ್ರಯೋಜನ ದೊರೆಯಲಿದೆ.

ಪೂರ್ವ ಪ್ರಾಥಮಿಕ ಶಾಲಾ ಮಕ್ಕಳಿಗೂ ಮಧ್ಯಾಹ್ನದ ಬಿಸಿಯೂಟ ಯೋಜನೆ ವಿಸ್ತರಿಸುವಂತೆ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುಮತಿ ದೊರೆತರೆ ಮುಂದಿನ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭಿಸಲಾಗುವುದು. ರಾಜ್ಯದಲ್ಲಿ ಸದ್ಯ 2619 ಸರಕಾರಿ ಪೂರ್ವ ಪ್ರಾಥಮಿಕ ಶಾಲೆಗಳಿದ್ದು, 90,195 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಶಾಲೆಗಳ ಸಂಖ್ಯೆಯನ್ನು 5 ಸಾವಿರಕ್ಕೆ ಹೆಚ್ಚಿಸಲಾಗುತ್ತಿದ್ದು, ವಿದ್ಯಾರ್ಥಿಗಳ ಸಂಖ್ಯೆ 2 ಲಕ್ಷ ತಲುಪಲಿದೆ. ಈಗಾಗಲೇ ಪ್ರಧಾನ ಮಂತ್ರಿ ಪೋಷಣ್ ಯೋಜನೆಯಡಿ ಕೇಂದ್ರ ಸರಕಾರ ಶೇ.60ರಷ್ಟು ಅನುದಾನ ಒದಗಿಸುತ್ತಿದ್ದು, ರಾಜ್ಯ ಸರಕಾರದ ಪಾಲು ಶೇ.40ರಷ್ಟಿದೆ. ಇದೇ ಮಾದರಿಯಲ್ಲಿ ಯೋಜನೆ ವಿಸ್ತರಿಸಿ, 5 ಸಾವಿರ ಪೂರ್ವ ಪ್ರಾಥಮಿಕ ಶಾಲೆಗಳ 2 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವಂತೆ ಕೋರಿದೆ.

ಡಿ.ಮಾದೇಗೌಡರಿಗೆ ಸನ್ಮಾನ...



ಹೋಳಿ ಹಬ್ಬದ ಪ್ರಯುಕ್ತ ಮೈಸೂರಿನ ಸಿರ್ವಿ ಸಮಾಜದ ವತಿಯಿಂದ ವಿಧಾನಪರಿಷತ್ ಮಾಜಿ ಸದಸ್ಯರಾದ ಡಿ.ಮಾದೇಗೌಡ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ವೇಳೆ ಸಮಾಜದ ಮುಖಂಡ ಮೋಹನ್ ಜಿ, ಪದಾಧಿಕಾರಿಗಳು, ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್‌ಕುಮಾರ್ ವಿಷಕಂಠೇಗೌಡ, ಚಂದ್ರಶೇಖರ್ ಇನ್ನಿತರರಿದ್ದರು.

ಬೆಂಗಳೂರಲ್ಲಿ ಗೋಮಾಳ ಜಾಗ ಒತ್ತುವರಿಗೆ ಅಧಿಕಾರಿಗಳೇ ನೆರವು!

ಕಂದಾಯ ಸಚಿವ ಕೃಷ್ಣಭೈರೇಗೌಡ ಅಸಹಾಯಕತೆ

ಬೆಂಗಳೂರು, ಮಾ.19– ಅಕ್ರಮವಾಗಿ ಸರ್ಕಾರಿ ಗೋಮಾಳ ಒತ್ತುವರಿಗೆ ನಮ್ಮ ಅಧಿಕಾರಿಗಳೇ ಸಹಾಯ ಮಾಡುತ್ತಿದ್ದಾರೆ ಎಂದು ಖುದ್ದು ಕಂದಾಯ ಸಚಿವರೇ ಅಸಹಾಯಕತೆ ವ್ಯಕ್ತಪಡಿಸಿದ ಘಟನೆ ವಿಧಾನಪರಿಷತ್‌ನಲ್ಲಿ ಬುಧವಾರ ನಡೆಯಿತು.



ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಜೆಡಿಎಸ್‌ನ ಶರವಣ ಅವರು ಬೆಂಗಳೂರು ನಗರದಲ್ಲಿ 3 ವರ್ಷಗಳಿಂದ ನೂರಾರು ಎಕರೆ ಸರ್ಕಾರಿ ಭೂಮಿ, ಗೋಮಾಳ ಒತ್ತುವರಿ ಆಗಿದೆ. ಈವರೆಗೂ ಸರ್ಕಾರ ಎಷ್ಟು ಎಕರೆ ಜಾಗ ಒತ್ತುವರಿ ತೆರವು ಮಾಡಿದೆ. ಅಧಿಕಾರಿಗಳೇ ಇದರಲ್ಲಿ ಶಾಮೀಲಾಗಿದ್ದಾರೆ. ಒತ್ತುವರಿ ತೆರವು ಮಾಡದಿರಲು ಅಧಿಕಾರಿಗಳ ಮೇಲೆ ಒತ್ತಡ ಇದೆಯಾ, ಅಧಿಕಾರಿಗಳು ಅಕ್ರಮ ಮಾಡುತ್ತಿದ್ದಾರಾ, ಸಚಿವರ ಕ್ಷೇತ್ರದಲ್ಲಿ ಇಂತಹ ಕೇಸ್ ಇದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಒತ್ತುವರಿ ತೆರವು ಮಾಡಬೇಕು ಎಂದು ಆಗ್ರಹ ಮಾಡಿದರು.

ಇದಕ್ಕೆ ಸಚಿವ ಕೃಷ್ಣಭೈರೇಗೌಡ ಉತ್ತರ ನೀಡಿ, ಕೆಲವು ಅಧಿಕಾರಿಗಳಿಂದಲೇ ಒತ್ತುವರಿ ತೆರವು ಆಗುತ್ತಿಲ್ಲ. ಅವರು ಉದ್ದೇಶಪೂರ್ವಕವಾಗಿಯೇ ವ್ಯವಸ್ಥಿತವಾಗಿ ಇಂತಹ ಪ್ರಕರಣಗಳನ್ನು ನಡೆಸುತ್ತಿದ್ದಾರೆ. ಕಾನೂನು ಅಡಿಯಲ್ಲೇ ಕಾನೂನು ವಿರೋಧಿ ಕೆಲಸವನ್ನು ಕೆಲ ಅಧಿಕಾರಿಗಳು ಮಾಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಇಂತಹ ಅಕ್ರಮ ನಡೆದಿದೆ. ಗೋಮಾಳ ಒತ್ತುವರಿ ಮಾಡಿಕೊಂಡಿದ್ದಾರೆ. ಪಂಚಾಯತಿಯವರೇ ಖಾತೆ ಮಾಡಿಕೊಟ್ಟಿದ್ದಾರೆ. ವ್ಯವಸ್ಥಿತವಾಗಿ ಅಕ್ರಮವಾಗಿ ಅಧಿಕಾರಿಗಳ ಬೆಂಬಲದಿಂದ ಒತ್ತುವರಿ ಮಾಡಿಕೊಂಡಿದ್ದಾರೆ. ಇಂತಹ ಕೇಸ್ ಬಗ್ಗೆ ನಾವು ಟ್ರ್ಯಾಕ್ ಮಾಡುತ್ತಿದ್ದೇವೆ. ಸರ್ಕಾರದ ಜಾಗ, ಗೋಮಾಳದ ಜಾಗಕ್ಕೆ ಫೈಟ್ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಶಾಸಕರಿಗೆ ತಿರುಪತಿಯಲ್ಲಿ ದರ್ಶನ ಭಾಗ್ಯ ಕೊಡಿಸಿ

ವಿಧಾನಪರಿಷತ್ ಸದಸ್ಯ ಟಿ.ಎ.ಶರವಣ ಮನವಿ



ಬೆಂಗಳೂರು, ಮಾ.19– ಕರ್ನಾಟಕದ ಶಾಸಕರಿಗೆ ತಿರುಪತಿಯಲ್ಲಿ ದರ್ಶನ ಭಾಗ್ಯ ಕಲ್ಪಿಸಬೇಕು ಎಂದು ವಿಧಾನ ಪರಿಷತ್‌ನಲ್ಲಿ ಜೆಡಿಎಸ್ ಸದಸ್ಯ ಶರವಣ ಮನವಿ ಮಾಡಿದರು. ಶಾಸಕರಿಗೆ ವಾರದಲ್ಲಿ ಮೂರು ದಿನ ದರ್ಶನ ಮಾಡುವ ವ್ಯವಸ್ಥೆ ತಿರುಪತಿಯಲ್ಲಿ ಕಲ್ಪಿಸಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದರು.

ವಿಧಾನಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಮಾತನಾಡಿದ ಶರವಣ, ತಿರುಪತಿಯಲ್ಲಿ ಕರ್ನಾಟಕ ಭವನ ಅತಿಥಿ ಗೃಹ ಅವ್ಯವಸ್ಥೆಯಿಂದ ಕೂಡಿದೆ. 51 ಜನ ಸಿಬ್ಬಂದಿ ಇದ್ದರೂ ಯಾವುದೇ ನಿರ್ವಹಣೆ ಮಾಡುತ್ತಿಲ್ಲ. ಸಿಬ್ಬಂದಿಗಳಿಗೆ ಸಮವಸ್ತ್ರ ಕೊಡಿ. ಹಾಜರಾತಿ ಕಡ್ಡಾಯ ಮಾಡಬೇಕು. ಕರ್ನಾಟಕ ಭವನದಲ್ಲಿ ಅನ್ನದಾಸೋಹ ನಿಲ್ಲಿಸಿದ್ದಾರೆ. ಅದನ್ನ ಪುನರ್ ಪ್ರಾರಂಭ ಮಾಡಬೇಕು ಎಂದು ಶರವಣ ಒತ್ತಾಯಿಸಿದರು.



ತಿರುಪತಿಯಲ್ಲಿ ಕರ್ನಾಟಕದ ಯಾವುದೇ ಶಾಸಕರಿಗೆ ದರ್ಶನ ಭಾಗ್ಯ ಸಿಗುತ್ತಿಲ್ಲ. ತಿರುಪತಿಯಲ್ಲಿ ದರ್ಶನ ಭಾಗ್ಯ ಬೇಕು ಎಂದು ತೆಲಂಗಾಣದ ಶಾಸಕರು ಆಂಧ್ರ ಪ್ರದೇಶದ ಸಿಎಂ ಅವರನ್ನು ಭೇಟಿ ಮಾಡಿ ಸರ್ಕಾರಿ ಆದೇಶ ಮಾಡಿಸಿಕೊಂಡಿದ್ದಾರೆ. ಅದರಂತೆ ಕರ್ನಾಟಕದ ಶಾಸಕರ ನಿಯೋಗ ಆಂಧ್ರಪ್ರದೇಶದ ಸಿಎಂ ಅವರನ್ನು ಭೇಟಿಯಾಗಿ ದರ್ಶನ ಭಾಗ್ಯ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಕಾಶಿಯಲ್ಲಿ ನಮ್ಮ ಅತಿಥಿ ಗೃಹಕ್ಕೆ ನೂರು ವರ್ಷ ಆಗಿದೆ ಎಂದು ಕಟ್ಟಡ ನೆಲಸಮ ಮಾಡಿದ್ದಾರೆ. ಆದಷ್ಟು ಬೇಗ ಅಲ್ಲಿನ ಅತಿಥಿಗೃಹದ ಕೆಲಸ ಪ್ರಾರಂಭ ಮಾಡಬೇಕು ಎಂದು ಇದೇ ವೇಳೆ ಒತ್ತಾಯಿಸಿದರು.

ಇದಕ್ಕೆ ಸಚಿವ ರಾಮಲಿಂಗಾರೆಡ್ಡಿ ಪ್ರತಿಕ್ರಿಯಿಸಿ, ತಿರುಪತಿಯಲ್ಲಿ ಕರ್ನಾಟಕ ಭವನದ ನವೀಕರಣ ಕೆಲಸ ನಡೆಯುತ್ತಿದೆ. ಈಗಾಗಲೇ ಒಂದು ಭವನದ ಕೆಲಸ ಮುಗಿದು ಉದ್ಘಾಟನೆಯೂ ಆಗಿದೆ. ಬಾಕಿ ಕಾಮಗಾರಿಗಳನ್ನು ಮೇನಲ್ಲಿ ಮುಕ್ತಾಯ ಮಾಡುತ್ತೇವೆ. ಈಗ ಭವನ ನಿರ್ವಹಣೆ ಮಾಡಲು ತಾತ್ಕಾಲಿಕ ವ್ಯವಸ್ಥೆ ಮಾಡಿದ್ದೇವೆ. ಎಲ್ಲಾ ಕಾಮಗಾರಿ ಮುಗಿದ ಮೇಲೆ 4 ಸ್ಟಾರ್ ಮಾದರಿಯಲ್ಲಿ ವ್ಯವಸ್ಥೆ ಕಲ್ಪಿಸುತ್ತೇವೆ. ಕರ್ನಾಟಕ ಭವನದ ಶೇ.60ರಷ್ಟು ರೂಂ ಯಾರು ಬೇಕಾದರೂ ಬುಕ್ ಮಾಡಿಕೊಳ್ಳಬಹುದು. ಶೇ.40ರಷ್ಟು ಕರ್ನಾಟಕದವರಿಗೆ ಮೀಸಲಿರಲಿದೆ ಎಂದು ತಿಳಿಸಿದರು. ಕಾಶಿಯಲ್ಲಿ ಕರ್ನಾಟಕ ಭವನ ನೂರು ವರ್ಷ ಆಗಿರುವುದರಿಂದ ಕಟ್ಟಡ ಕೆಡವಲಾಗಿದೆ. ಹೊಸ ಕಟ್ಟಡಕ್ಕೆ 36 ಕೋಟಿ ಹಣ ಬೇಕಾಗಿದ್ದು, ಕೆಲಸ ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಮೈಸೂರಲ್ಲಿ ಬಗರ್‌ಹುಕುಂ ಸಾಗುವಳಿ ಚೀಟಿ ಖಾತೆ ಮಾಡಿಸಲು ಲಂಚ ಕೇಳ್ತಾರೆ...!

ವಿಧಾನಪರಿಷತ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಆರೋಪ

ಬೆಂಗಳೂರು,ಮಾ.19–ಮೈಸೂರಿನಲ್ಲಿ ಬಗರ್‌ಹುಕುಂ ಸಾಗುವಳಿ ಚೀಟಿಗೆ ಖಾತೆ ಮಾಡಿಕೊಡಲು ಲಂಚ ಪಡೆಯುವ ಕೆಲಸ ಆಗುತ್ತಿದೆ. ಕೂಡಲೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಆಗ್ರಹಪಡಿಸಿದರು.

ವಿಧಾನಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಮಾತನಾಡಿದ ಯತೀಂದ್ರ ಸಿದ್ದರಾಮಯ್ಯ, ಮೈಸೂರಿನಲ್ಲಿ ಸಾಗುವಳಿ ಚೀಟಿ ಇರುವವರಿಗೆ ದಾಖಲಾತಿ ಮಾಡಿಕೊಡುತ್ತಿಲ್ಲ. ಅರ್ಜಿ ಹಾಕಿ, ಹಣ ಕಟ್ಟಿದ ಮೇಲೆಯೂ ಖಾತೆ ಮಾಡಿಕೊಡುತ್ತಿಲ್ಲ. ಖಾತೆ ಮಾಡಿಸಲು ಲಂಚ ಕೇಳುವ ಪರಿಸ್ಥಿತಿ ಬಂದಿದೆ. 30–35 ವರ್ಷಗಳಿಂದ ಖಾತೆ ಆಗಿಲ್ಲ. ಸಾಗುವಳಿ ಚೀಟಿ ಕೊಟ್ಟವರಿಗೆ ಕೂಡಲೆ ಖಾತೆ ಮಾಡಿಕೊಡಬೇಕು. ಇದಕ್ಕೆ ಒಂದು ಕಾಲಮಿತಿಯನ್ನು ಸರ್ಕಾರ ಮಾಡಬೇಕು ಎಂದರು.

ಇದಕ್ಕೆ ಸಚಿವ ಕೃಷ್ಣಭೈರೇಗೌಡ ಉತ್ತರ ನೀಡಿ, ಸಾಗುವಳಿ ಚೀಟಿ ಕೊಟ್ಟವರಿಗೆ ಇನ್ನೂ ಖಾತೆ ಆಗಿಲ್ಲ ಅನ್ನೋದು ಸತ್ಯ. 20–30 ವರ್ಷಗಳಿಂದ ಸಾಗುವಳಿ ಚೀಟಿ ಇದ್ದರೂ ಖಾತೆ ಮಾಡಿಕೊಡಲು ಆಗಿಲ್ಲ. ನೈಜವಾಗಿ ಇರುವ ಕೇಸಲ್ಲಿ ಆದಷ್ಟು ಬೇಗ ಖಾತೆ ಮಾಡಿಕೊಡುತ್ತೇವೆ. ಅಧಿಕಾರಿಗಳಿಗೂ ಖಾತೆ ಮಾಡಲು ಸೂಚನೆ ಕೊಟ್ಟಿದ್ದೇನೆ. ಅನೇಕ ಕೇಸ್‌ಗಳಲ್ಲಿ ಅಕ್ರಮವಾಗಿ ಭೂಮಿ ಹಂಚಿಕೆಯಾಗಿದೆ. ಅರಣ್ಯ ಭಾಗದಲ್ಲಿ ಹಂಚಿಕೆ ಆಗಿರುವುದಕ್ಕೆ ದಾಖಲಾತಿ ಮಾಡಿಕೊಡಲು ಆಗುವುದಿಲ್ಲ. ಅದನ್ನು ಪರಿಶೀಲನೆ ಮಾಡಬೇಕು. ನೈಜವಾಗಿ ಹಂಚಿಕೆ ಆಗಿರುವವರಿಗೆ ಆದಷ್ಟು ಬೇಗ ಖಾತೆ ಮಾಡಿಕೊಡುತ್ತೇವೆ ಎಂದು ಭರವಸೆ ನೀಡಿದರು.



ಮೈಸೂರಿನಲ್ಲಿ ಲಂಚ ಪಡೆಯುತ್ತಿದ್ದಾರೆ ಎಂಬ ಯತೀಂದ್ರ ಮಾತಿಗೆ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಸಿಎಂ ಪುತ್ರರೇ ಸಾಗುವಳಿ ಚೀಟಿಗೆ ಖಾತೆ ಪಡೆಯಲು ಲಂಚ ಕೊಡಬೇಕು ಎಂದು ಹೇಳಿದ್ದಾರೆ. ಯಾರಿಗೆ ಲಂಚ ಕೊಡಬೇಕು ಅದನ್ನು ಸಚಿವರು ಹೇಳಬೇಕು ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಈ ವೇಳೆ ತಮ್ಮ ಮಾತಿಗೆ ವಿವರಣೆ ಕೊಟ್ಟ ಯತೀಂದ್ರ, ಲಂಚ ಎನ್ನುವುದು ಎಲ್ಲಾ ಕಡೆಯಲ್ಲೂ ಇದೆ. ಬಗರ್ ಹುಕುಂ ಸಮಿತಿಗೆ ಸ್ಥಳೀಯ ಶಾಸಕರೇ ಅಧ್ಯಕ್ಷರಾಗಿರುತ್ತಾರೆ. ಅಧಿಕಾರಿಗಳಿಗೆ ಹೇಳಿದರೂ ಅವರು ಮಾಡಿಕೊಡುವುದಿಲ್ಲ. ಇದು ಸರ್ಕಾರದ ಹಂತದಲ್ಲಿ ಅಲ್ಲ. ಸ್ಥಳೀಯವಾಗಿ ವಿಳಂಬವಾಗಿದೆ ಎಂದು ಛಲವಾದಿಗೆ ತಿರುಗೇಟು ಕೊಟ್ಟರು.

ಬಳಿಕ ಮಾತನಾಡಿದ ಸಚಿವ ಕೃಷ್ಣಭೈರೇಗೌಡ, ಎಲ್ಲಾ ವಿಷಯಗಳಲ್ಲಿ ರಾಜಕೀಯ ಮಾಡುವುದು ಬೇಡ. ಬಿಜೆಪಿ 4 ವರ್ಷಗಳ ಕಾಲ ಅಧಿಕಾರ ಮಾಡಿತ್ತು. ಯಾಕೆ ಆಗ ಖಾತೆ ಮಾಡಿಕೊಡಲಿಲ್ಲ. ಇದರಲ್ಲಿ ರಾಜಕೀಯ ಬೇಡ ಎಂದು ನಾರಾಯಣಸ್ವಾಮಿ ವಿರುದ್ಧ ಆಕ್ರೋಶ ಹೊರಹಾಕಿದರು.

ಮಳವಳ್ಳಿ ಬಳಿ ಹೋಳಿ ಹಬ್ಬದ ಊಟ ಸೇವಿಸಿ ಅಸ್ವಸ್ಥ ಪ್ರಕರಣ

ಗುಣಮುಖರಾದ ನಂತರ ಮೇಘಾಲಯ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ

ಮಂಡ್ಯ,ಮಾ.19– ಮಳವಳ್ಳಿ ತಾಲೂಕಿನ ಗೋಕುಲ ವಿದ್ಯಾಸಂಸ್ಥೆಯಲ್ಲಿ ಹೋಳಿ ಹಬ್ಬದ ಊಟ ಸೇವಿಸಿ ಅಸ್ವಸ್ಥಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೇಘಾಲಯ ರಾಜ್ಯದ 22 ವಿದ್ಯಾರ್ಥಿಗಳು ಹಾಗೂ ಸ್ಥಳೀಯ 14 ವಿದ್ಯಾರ್ಥಿಗಳು ಗುಣಮುಖರಾದ ನಂತರ ಶೈಕ್ಷಣಿಕ ವರ್ಷದ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಸೂಚಿಸಿದ್ದಾರೆ.

ಬುಧವಾರ ನಗರದ ತಮ್ಮ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಮೇಘಾಲಯ ರಾಜ್ಯದ 22 ವಿದ್ಯಾರ್ಥಿಗಳು 1 ರಿಂದ 9ನೇ ತರಗತಿಯೊಳಗಿದ್ದು, ಗುಣಮುಖರಾದ ನಂತರ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಹಸ್ತಾಂತರ ಮಾಡಲಾಗುವುದು. ಬಾಲಮಂದಿರದಲ್ಲಿ ಅವರಿಗೆ ವಾಸ್ತವ್ಯ ಹಾಗೂ ವೈದ್ಯರ ಸಲಹೆಯಂತೆ ಆಹಾರ ಒದಗಿ ಸಲಾಗುವುದು ಎಂದರು.

ಶಿಕ್ಷಣ ಇಲಾಖೆ ಮೇಘಾಲಯ ರಾಜ್ಯದ ವಿದ್ಯಾರ್ಥಿಗಳು ಸೇರಿದಂತೆ ಸ್ಥಳೀಯ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡಬೇಕು. ಇದಲ್ಲದೇ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವೈದ್ಯರ ಸಲಹೆ ಹಾಗೂ ಪೋಷಕರ ಒಪ್ಪಿಗೆ ಪಡೆದು ಪರೀಕ್ಷೆ–1 ಬರೆಯಲಿ ಇಲ್ಲವಾದಲ್ಲಿ ಪರೀಕ್ಷೆ–2 ಬರೆಯಲು ವ್ಯವಸ್ಥೆ ಮಾಡಬೇಕು. ಚಿಕಿತ್ಸೆ ಪಡೆಯುತ್ತಿರುವ ಮೇಘಾಲಯ ವಿದ್ಯಾರ್ಥಿಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಹಸ್ತಾಂತರ ಮಾಡಿದ ನಂತರ ಮೇಘಾಲಯ ಸರ್ಕಾರ ನಿಯೋಜಿಸಿರುವ ಅಧಿಕಾರಿಗಳು ಮಕ್ಕಳ ಪೋಷಕರನ್ನು ಅವರ ಆಧಾರ್ ಕಾರ್ಡ್ ಗುರುತಿನ ಚೀಟಿಯೊಂದಿಗೆ ಆಗಮಿಸಿ ಮಕ್ಕಳ ರಕ್ಷಣಾ ಘಟಕಕ್ಕೆ ಪತ್ರ ನೀಡಿ ನಂತರ ಮಕ್ಕಳನ್ನು ಕರೆದುಕೊಂಡು ಹೋಗಬಹುದು. ಇದಲ್ಲದೇ ಮೇಘಾಲಯ ರಾಜ್ಯದ ವಿದ್ಯಾರ್ಥಿಗಳನ್ನು ಗೋಕುಲ ಶಾಲೆಗೆ ದಾಖಲೆ ಮಾಡುವ ಸಂದರ್ಭದಲ್ಲಿ ನೀಡಿರುವ ದಾಖಲೆಗಳನ್ನು ವಶಪಡಿಸಿಕೊಂಡು ತನಿಖೆ ನಡೆಸುವಂತೆ ತಿಳಿಸಿದರು.

ಜಿಪಂ ಸಿಇಓ ಕೆ.ಆರ್.ನಂದಿನಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಶ್ಮಿ ಮಾತನಾಡಿದರು. ಸಭೆಯಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಮೇಘಾಲಯ ರಾಜ್ಯದ ಶಿಕ್ಷಣ ಇಲಾಖೆಯ ಪೀಟರ್ ಸುನ್, ರುಡಿ ಕ್ರೆಯಲ್, ಮಕ್ಕಳ ರಕ್ಷಣಾ ಸಮಿತಿ ಅಧ್ಯಕ್ಷೆ ಸುಮಿತ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಮೂರ್ತಿ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.


ಸಭೆಯಲ್ಲಿ ಮಾತನಾಡುತ್ತಿರುವ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್.

ಆಸ್ಪತ್ರೆಗೆ ಡಿಸಿ ಭೇಟಿ, ಮಕ್ಕಳ ಆರೋಗ್ಯ ವಿಚಾರಣೆ

ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರಲ್ಲದೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿಗಳ ಯೋಗಕ್ಷೇಮ ವಿಚಾರಿಸಿದರು. ಜಿಲ್ಲಾಧಿಕಾರಿ ಡಾ.ಕುಮಾರ ಅವರೊಂದಿಗೆ ಮೇಘಾಲಯ ರಾಜ್ಯದ ಅಧಿಕಾರಿ ಮತ್ತು ಕಾರ್ಯದರ್ಶಿ ಕ್ರಯಿಲ್ ವಿ.ಡಿಂಗ್ ದೋ, ಎಫ್‌ಎಸ್‌ಎಲ್ ಅಧಿಕಾರಿಗಳು ಭೇಟಿ ನೀಡಿ, ಆರೋಗ್ಯ ವಿಚಾರಿಸಿ, ಮಾಹಿತಿ ಪಡೆದುಕೊಂಡಿದ್ದರು.

ಜಿಲ್ಲೆಯ ವಸತಿ ಶಾಲೆಗಳ ಪರಿಶೀಲನೆ

ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ವಸತಿ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ಮೂಲಭೂತ ವ್ಯವಸ್ಥೆಗಳು, ಮಕ್ಕಳಿಗೆ ನೀಡಲಾಗುತ್ತಿರುವ ಆಹಾರ ಕುರಿತು ವರದಿ ನೀಡಲು ಆರೋಗ್ಯ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳ ಸಮಿತಿ ರಚಿಸಲಾಗುವುದು. ಸರ್ಕಾರದ ಆಧೀನದಲ್ಲಿ ನಡೆಯುತ್ತಿರುವ ವಸತಿ ಶಾಲೆಗಳಲ್ಲಿ ಯಾವುದೇ ಕಾರಣಕ್ಕೂ ಹೊರಗಿನ ವ್ಯಕ್ತಿ ಹಾಗೂ ಸಂಸ್ಥೆಯಿಂದ ಆಹಾರ ಪಡೆಯುವಂತಿಲ್ಲ. ಯಾವುದಾದರೂ ದೂರು ಬಂದಲ್ಲಿ ಕ್ರಮ ವಹಿಸಲಾಗುವುದು. ಇದೇ ರೀತಿ ವಸತಿ ಶಾಲೆಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗುವುದು.

ಘಟನೆ ಬಗ್ಗೆ ಸಂಪೂರ್ಣ ಮಾಹಿತಿ ಪಡೆದ ಮೇಘಾಲಯ ಅಧಿಕಾರಿಗಳು

ಪೋಷಕರು ಬಯಸಿದರೆ ಆಧಾರ್ ತೋರಿಸಿ, ಮಕ್ಕಳನ್ನು ಕಳುಹಿಸಲು ಜಿಲ್ಲಾಡಳಿತಕ್ಕೆ ಮನವಿ

ಮಂಡ್ಯ: ಹೋಳಿ ಊಟ ಸೇವಿಸಿದ ಪರಿಣಾಮ ಮಳವಳ್ಳಿ ತಾಲೂಕಿನ ಟಿ.ಕಾಗೇಪುರದ ಗೋಕುಲಂ ವಿದ್ಯಾಸಂಸ್ಥೆಯ ಈಶಾನ್ಯ ರಾಜ್ಯ ಮೇಘಾಲಯ ಮೂಲದ ಇಬ್ಬರು ಮಕ್ಕಳು ಸಾವನ್ನಪ್ಪಿ, 30ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿದ್ದ ಘಟನೆಗೆ ಸಂಬಂಧಿಸಿದಂತೆ ನಿನ್ನೆಯಿಂದ ಮೇಘಾಲಯ ಸರ್ಕಾರದ ಅಧಿಕಾರಿಗಳು ಮಂಡ್ಯ ಜಿಲ್ಲೆಯಲ್ಲೇ ಬೀಡು ಬಿಟ್ಟಿದ್ದಾರೆ.

ಮೇಘಾಲಯ ಮುಖ್ಯಮಂತ್ರಿ ಕನ್ರಾಡ್ ಸಂಗ್ಮಾ ಸೂಚನೆ ಮೇರೆಗೆ ನಿನ್ನೆ ಮೇಘಾಲಯ ರಾಜ್ಯದ ಜನರಲ್ ಅಡ್ಮಿನಿಸ್ಟ್ರೆಟಿವ್ ಇಲಾಖೆಯ ಆಯುಕ್ತ ಮತ್ತು ಕಾರ್ಯದರ್ಶಿ ಕ್ರುಯಿಲ್ ವಿ.ಡಿಂಗ್ ದೋ, ಶಿಕ್ಷಣ ಇಲಾಖೆ ಅಧಿಕಾರಿಗಳಾದ ಪೀಟರ್ ಸುನ್, ರುಡಿ ಕ್ರಿಯಲ್ ಭೇಟಿ ನೀಡಿ, ಮಂಡ್ಯ ಮಿಮ್ಸ್ ಆಸ್ಪತ್ರೆ, ಮಳವಳ್ಳಿ ಆಸ್ಪತ್ರೆ ಹಾಗೂ ಘಟನಾ ಸ್ಥಳ ಗೋಕುಲಂ ವಿದ್ಯಾಶಾಲೆಗೆ ಭೇಟಿ ನೀಡಿ, ಮಾಹಿತಿ ಪಡೆದುಕೊಂಡಿದ್ದರು. ಕ್ರಯಿಲ್ ವಿ.ಡಿಂಗ್ ದೋ ಮಾಹಿತಿ ಪಡೆದುಕೊಂಡು ನಿನ್ನೆಯೇ ಮೇಘಾಲಯಕ್ಕೆ ವಾಪಸ್ಸಾದರೆ, ಶಿಕ್ಷಣ ಇಲಾಖೆಯ ಪೀಟರ್ ಸುನ್, ರುಡಿ ಕ್ರಿಯಲ್ ಮಂಡ್ಯದಲ್ಲೇ ವಾಸ್ತವ್ಯ ಹೂಡಿ, ಇಂದು ಜಿಲ್ಲಾಧಿಕಾರಿಗಳೊಂದಿಗೆ ಸಭೆಯಲ್ಲಿ ಪಾಲ್ಗೊಂಡಿದ್ದರು.

ನಿನ್ನೆ ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಜೊತೆಗೆ ಮಿಮ್ಸ್‌ಗೆ ಭೇಟಿ ನೀಡಿದ್ದ ಜನರಲ್ ಅಡ್ಮಿನಿಸ್ಟ್ರೆಟಿವ್ ಇಲಾಖೆಯ ಆಯುಕ್ತ ಮತ್ತು ಕಾರ್ಯದರ್ಶಿ ಕ್ರುಯಿಲ್ ವಿ.ಡಿಂಗ್ ದೋ ಗೋಕುಲಂ ಶಾಲೆಯಲ್ಲಿ ಹೊರ ರಾಜ್ಯದ ಮಕ್ಕಳಿಗೆ ವಿದ್ಯಾಭ್ಯಾಸ ನೀಡಲು ಅನುಮತಿ ಇತ್ತೆ. ಎಷ್ಟು ವರ್ಷದಿಂದ ಈ ಶಾಲೆ ನಡೆಯುತ್ತಿದೆ ಎಂಬ ಬಗ್ಗೆ ಮಾಹಿತಿ ಪಡೆದುಕೊಂಡರು. ಈಗಾಗಲೇ ತಿಳಿಸಿದಂತೆ ಗೋಕುಲಂ ಶಾಲೆ ಪರವಾನಗಿ ಪಡೆದಿಲ್ಲ.

ಇನ್ನು ಹೋಳಿ ಊಟ ಕೊಟ್ಟವ್ರಾರು? ಅಡುಗೆ ತಯಾರಾಗಿದ್ದೆಲ್ಲಿ? ಹೋಳಿ ಬಣ್ಣವೇನಾದರೂ ಮಿಶ್ರಣವಾಗಿತ್ತೆ ಅಥವಾ ಅವಧಿ ಮುಗಿದ ಪದಾರ್ಥಗಳನ್ನು ಬೆರೆಸಿ, ಅಡುಗೆ ಮಾಡಿದ್ದರಿಂದ ಈ ಘಟನೆ ನಡೆಯಿತೇ ಎಂಬ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದಾಗ ಈ ಬಗ್ಗೆ ಸಮಗ್ರ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ಮೇಘಾಲಯ ಕಾರ್ಯದರ್ಶಿಗೆ ವಿವರಿಸಿದ್ದಾರೆ.

ಇದಲ್ಲದೇ ಮೇಘಾಲಯದಿಂದ ಆಗಮಿಸುವ ಮಕ್ಕಳ ಪೋಷಕರು ತಮ್ಮೊಂದಿಗೆ ಮಕ್ಕಳನ್ನು ಕಳುಹಿಸಿ ಎಂದರೆ ಆಧಾರ್ ಪರಿಶೀಲಿಸಿ, ಅವರೊಂದಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರಿಗೆ ಕ್ರಯಿಲ್ ವಿ.ಡಿಂಗ್ ದೋ ಮನವಿ ಮಾಡಿದ್ದಾರೆ. ಜೊತೆಗೆ ಮಕ್ಕಳಿಗೆ ಪರೀಕ್ಷೆ ಬರೆಯಲು ಸಹ ಅನುಮತಿ ಕೊಡಿಸುವಂತೆ ಕೋರಿದ್ದಾರೆ.

ಹೇಮಾವತಿ ಜಲಾಶಯದಿಂದ ಕೆರೆ–ಕಟ್ಟೆಗಳಿಗೆ ನೀರು ಬಿಡಲು ಸಾಧ್ಯವಿಲ್ಲ

ಸಭೆಯಲ್ಲಿ ಮುಖ್ಯ ಇಂಜಿನಿಯರ್ ಹೇಳಿಕೆಗೆ ರೈತರ ವಿರೋಧ, ಆಕ್ರೋಶ, ವಾಗ್ವಾಳಿ

ಕೆ.ಆರ್.ಪೇಟೆ,ಮಾ.19–ಹೇಮಾವತಿ ಜಲಾಶಯದಲ್ಲಿ ನೀರಿನ ಕೊರತೆ ಇರುವುದರಿಂದ ನಾಲೆಯಿಂದ ತಾಲೂಕಿನ ಕೆರೆ–ಕಟ್ಟೆಗಳಿಗೆ ನೀರು ಹರಿಸಲು ಸಾಧ್ಯವಿಲ್ಲ ಎಂದು ಜಲಾಶಯದ ಮುಖ್ಯ ಎಂಜಿನಿಯರ್ ಮಂಜುನಾಥ್ ತಿಳಿಸಿದ್ದು ಇದನ್ನು ವಿರೋಧಿಸಿರುವ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹೇಮಾವತಿ ನಾಲೆಯಿಂದ ತಾಲೂಕಿನ ಕೆರೆ–ಕಟ್ಟಗಳಿಗೆ ನೀರು ಹರಿಸುವ ಸಂಬಂಧ ರೈತರೊಂದಿಗೆ ನಡೆದ ಸಭೆಯಲ್ಲಿ ಅವರು ಇದನ್ನು ಸ್ಪಷ್ಟಪಡಿಸಿದರು. ಹೇಮಾವತಿ ಜಲಾಶಯದಿಂದ ಕೆರೆ–ಕಟ್ಟೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ರೈತರು ಗುರುವಾರ (ಮಾ.20) ತಾಲೂಕು ಕಚೇರಿ ಮುಂದೆ ಪ್ರತಿಭಟನೆ ಹಮ್ಮಿಕೊಂಡಿದ್ದ ಹಿನ್ನೆಲೆಯಲ್ಲಿ ಈ ಸಭೆ ನಡೆಸಲಾಯಿತು.

ಸಭೆಯಲ್ಲಿ ಮಾತನಾಡಿದ ಮುಖ್ಯ ಎಂಜಿನಿಯರ್ ಮಂಜುನಾಥ್ ಪ್ರಸ್ತುತ ಜಲಾಶಯದಲ್ಲಿ 20.156 ಟಿಎಂಸಿ ನೀರಿದೆ. ಇದರಲ್ಲಿ 01.383 ಟಿಎಂಸಿ ನೀರು ಆವಿಯಾದರೆ 4.372 ಟಿಎಂಸಿ ನೀರು ಡೆಡ್ ಸ್ಟೋರೇಜ್ ಆಗಿದ್ದು ಬಳಕೆಗೆ ಅಲಭ್ಯವಾಗಿರುತ್ತದೆ. ಒಟ್ಟು 14.401 ಟಿಎಂಸಿ ನೀರು ಮಾತ್ರ ಬಳಕೆಗೆ ಲಭ್ಯವಾಗುತ್ತದೆ. ಇದರಲ್ಲಿ ನದಿ ಮೂಲದ ಕುಡಿಯುವ ನೀರು ಯೋಜನೆಗಳಿಗೆ 5.667 ಟಿಎಂಸಿ, ಹಾಸನ ನಗರದ ಕುಡಿಯುವ ನೀರು ಪೂರೈಕೆಗೆ 0.072 ಟಿಎಂಸಿ, ಹೇಮಾವತಿ ಜಲಾಶಯದ ನೀರಾವರಿ ಸಲಹಾ ಸಮಿತಿಯ ನಿರ್ಣಯದಂತೆ ಹಾಸನ, ತುಮಕೂರು ಮತ್ತು ಮಂಡ್ಯ ಜಿಲ್ಲೆಗಳ ಜನರ ಕುಡಿಯುವ ನೀರಿನ ಉದ್ದೇಶಕ್ಕಾಗಿ 5.800 ಟಿಎಂಸಿ ನೀರನ್ನು ಕಾಯ್ದಿರಿಸಲಾಗಿದೆ. ಬೇಸಿಗೆಯಲ್ಲಿ ನದಿ ಬತ್ತದಂತೆ ಕಾಯ್ದುಕೊಳ್ಳಲು 0.500 ಟಿಎಂಸಿ ಮತ್ತು ಕೈಗಾರಿಕೆಗಳಿಗೆ 0.769 ಟಿಎಂಸಿ ನೀರಿನ ಅಗತ್ಯತೆಯಿದ್ದು ಮುಂದಿನ ಜೂನ್ ತಿಂಗಳವರೆಗೆ ಜಲಾಶಯದಲ್ಲಿ 1,632 ಟಿಎಂಸಿ ನೀರು ಉಳಿಯಲಿದೆ. ಆದ್ದರಿಂದ ನಾಲೆಗಳ ಮುಖಾಂತರ ರೈತರಿಗೆ ಯಾವುದೇ ಕಾರಣಕ್ಕೂ ನೀರು ಹರಿಸಲು ಸಾಧ್ಯವಿಲ್ಲ ಎಂದರಲ್ಲದೇ ಇಲಾಖಾ ವರದಿಯಂತೆ ತಾಲೂಕಿನ ಎಲ್ಲಾ ಕೆರೆಗಳಲ್ಲೂ ಶೇ.25 ರಿಂದ ಶೇ.50 ರವರೆಗೆ ನೀರಿದ್ದು ತಾಲೂಕಿನ ಜನರಿಗೆ ಕುಡಿಯುವ ನೀರಿನ ಯಾವುದೇ ಸಮಸ್ಯೆಯಿಲ್ಲ ಎಂದರು.

ಮುಖ್ಯ ಎಂಜಿನಿಯರ್ ಮಂಜುನಾಥ್ ಸಭೆಯಲ್ಲಿ ಮಂಡಿಸಿದ ಮಾಹಿತಿಯನ್ನು ಒಪ್ಪದೆ ಆಕ್ರೋಶ ವ್ಯಕ್ತಪಡಿಸಿದ ರೈತ ಮುಖಂಡರು ಕುಡಿಯುವ ನೀರಿನ ವಿಚಾರದಲ್ಲಿ ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದಾರೆ. ಈ ಕ್ಷಣವೇ ನಮ್ಮ ಜೊತೆ ಬನ್ನಿ, ನಿಮ್ಮ ವರದಿಯಲ್ಲಿರುವ ಯಾವುದಾರೊಂದು ಕೆರೆಗೆ ಹೋಗೋಣ. ಅಲ್ಲಿನ ನೀರಿನ ಲಭ್ಯತೆಯನ್ನು ನೋಡೋಣ. ನಿಮ್ಮ ವರದಿ ನಿಜವಾಗಿದ್ದರೆ ನಾವು ನಿಮ್ಮ ಕಾಲಿಗೆ ಬಿದ್ದು ಶರಣಾಗುತ್ತೇವೆ. ನಿಮ್ಮ ವರದಿ ಸುಳ್ಳಾಗಿದ್ದರೆ ರೈತರ ಬದುಕಿನ ಮೇಲೆ ಬರೆ ಎಳೆದಿರುವ ನಿಮ್ಮ ಅಧಿಕಾರಿಗಳ ವಿರುದ್ಧ ಏನು ಕ್ರಮ ವಹಿಸುತ್ತೀರಿ? ಸ್ಪಷ್ಟಪಡಿಸಿ ಎಂದು ಪಟ್ಟು ಹಿಡಿದರು.

ರೈತ ಮುಖಂಡ ಎಂ.ವಿ.ರಾಜೇಗೌಡ ಮಾತನಾಡಿ ನಿಮ್ಮ ಇಲಾಖೆ ವರದಿ ಪ್ರಕಾರ ಹೇಮಾವತಿ ಜಲಾಶಯದಿಂದ ರಬಿ ಮತ್ತು ಖಾರೀಫ್ ಬೆಳೆಗೆ ನೀರು ಬಿಟ್ಟಿರುವುದಾಗಿ ಹೇಳಿದ್ದೀರಿ. ಇದು ಸುಳ್ಳು ವರದಿ. ಏಕ ಕಾಲಕ್ಕೆ ಒಂದು ನಾಲೆಯಲ್ಲಿ ರಬಿ ಮತ್ತು ಖಾರೀಫ್ ಬೆಳೆಯನ್ನು ಹೇಗೆ ಬೆಳೆಯಲು ಸಾಧ್ಯ?. ಏಕ ಕಾಲಕ್ಕೆ ರಬಿ ಮತ್ತು ಖಾರೀಫ್ ಬೆಳೆ ಬೆಳೆಯಬಹುದು ಎನ್ನುವ ಕೃಷಿ ತಜ್ಞರನ್ನು ಕರೆದುಕೊಂಡು ಬನ್ನಿ, ನಮ್ಮ ಭಾಗದಲ್ಲಿ ಯಾವ್ಯಾವ ರೈತರು ರಬಿ ಮತ್ತು ಖಾರೀಫ್ ಬೆಳೆ ಬೆಳೆದಿದ್ದಾರೆನ್ನುವುದನ್ನು ಅಂಕಿ ಅಂಶಗಳ ಪ್ರಕಾರ ಮಾಹಿತಿ ನೀಡಲಿ ಎಂದು ನೀರಾವರಿ ಇಲಾಖೆಯ ಎಂಜಿನಿಯರುಗಳನ್ನು ತರಾಟೆಗೆ ತೆಗೆದುಕೊಂಡರು.

ರೈತರ ಪಟ್ಟಿನಿಂದ ವಿಚಲಿತರಾದ ನೀರಾವರಿ ಇಲಾಖೆಯ ಎಂಜಿನಿಯರುಗಳು ನೀರು ಬಿಡುವ ವಿಚಾರದಲ್ಲಿ ಮೈಸೂರಿನ ಪ್ರಾದೇಶಿಕ ಆಯುಕ್ತರು ನಿರ್ಧಾರ ತೆಗೆದುಕೊಳ್ಳುವ ಹಕ್ಕು ಹೊಂದಿದ್ದಾರೆ. ಗುರುವಾರ (ಮಾ.20) ಅವರನ್ನು ಭೇಟಿ ಮಾಡಿ ರೈತರ ಸಮಸ್ಯೆಯ ವಾಸ್ತವತೆಯನ್ನು ತಿಳಿಸಿ ನೀರು ಕೊಡಿಸಲು ಪ್ರಯತ್ನಿಸುತ್ತೇವೆ. ಅಲ್ಲಿಯವರೆಗೆ ಪ್ರತಿಭಟನೆ ಕೈಬಿಟ್ಟು ಸಮಯ ಕೊಡುವಂತೆ ಮನವೊಲಿಸಿದರು.

ತಹಸೀಲ್ದಾರ್ ಡಾ.ಎಸ್.ಯು.ಅಶೋಕ್ ಮತ್ತು ಹೇಮಾವತಿ ಜಲಾಶಯದ ಮುಖ್ಯ ಎಂಜಿನಿಯರ್ ಮಂಜುನಾಥ್ ಅವರ ಜಂಟಿ ಮನವಿಗೆ ಸ್ಪಂದಿಸಿದ ರೈತ ಮುಖಂಡರು ಗುರುವಾರದ ಚಳುವಳಿಯನ್ನು ತಾತ್ಕಾಲಿಕವಾಗಿ ಮುಂದೂಡುತ್ತಿದ್ದು ನಮ್ಮ ನಾಲೆಗಳಿಗೆ ನೀರು ಬಿಡದಿದ್ದರೆ ನೀರಿಗಾಗಿ ಅತ್ಯುಗ್ರ ಹೋರಾಟಕ್ಕಿಳಿಯುವ ಎಚ್ಚರಿಕೆ ನೀಡಿ ನಿರ್ಗಮಿಸಿದರು.


ರೈತರೊಂದಿಗೆ ಸಭೆ ನಡೆಸುತ್ತಿರುವ ಹೇಮಾವತಿ ಜಲಾಶಯದ ಇಂಜಿನಿಯರ್‌ಗಳು, ಅಧಿಕಾರಿಗಳು.

ನಾಳೆ ನೇರ ಸಂದರ್ಶನ

ಮಂಡ್ಯ,ಮಾ.19–ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಹಾಗೂ ಮೆ॥ ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಮೆ॥ ಐ.ಐ.ಎಫ್.ಎಲ್ ಸಮಸ್ತ ಫೈನಾನ್ಸ್ ಲಿಮಿಟಡ್, ಮೆ॥ ಪವನ್ ಗೋಲ್ಡ್ ಮತ್ತು ಡೈಮಂಡ್ಸ್, ಮೆ॥ ಎ.ಯು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಮತ್ತು ಭರತ್ ಫೈನಾನ್ಷಿಯಲ್ ಇನ್ಕ್ಲೂಷನ್ ಲಿಮಿಟೆಡ್ ಸಂಸ್ಥೆಗಳು ತಮ್ಮಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇರ ಸಂದರ್ಶನ ನಡೆಸಲಿದ್ದು ಆಸಕ್ತರು ಮಾ.21 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೇರಸಂದರ್ಶನದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232–295124, 9164642684 ಸಂಪರ್ಕಿಸಬಹುದು.

ಒಂದನೇ ಪುಟದಿಂದ

ಹನಿಟ್ರ್ಯಾಪ್ ಆತಂಕ!

ಹುದ್ದೆಗಳನ್ನು ಹೊಂದಿ ಜನರ ಕೆಲಸಗಳನ್ನು ಮಾಡುವ ಬದಲು ನಾವು, ನಮ್ಮ ಕುಟುಂಬದ ರಕ್ಷಣೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣ ವಾಗಿದ್ದು ಹೀಗಾದರೆ ಹೇಗೆ ಎಂದು ಪ್ರಶ್ನಿಸಿ ದ್ದಾರೆ. ಸಚಿವರು ಮತ್ತು ಇತರರು ನೀಡಿರುವ ದೂರನ್ನು ಗಂಭೀರವಾಗಿ ತೆಗೆದುಕೊಂಡಿರುವ ಎಐಸಿಸಿ, ಈಗಾಗಲೇ ಮಧ್ಯೆ ಪ್ರವೇಶ ಮಾಡಿದೆ ಎನ್ನಲಾಗಿದೆ.

ಇದರ ನಡುವೆ ಪ್ರಭಾವೀ ಸಚಿವರೊಬ್ಬರು ವಿಧಾನಸಭೆಯ ಮೊಗಸಾಲೆಯಲ್ಲಿ ಹನಿಟ್ರ್ಯಾಪ್ ಬಗ್ಗೆ ಮಾಧ್ಯಮದವರಿಗೆ ಮಾಹಿತಿ ನೀಡಿದ್ದಲ್ಲದೆ, ತಮ್ಮ ಕುಟುಂಬದವರನ್ನೂ ಹನಿಟ್ರ್ಯಾಪ್‌ಗೆ ಬೀಳಿಸಿದ್ದಾರೆ ಎಂಬ ಕಳವಳ ವ್ಯಕ್ತಪಡಿಸಿದರು. ನಮ್ಮವರೇ ನಮ್ಮನ್ನು ತುಳಿಯಲು ಹೊರಟಿದ್ದಾರೆ, ಇವರನ್ನು ನಾವು ರಾಜಕೀಯವಾಗಿಯೇ ಎದುರಿಸುವುದಾಗಿ ತಿಳಿಸಿದ್ದಾರೆ. ಮತ್ತೊಂದೆಡೆ ಈ ಸಚಿವರು ತಮ್ಮ ಮನೆಗಳಲ್ಲೇ ಆಪ್ತ ಸಚಿವರು ಮತ್ತು ಶಾಸಕರ ಸಭೆಗಳನ್ನು ನಡೆಸಿ, ಹನಿಟ್ರ್ಯಾಪ್ ತಂತ್ರದ ಬಗ್ಗೆ ಮಾಹಿತಿ ಮತ್ತು ಎಚ್ಚರಿಕೆ ನೀಡಿದ್ದಾರೆ. ಸಮುದಾಯದ ಅಭಿವೃದ್ಧಿ ಮತ್ತು ಇತರ ವಿಷಯಗಳ ಹೆಸರಿನಲ್ಲಿ ಕರೆದಿದ್ದ ಸಭೆಯಲ್ಲಿ ಹನಿಟ್ರ್ಯಾಪ್ ಬಗ್ಗೆ ಮಾಹಿತಿ ನೀಡಿದ್ದಾರೆ.

ಹತ್ತಿಕ್ಕಲು ಹೀಗಾ ಮಾಡೋದು...!

ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇನು? ವಿರೋಧಿಗಳನ್ನು, ತನ್ನ ಪಕ್ಷದಲ್ಲಿರುವ ಪ್ರತಿಸ್ಪರ್ಧಿಗಳನ್ನು ಹತ್ತಿಕ್ಕಬೇಕು ಎನ್ನುವ ಕಾರಣಕ್ಕೆ ಯಾವ ಲೆವೆಲ್‌ಗೂ ಹೋಗಬಹುದಾ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರವೇ ಹನಿಟ್ರ್ಯಾಪ್ ಫ್ಯಾಕ್ಟರಿ ಇಟ್ಟುಕೊಂಡರೆ ಯಾರಿಗೆ ಬುದ್ದಿ ಹೇಳುತ್ತೀರಿ. ಯಾರಿಗೆ ಉಪದೇಶ ಮಾಡ್ತೀರಾ. ಇದರ ಬಗ್ಗೆ ಗೃಹ ಇಲಾಖೆ ಕ್ರಮ ತೆಗೆದುಕೊಳ್ಳಬೇಕು. ಯಾರು ಇದ್ದಾರೆ ಎನ್ನುವುದು ಆ ಮೇಲೆ ಮೊದಲು ಕ್ರಮ ಆಗಬೇಕು. ಇಂತಹ ಅಸಹ್ಯಕರ ಚಟುವಟಿಕೆಗಳನ್ನು ರಾಜಕಾರಣಿಗಳಿಗೆ ಬಳಸಬಾರದು, ಅದು ಯಾರಾದರೂ ಆಗಲಿ ಎಂದು ಸುನೀಲ್ ಕುಮಾರ್ ವಾಗ್ದಾಳಿ ನಡೆಸಿದರು.

ವಿರೋಧಿಗಳನ್ನು, ಸ್ವಪಕ್ಷೀಯರನ್ನು ಹತ್ತಿಕ್ಕಲು ಬೇರೆ ಮಾರ್ಗ ಇಲ್ಲವೇನು. ಇದರ ಬಗ್ಗೆ ಎಲ್ಲರು ಕೈ ಜೋಡಿಸಬೇಕು. ಈ ಸರ್ಕಾರ ಅಪರಾಧಿಗಳಿಗೆ ಒಂದು ಸಿಂಹಸ್ವಪ್ನ ಆಗಿದೆ ಎಂಬ ಸಂದೇಶ ಕಳಿಸಿ ಎಂದು ಒತ್ತಾಯಿಸಿದರು.

ಗಂಡಭೇರುಂಡ ಹಾಕಿಕೊಳ್ಳಲು ಆಗಲ್ಲ ಎಂದರೆ ಗುಬ್ಬಚ್ಚಿ ಹಾಕಿಕೊಳ್ಳಿ. ಗಂಡಭೇರುಂಡ ಹಾಕಿಕೊಂಡ ನಂತರ ಗಂಡಸರ ತರ ಸರ್ಕಾರ ನಡೆಸಬೇಕು. ಯಾರು ಬೇಕಾದರೂ, ಏನು ಬೇಕಾದರೂ ಮಾಡಬಹುದು ಎನ್ನುವಂತದ್ದು ಬೇಡ. ಸಮಾಜಘಾತುಕ ಚಟುವಟಿಕೆ ಮಾಡಿದರೆ ಸಾಸಿವೆ ಕಾಳಷ್ಟು ಸಹಿಸಲ್ಲ ಎಂದು ಕ್ರಮದ ಮೂಲಕ ತಿಳಿಸಿ ಎಂದರು. ಗೃಹ ಇಲಾಖೆ ನಡೆಸಲು ಇಷ್ಟ ಇಲ್ಲವಾ, ಅಥವಾ ಇಲಾಖೆಯಲ್ಲಿ ಯಾರಾದರೂ ಕೈ ಆಡಿಸುತ್ತಿದ್ದಾರಾ? ಇಲಾಖೆ ನಡೆಸಲು ಗೃಹ ಸಚಿವರಿಗೆ ಸ್ವಾತಂತ್ರ್ಯ ಇಲ್ಲವಾ ಎಂದು ವಾಗ್ದಾಳಿ ನಡೆಸಿದರು.

ವಿಲಿಯಮ್ಸ್‌ಗೆ ಪ್ರಧಾನಿ ಮೋದಿ ಸ್ವಾಗತ

ಅವರ ಸುರಕ್ಷಿತ ಮರಳುವಿಕೆಯನ್ನು ಖಚಿತಪಡಿಸಿಕೊಳ್ಳಲು ದಣಿವರಿಯದೆ ಕೆಲಸ ಮಾಡಿದ ಎಲ್ಲರ ಬಗ್ಗೆ ನಮಗೆ ಹೆಮ್ಮೆಯಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಸುನೀತಾ ವಿಲಿಯಮ್ಸ್ ಮರಳುವ ಮೊದಲು ಕೂಡ ಪತ್ರ ಬರೆದಿದ್ದ ಪ್ರಧಾನಿ ಮೋದಿ, ಸುನೀತಾ ವಿಲಿಯಮ್ಸ್ ಅವರ ಸುರಕ್ಷಿತ ವಾಪಸಾತಿಗಾಗಿ ಇಡೀ ವಿಶ್ವವೇ ಉಸಿರು ಬಿಗಿಹಿಡಿದು ಕಾಯುತ್ತಿದೆ. ನೀವು ಸಾವಿರಾರು ಮೈಲುಗಳಷ್ಟು ದೂರದಲ್ಲಿ ದ್ದರೂ, ನೀವು ನಮ್ಮ ಹೃದಯಕ್ಕೆ ಹತ್ತಿರವಾಗಿದ್ದೀರಿ. ನೀವು ಭಾರತಕ್ಕೆ ಭೇಟಿ ನೀಡುವ ದಿನಕ್ಕಾಗಿ ಕಾಯುತ್ತಿದ್ದೇವೆ ಎಂದಿದ್ದರು. ಕೆಲವು ದಿನಗಳ ಹಿಂದೆ ಕಾರ್ಯಕ್ರಮವೊಂದರಲ್ಲಿ ಮಾಸ್ಸಿಮಿನೊ ಅವರನ್ನು ಭೇಟಿ ಮಾಡಿದ್ದ ಪ್ರಧಾನಿ ಮೋದಿ ಈ ಪತ್ರ ಸುನೀತಾ ವಿಲಿಯಮ್ಸ್ ಅವರನ್ನು ತಲುಪಬೇಕು ಎಂದು ಮನವಿ ಮಾಡಿದ್ದರು. ಈ ಕುರಿತು ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಕೇಂದ್ರ ಸಚಿವ ರಾಜನಾಥ್ ಸಿಂಗ್ ಗಗನಯಾತ್ರಿಗಳ ಸ್ಥಿತಿಸ್ಥಾಪಕತ್ವವನ್ನು ಶ್ಲಾಘಿಸಿದರು. ಮಾನವ ಬಾಹ್ಯಾಕಾಶ ಪರಿಶೋಧನೆಯಲ್ಲಿ ಅವರ ಸಾಧನೆಯನ್ನು ಒಂದು ಮೈಲಿಗಲ್ಲು ಎಂದು ಶ್ಲಾಘಿಸಿದರು. 'ಭೂಮಿಯ ಮೇಲೆ ನಾಸಾದ Crew-9 ಸುರಕ್ಷಿತವಾಗಿ ಮರಳಿದ್ದಕ್ಕೆ ಸಂತೋಷವಾಯಿತು! ಭಾರತದ ಮಗಳು ಸುನೀತಾ ವಿಲಿಯಮ್ಸ್ ಮತ್ತು ಇತರ ಗಗನಯಾತ್ರಿಗಳನ್ನು ಒಳಗೊಂಡ ಸಿಬ್ಬಂದಿ ಹೊಸ ದಾಖಲೆ ಬರೆದಿದ್ದಾರೆ' ಎಂದು ರಾಜನಾಥ್ ಸಿಂಗ್ ಪೋಸ್ಟ್ ಮಾಡಿದ್ದಾರೆ.

ಸೊರಗುತ್ತಿದೆ ಐತಿಹಾಸಿಕ ಬೋಗಾದಿ ಕೆರೆ


ತ್ಯಾಜ್ಯದ ನಡುವೆ ಉಪಯೋಗಕ್ಕೆ ಬಾರದೇ ಬಿದ್ದಿರುವ ಕಾಂಕ್ರೀಟ್ ಪೈಪ್‌ಗಳು.


ಮದ್ಯದ ಖಾಲಿ ಬಾಟಲಿಗಳು ಮತ್ತು ಊಟದ ಎಲೆ.

ಪ್ಯಾಕ್‌ಗಳೇ ಸಾಕ್ಷಿ. ಅವರು ಮಾಂಸಾಹಾರ ಸೇರಿದಂತೆ ಬಗೆಬಗೆಯ ಭಕ್ಷ್ಯ ಭೋಜನ ಮಾಡಿ ಉಂಡು ಬಿಸಾಡಿದ ಎಲೆಗಳ ರಾಶಿ ಬಿದ್ದಿವೆ.

ಇಂತಹ ದುಸ್ಥಿತಿಯ ಕಾರಣ, ಕೆರೆಯನ್ನು ಆಶ್ರಯಿಸಿದ್ದ ಪ್ರಾಣಿ–ಪಕ್ಷಿಗಳು ಅನಿವಾರ್ಯವಾಗಿ ವಲಸೆ ಹೋಗಿವೆ. ಜೊತೆಗೆ ಮಲಿನ ನೀರು ಸಹ ವ್ಯಾಪಕವಾಗಿ ಸೇರುತ್ತಿದ್ದು, ಅದೆಷ್ಟು ಜಲಚರಗಳು ಇಂತಹ ಮಾಲಿನ್ಯದಿಂದ ಪ್ರಾಣತೆತ್ತಿವೆಯೋ ಗೊತ್ತಿಲ್ಲ. ಒಂದು ಕಾಲದಲ್ಲಿ ಜಾನುವಾರು, ಪಕ್ಕದ ತೋಟ–ಗದ್ದೆಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಿದ್ದ ಕೆರೆ, ಇಂದು ನಾನಾ ರೀತಿಯ ಮಾಲಿನ್ಯದ ತಾಣವಾಗಿ ಮಾರ್ಪಟ್ಟಿದೆ.

ಯಾವುದೇ ಕೆರೆಯಾದರೂ ಒಂದು ಕಾಲಕ್ಕೆ ಅವುಗಳೇ ಗ್ರಾಮೀಣ ಜನರ ನೀರಿನ ಮೂಲವಾಗಿದ್ದವು. ಕುಡಿಯುವುದರಿಂದ ಹಿಡಿದು ಶೌಚ, ಬಟ್ಟೆ–ಬರೆ ಒಗೆಯಲು, ಜಾನುವಾರುಗಳಿಗೆ ನೀರುಣಿಸಲು ಮತ್ತು ವ್ಯವಸಾಯಕ್ಕೂ ಕೆರೆಕಟ್ಟೆಗಳೇ ಮೂಲವಾಗಿದ್ದವು. ನಗರೀಕರಣದ ಕಾರಣ ಮಾನವನ ಅವಲಂಬನೆ ಅವುಗಳ ಮೇಲೆ ಬಹುತೇಕ ಕಡಿಮೆಯಾಗಿದೆ. ಆದರೆ ಪ್ರಾಣಿ ಪಕ್ಷಿಗಳಿಗೆ ಅವೇ ಜೀವಜಲ. ಆದರೆ ಪ್ರಸ್ತುತ ಕೆರೆಗಳು ಕಲುಷಿತವಾಗುವ ಮೂಲಕ ಜಲಚರ, ಪ್ರಾಣಿ–ಪಕ್ಷಿಗಳಿಗೆ ಮಾರಕವಾಗುವುದು ಸರ್ವೇ ಸಾಮಾನ್ಯವಾಗಿದೆ. ಈ ನಡುವೆ ಅವುಗಳ ಸಂರಕ್ಷಣೆ ಸಹ ಅಲ್ಲಲ್ಲಿ ನಡೆಯುತ್ತಿದೆ. ಆದರೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವ ಕೆರೆಗಳೇ ಹೆಚ್ಚು.

ಹೀಗೆ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಕೆರೆಗಳಲ್ಲಿ ಬೋಗಾದಿ ಕೆರೆ ಸಹ ಒಂದಾಗಿದೆ. ಈ ಕೆರೆ ಎದುರು ಭಾರತ ಸರ್ಕಾರದ ಭಾರತೀಯ ಮಾನವ ವಿಜ್ಞಾನ ಸರ್ವೇಕ್ಷಣದ ಮಾನವ ಭವನ ಸಹ ನಿರ್ಮಾಣವಾಗಿದ್ದು, ಈ ಕಟ್ಟಡ ಕೆರೆಯಂಗಳದಲ್ಲೇ ತಲೆ ಎತ್ತುವ ಮೂಲಕ ಬೋಗಾದಿ ಕೆರೆಗೆ ಮಾರಕವಾಯಿತು ಎಂಬ ಆರೋಪ ಸಹ ಇದೆ. ಇನ್ನು ಕೆರೆ ರಸ್ತೆಯ ಮಗ್ಗಲಲ್ಲಿ ಕಟ್ಟಡ ತ್ಯಾಜ್ಯ ಸಹ ರಾಶಿ ಹಿಡಿದಿದೆ. ಜೀರ್ಣೋದ್ಧಾರಗೊಂಡರೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಮೈಸೂರು ಮಹಾನಗರ ಪಾಲಿಕೆ ನಿರ್ಲಕ್ಷ್ಯದಿಂದ ನಿರ್ವಹಣೆ ಇಲ್ಲದೇ ಕೆರೆ ಸೊರಗುವಂತಾಗಿದೆ ಎಂಬ ಆರೋಪ ಸಹ ಕೇಳಿಬಂದಿದೆ. ಎಷ್ಟೋ ವರ್ಷಗಳಿಂದ ಈ ಕೆರೆ ದುಸ್ಥಿತಿಯಲ್ಲಿದ್ದು, ನಗರದ ಬೇರೆ ಕೆರೆಗಳ ಸಂಬಂಧ ವ್ಯಕ್ತವಾಗುತ್ತಿರುವ ಕಾಳಜಿ, ಈ ಕೆರೆ ವಿಚಾರದಲ್ಲಿ ಇಲ್ಲವಾಗಿದೆ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದಾರೆ.

ನಿರ್ವಹಣೆ ಕೊರತೆಯಿಂದ ದುಸ್ಥಿತಿ: ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಲತಜ್ಞ ಪ್ರೊ.ಯು.ಎನ್.ರವಿಕುಮಾರ್, 2012–13ರಲ್ಲಿ ಈ ಕೆರೆಯ ಜೀರ್ಣೋದ್ಧಾರ ಮಾಡಲಾಯಿತು. ಈ ವೇಳೆ ಕೆರೆ ಸುತ್ತಲು ವಾಯುವಿಹಾರಕ್ಕೆ ದಾರಿ (ವಾಕಿಂಗ್ ಪಾಥ್) ನಿರ್ಮಿಸಲಾಯಿತು. ಆಗ ಅಂದಿನ ರಾಜ್ಯ ಸರ್ಕಾರದಿಂದ ಕ್ಷೇತ್ರವಾರು ಕೆರೆಗಳ ಜೀರ್ಣೋದ್ಧಾರಕ್ಕೆ ಅನುದಾನ ಬಿಡುಗಡೆಯಾಗಿತ್ತು. ಅದರಲ್ಲಿ ಈ ಕೆರೆಯ ಜೀರ್ಣೋದ್ಧಾರ ಸಹ ಮಾಡಲಾಯಿತು ಎಂದು ತಿಳಿಸಿದರು.

ಕಂಪನಿಯೊಂದು ಜೀರ್ಣೋದ್ಧಾರದ ಪ್ಲ್ಯಾನ್ ಮಾಡಿತ್ತು. ವಿನ್ಯಾಸ ಮಾಡಿದ್ದು ನಾನೇ. ಒಮ್ಮೆ ಅಭಿವೃದ್ಧಿಗೊಳಿಸಿದ ಬಳಿಕ ಸೂಕ್ತ ನಿರ್ವಹಣೆಗೆ ಕ್ರಮ ವಹಿಸದಿರುವುದೇ ಹೀಗೆ ದುಸ್ಥಿತಿಗೆ ತಲುಪಲು ಕಾರಣ. ಈ ಕೆರೆಯ ನಿರ್ವಹಣೆ ಮತ್ತು ಸಂರಕ್ಷಣೆಗೆ ಒಂದು ವ್ಯವಸ್ಥೆ ಇಲ್ಲ. ಹಾಗಾಗಿ ಅದರ ಸಂರಕ್ಷಣೆ ಸವಾಲಾಗಿದೆ. ಬೋಗಾದಿ ಕೆರೆ ಸಮೀಪದಲ್ಲಿ ಹಿನಕಲ್ ರಾಯನಕೆರೆ ಇದ್ದು, ಇಡೀ ವಿಜಯನಗರ ಹಾಗೂ ಹಿನಕಲ್ ಭಾಗದ ಮಳೆ ನೀರು ಹರಿದು ಬರುವ ಮೂಲಕ ಈ ಎರಡು ಕೆರೆಗಳಿಗೆ ಸೇರಲಿದೆ ಎಂದರು.

ನವೀಕರಣದ ವೇಳೆ (ಜೀರ್ಣೋದ್ಧಾರ) ಆಂಫಿಥಿಯೇಟರ್ ಮಾದರಿ ನಿರ್ಮಾಣ ಸಹ ಮಾಡಲಾಗಿತ್ತು. ಆ ಮೂಲಕ ಕೆರೆಗೆ ಯಾವುದೇ ಅಡೆತಡೆಯಾಗದಂತೆ ಕಾರ್ಯಕ್ರಮ ಆಯೋಜನೆಗೂ ಅವಕಾಶ ಕಲ್ಪಿಸಲಾಗಿತ್ತು. ಜೊತೆಗೆ ಅಲ್ಲಿ ಕೂತು ಕೆರೆಯ ವಿಹಂಗಮ ನೋಟ ನೋಡಲು ಅವಕಾಶವಾಗುತ್ತಿತ್ತು. ಕೊಳಚೆ ನೀರು ಬಂದಲ್ಲಿ ಸಂಸ್ಕರಣೆಯಾಗಿ ಕೆರೆಯೊಳಗೆ ಹೋಗುವಂತೆ ವ್ಯವಸ್ಥೆ ಮಾಡಲಾಗಿತ್ತು. ಒಂದು ವೇಳೆ ಈ ವ್ಯವಸ್ಥೆ ಉಳಿದಿದ್ದರೆ ಕೆರೆ ಒಡಲಿನ ನೀರು ಶುದ್ಧವಾಗಿರಲು ಸ್ವಯಂ ಸಾಧ್ಯವಾಗುತ್ತಿತ್ತು ಎಂದು ವಿವರಿಸಿದರು.

ಭೂಮಿಗೆ ಬಂದ ಸುನೀತಾ ವಿಲಿಯಮ್ಸ್

ಕ್ಷಣಗಳಲ್ಲಿ ನೌಕೆ ಅತ್ಯಂತ ನಯವಾಗಿ, ಸುರಕ್ಷಿತವಾಗಿ ಸಮುದ್ರಕ್ಕೆ ಅಪ್ಪಳಿಸಿತು. ಸಮುದ್ರಕ್ಕೆ ಬೀಳುತ್ತಿದ್ದಂತೆಯೇ ಸ್ಪೇಸ್ ಎಕ್ಸ್ ಕ್ರೂ ್ಯಸ್‌ನ ಕ್ಯಾಪ್ಸುಲ್ ತೇಲಲು ಪ್ರಾರಂಭಿಸಿತು. ಸುನೀತಾ ವಿಲಿಯಮ್ಸ್ ಸೇರಿ ನಾಲ್ವರು ಗಗನಯಾತ್ರಿಗಳಿದ್ದ ನೌಕೆಯ ಕ್ಯಾಪ್ಸುಲ್ ಸಮುದ್ರದಲ್ಲಿ ಬಿದ್ದು ತೇಲುತ್ತಿದ್ದಂತೆಯೇ ಕೆಲವೇ ಕ್ಷಣಗಳಲ್ಲಿ ಮೂರು ಬೋಟ್‌ಗಳಲ್ಲಿ ಅಮೆರಿಕ ನೌಕಾಪಡೆ ಸ್ಥಳಕ್ಕೆ ಧಾವಿಸಿತು. ಈಗಾಗಲೇ ಸಿದ್ಧವಾಗಿ ನಿಂತಿದ್ದ ಸ್ಪೇಸ್ ಎಕ್ಸ್‌ನ ರಿಕವರಿ ಶಿಪ್ ಕೂಡ ಸ್ಥಳಕ್ಕೆ ಧಾವಿಸಿತು.

ನಂತರ ನೌಕಾಪಡೆ ಸಿಬ್ಬಂದಿ ಮೊದಲಿಗೆ ಗಗನಯಾತ್ರಿಗಳಿದ್ದ ಕ್ಯಾಪ್ಸುಲ್ ನಿಯಂತ್ರಣಕ್ಕೆ ರೋಪ್‌ಗಳಿಂದ ಕಟ್ಟಿ ಹಡಗಿನ ಬಳಿಗೆ ಎಳೆದೊಯ್ದರು. ಬಳಿಕ ಅತ್ಯಂತ ನಾಜೂಕಾಗಿ ಕ್ಯಾಪ್ಸುಲ್ ಅನ್ನು ಹಡಗಿಗೆ ಸ್ಥಳಾಂತರ ಮಾಡಿದರು. ಇದಾದ ಕೆಲವೇ ಹೊತ್ತಿನಲ್ಲಿ ನಟ್ಟು, ಬೋಲ್ಟ್‌ಗಳಿಂದ ಟೈಟಾಗಿದ್ದ ಕ್ಯಾಪ್ಸುಲ್‌ನ ಡೋರ್ ಅನ್ನು ತೆಗೆಯಲಾಯಿತು. ಮೊದಲಿಗೆ ನಾಸಾ ಗಗನಯಾತ್ರಿ ಹೇಗ್‌ರನ್ನು ಹೊರಗೆ ತರಲಾಯಿತು. ನಂತರ ರಷ್ಯಾದ ಗಗನಯಾತ್ರಿ ಅಲೆಕ್ಸಾಂಡರ್ ಗೋರ್ಬುನೋವ್ ಹೊರಗೆ ತರಲಾಯಿತು.

ಇವರಿಬ್ಬರೂ ಬಾಹ್ಯಾಕಾಶ ಕೇಂದ್ರದಲ್ಲಿ ಸಿಲುಕಿದ್ದ ಸುನೀತಾ ಮತ್ತು ವಿಲ್ಮೋರ್ ಅವರನ್ನು ಕರೆತರಲು 8 ದಿನಗಳ ಹಿಂದಷ್ಟೇ ತೆರಳಿದ್ದರು. ತಕ್ಷಣ ಎದ್ದು ನಿಲ್ಲಲು ಆಗದಿದ್ದರೂ ಇವರಿಬ್ಬರ ದೇಹಸ್ಥಿತಿಯಲ್ಲಿ ಅಷ್ಟಾಗಿ ಬದಲಾವಣೆ ಕಂಡುಬಂದಂತೆ ಕಾಣಲಿಲ್ಲ.

ಇನ್ನು ಮೂರನೆಯದಾಗಿ ಸುನೀತಾ ವಿಲಿಯಮ್ಸ್‌ರನ್ನು ಹೊರಗೆ ಕರೆತರಲಾಯಿತು. ಬರೋಬ್ಬರಿ 9 ತಿಂಗಳ ಬಳಿಕ ಭೂಮಿಗೆ ಬಂದ ಸುನೀತಾರ ಸಂತಸಕ್ಕೆ ಪಾರವೇ ಇರಲಿಲ್ಲ. ಎದ್ದು ನಿಲ್ಲಲೂ ಆಗದ ಸುನಿತಾ ಕುಳಿತಲ್ಲೇ ನಗುಮೊಗದೊಂದಿಗೆ ಕೈಬೀಸಿ ಸಂಭ್ರಮ ವ್ಯಕ್ತಪಡಿಸಿದರು. ಕೊನೆಯದಾಗಿ ಸುನೀತಾ ಜತೆಗಿದ್ದ ಮತ್ತೊಬ್ಬ ಗಗನಯಾತ್ರಿ ಬುಚ್ ವಿಲ್ಮೋರ್‌ನ್ನು ಹೊರಗೆ ತರಲಾಯಿತು. ಈ ಎಲ್ಲಾ ಪ್ರಕ್ರಿಯೆಗಳು ನಸುಕಿನ 3.28ಕ್ಕೆ ಶುರುವಾಗಿ 4.27ರ ಸುಮಾರಿಗೆ ಮುಕ್ತಾಯಗೊಂಡಿತು.

ನಂತರ ನಾಲ್ವರು ಗಗನಯಾತ್ರಿಗಳನ್ನು ಅವರು ಧರಿಸಿದ್ದ ವಿಶೇಷ ಸ್ಪೇಸ್‌ಸೂಟ್‌ನಲ್ಲೇ ಹೆಲಿಕಾಪ್ಟರ್ ಮೂಲಕ ನಾಸಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಇಷ್ಟು ದಿನ ಬಾಹ್ಯಾಕಾಶದಲ್ಲಿದ್ದ ಕಾರಣ ಇಲ್ಲಿನ ವಾತಾವರಣಕ್ಕೆ ಗಗನಯಾತ್ರಿಗಳು ಹೊಂದಿಕೊಳ್ಳಬೇಕಿದೆ. ಅವರ ಆರೋಗ್ಯ ಸ್ಥಿತಿ ಸ್ಪಂದಿಸಬೇಕಿದೆ. ಹೀಗಾಗಿ ಆಸ್ಪತ್ರೆಗೆ ದಾಖಲಿಸಿ ಅಗತ್ಯ ಚಿಕಿತ್ಸೆ ನೀಡಲಾಗುತ್ತದೆ. ಸಮಗ್ರ ತಪಾಸಣೆಗೆ ಒಳಪಡಿಸಲಾಗುತ್ತದೆ.

ಹೆಂಗಸರಿಗೆ ಫ್ರೀ ಕೊಟ್ಟಂಗೆ, ಗಂಡಸರಿಗೆ ವಾರಕ್ಕೆ 2 ಬಾಟ್ಲಿ ಎಣ್ಣೆ ಫ್ರೀಯಾಗಿ ಕೊಡಿ!

ಸದನದಲ್ಲಿ ಜೆಡಿಎಸ್ ಶಾಸಕ ಎಂ.ಟಿ.ಕೃಷ್ಣಪ್ಪ ಸಲಹೆ

ಬೆಂಗಳೂರು, ಮಾ.19– ಸರಕಾರ ಮದ್ಯ ಮಾರಾಟದ ಟಾರ್ಗೆಟ್ ಹೆಚ್ಚಿಸಿ, ಅಬಕಾರಿ ಆದಾಯವನ್ನು 40 ಸಾವಿರ ಕೋಟಿಗೆ ನಿಗದಿ ಮಾಡಿರುವುದು ಪಾಪದ ಕೆಲಸವೇ. ಹೆಂಗಸರಿಗೆ ಫ್ರೀ ಕೊಟ್ಟು ಗಂಡಸರಿಂದ ಹಣ ಪೀಕುವುದು ತಪ್ಪಲ್ಲವೇ. ಸಂಪೂರ್ಣ ಪಾನ ನಿಷೇಧ ಜಾರಿ ಏಕೆ ಸಾಧ್ಯವಿಲ್ಲ. ಇಂತಹ ಹಲವು ಪ್ರಶ್ನೆ, ವಾದ –ಪ್ರತಿವಾದಗಳಿಗೆ ವಿಧಾನಸಭೆ ಕಲಾಪ ಮಂಗಳವಾರ ವೇದಿಕೆಯಾಯಿತು.



ಬಜೆಟ್ ಮೇಲಿನ ಚರ್ಚೆಯಲ್ಲಿ ಈ ಬಗ್ಗೆ ಜೆಡಿಎಸ್‌ನ ಎಂ.ಟಿ.ಕೃಷ್ಣಪ್ಪ ಹಾಗೂ ಕಾಂಗ್ರೆಸ್‌ನ ಬಿ.ಆರ್.ಪಾಟೀಲ್ ಗಂಭೀರವಾಗಿಯೇ ವಾದ ಮಂಡಿಸಿದರು. ಮೊದಲು ಮಾತನಾಡಿದ ಕೃಷ್ಣಪ್ಪ ಹೆಂಗಸರಿಗೆ ಮಾಸಿಕ 2 ಸಾವಿರ, ಓಡಾಟಕ್ಕೆ ಬಸ್ ಫ್ರೀ ಎಲ್ಲವನ್ನೂ ಕೊಟ್ಟಿದ್ದೀರಿ. ಇದಕ್ಕೆ ಕೊಡುತ್ತಿರುವುದು ಖಜಾನೆ ದುಡ್ಡು ಅಲ್ಲವೇ. ಹೆಂಗಸರಿಗೆ ಖುಷಿಪಡಿಸುವಂತೆ ಕುಡಿಯುವ ಗಂಡಸರಿಗೂ ವಾರಕ್ಕೆ ಎರಡು ಬಾಟಲಿ ಫ್ರೀ ಕೊಡಿ. ಸೊಸೈಟಿಗಳ ಮೂಲಕ ಹಂಚಿ ಎಂದು ಸಲಹೆ ನೀಡಿದರು.

ಚುನಾವಣೆಯಲ್ಲಿ ನೀವು ಮತ್ತೇ ಗೆದ್ದು ಬಂದು ಇಂತಹ ವ್ಯವಸ್ಥೆ ಮಾಡಿ, ಎಂದು ಸಚಿವ ಕೆ.ಜೆ.ಜಾರ್ಜ್ ಅವರು ಕೃಷ್ಣಪ್ಪ ಅವರಿಗೆ ಸಲಹೆ ಮಾಡಿದರೆ, ಈಗಲೇ ಈ ಸ್ಥಿತಿ ಫ್ರೀ ಮದ್ಯ ಕೊಟ್ಟರೆ ಏನಾಗಬಹುದು. ಎಂದು ಸ್ಪೀಕರ್ ಹಾಸ್ಯ ಮಾಡಿದರು. ತಮ್ಮ ವಾದವನ್ನು ಬಿಟ್ಟುಕೊಡದ ಕೃಷ್ಣಪ್ಪ, ಈಗೇನಾಗಿದೆ. ನಮ್ಮ 224 ಶಾಸಕರಲ್ಲಿ ಯಾರು ಕುಡಿಯಲ್ಲ ಹೇಳಿಬಿಡಲಿ ಎಂದು ಪ್ರಶ್ನಿಸಿದರು. ಈ ಮಾತಿಗೆ ಜೆಡಿಎಸ್ ಗುಂಪಿನ ಉಪನಾಯಕಿ ಶಾರದಾ ನಾಯಕ್, 224 ಶಾಸಕರು ಎಂದು ನಮ್ಮನ್ನೂ ಸೇರಿಸಿಕೊಂಡು ಏಕೆ ಹೇಳುತ್ತೀರಿ ಎಂದು ಆಕ್ಷೇಪಿಸಿದರು.

ರಹಸ್ಯ ಭೇಟಿ

ಕುಮಾರಸ್ವಾಮಿ ಅಭಯ ನೀಡಿದ್ದಾರಂತೆ. ರಾಜಕೀಯ ಹೆಜ್ಜೆ ಇಡುವಾಗ ಬಹಳ ಎಚ್ಚರ ವಹಿಸಿ, ನಾನೂ ಕೆಲವರನ್ನು ನಂಬಿ ಆಯಾ ತಪ್ಪಿದ್ದೇನೆ. ಆದರೆ, ಜನರು ಹಾಗೂ ಕಾರ್ಯಕರ್ತರು ನನ್ನ ಕೈಬಿಡಲಿಲ್ಲ. ನೀವು ವಿದ್ಯಾವಂತರು, ಸುಸಂಸ್ಕೃತರು ರಾಜ್ಯದ ನಾಯಕತ್ವ ನಿಭಾಯಿಸುವ ಎಲ್ಲಾ ಅರ್ಹತೆ ಇದೆ, ನಿಮಗೆ ಇರುವ ಅವಕಾಶ ಕಳೆದುಕೊಳ್ಳಬೇಡಿ. ಹೋರಾಟದಿಂದ ನಿಮ್ಮನ್ನು ಹಿಂದೆ ಸರಿಸಲು ರಾಜಕೀಯ ಮೇಲಾಟಗಳು ನಡೆಯುವುದು ಸಹಜ, ಅದಕ್ಕೆ ಎದೆಗುಂದಬೇಡಿ. ರಾಜಕೀಯವಾಗಿ ಸಂಕಷ್ಟಕ್ಕೆ ಸಿಲುಕಿದರೆ ನಾನು ನಿಮ್ಮ ಜೊತೆ ಇರುತ್ತೇನೆ ಎಂದು ಅಭಯ ನೀಡಿದ್ದಾರಂತೆ.

ಚಿನ್ನ ಕಳ್ಳಸಾಗಾಣೆ ಪ್ರಕರಣ

ರನ್ಯಾ ಸ್ನೇಹಿತ ತರುಣ್ ರಾಜು ಜಾಮೀನು ಅರ್ಜಿ ವಜಾ

ಬೆಂಗಳೂರು, ಮಾ.19– ನಟಿ ರನ್ಯಾ ರಾವ್ ಚಿನ್ನ ಕಳ್ಳಸಾಗಾಣೆ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ತರುಣ್ ರಾಜು ಅವರಿಗೆ ಬೆಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ ಬುಧವಾರ ಜಾಮೀನು ನಿರಾಕರಿಸಿದೆ.

ನಟಿ ರನ್ಯಾ ರಾವ್ ಸ್ನೇಹಿತ ತರುಣ್ ರಾಜು ಸಲ್ಲಿಸಿದ್ದ ಜಾಮೀನು ಅರ್ಜಿಗೆ ಪ್ರಬಲ ಆಕ್ಷೇಪ ವ್ಯಕ್ತಪಡಿಸಿದ ಡಿಆರ್‌ಐ ಪರ ವಿಶೇಷ ಸರಕಾರಿ ಅಭಿಯೋಜಕ (ಎಸ್‌ಪಿಪಿ) ಮಧು ಎನ್.ರಾವ್, ರನ್ಯಾ ಹಾಗೂ ತರುಣ್ ನಡುವಣ ಚಿನ್ನ ಸ್ಮಗ್ಲಿಂಗ್, ನಿರಂತರ ದುಬೈ ಪ್ರಯಾಣದ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಿದರು.

ಪ್ರಕರಣದ ಮೊದಲ ಆರೋಪಿ ರನ್ಯಾ 2023 ಹಾಗೂ 2025ರ ನಡುವಣ ಅವಧಿಯಲ್ಲಿ ಸುಮಾರು 52 ಬಾರಿ ದುಬೈಗೆ ಹೋಗಿ ಬಂದಿದ್ದಾರೆ. ಈ ಪೈಕಿ 26 ಬಾರಿ ತರುಣ್ ಜತೆ ಹೋಗಿ ಬಂದಿದ್ದಾರೆ. ಈ ನಿರಂತರ ಪ್ರಯಾಣದ ಗುಟ್ಟನ್ನು ಭೇದಿಸಬೇಕಿದೆ ಎಂದು ಹೇಳಿದರು.

ಮೈಸೂರು ಮಿತ್ರ

ಗುರುವಾರ 20 ಮಾರ್ಚ್ 2025

ಮಹಿಳೆ ಕೊಂದವನಿಗೆ ಜೀವಾವಧಿ ಶಿಕ್ಷೆ



ಮೈಸೂರು, ಮಾ.19 (ಆರ್‌ಕೆ)– ಮಹಿಳೆ ಕೊಲೆಗೈದ ಹಂತಕನಿಗೆ ಮೈಸೂರು ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ.

ನಂಜನಗೂಡು ತಾಲೂಕು ಹಳೇಪುರ ಗ್ರಾಮದ ಮಹದೇವನಾಯಕ ಅಲಿಯಾಸ್ ಬದರಿ ಶಿಕ್ಷೆಗೆ ಗುರಿಯಾದವನು. ಹಳೇಪುರ ಗ್ರಾಮದ ಮಹಿಳೆಯೊಬ್ಬರ ಜೊತೆ ಕಳೆದ 20 ವರ್ಷಗಳಿಂದ ಅಕ್ರಮ ಸಂಬಂಧ ಹೊಂದಿದ್ದ ಆತ, ಆಕೆ ಬೇರೆಯವರೊಂದಿಗೆ ಸಂಬಂಧ ಹೊಂದಿರುವ ಸಂಶಯದಿಂದ ಆಗಿಂದಾಗ್ಗೆ ಜಗಳ ತೆಗೆದು, ಹಲ್ಲೆ ನಡೆಸುತ್ತಿದ್ದ. ಈ ಸಂಬಂಧ ಮಹಿಳೆ ಕವಲಂದೆ ಪೊಲೀಸ್ ಠಾಣೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ಇಬ್ಬರನ್ನೂ ಕರೆಸಿ ಬುದ್ಧಿ ಹೇಳಿದ್ದರು.

ಪೊಲೀಸ್ ಠಾಣೆಗೆ ದೂರು ನೀಡಿದ್ದರಿಂದ ಆಕ್ರೋಶಗೊಂಡ ಮಹದೇವನಾಯಕ ಹೆಮ್ಮರಗಾಲದ ಸ್ವಾಮಿ ಎಂಬುವರ ಅಂಗಡಿಯಲ್ಲಿ ಮಚ್ಚು ಖರೀದಿಸಿ, 2022ರ ಜುಲೈ 29ರಂದು ಬೆಳಗ್ಗೆ 6.15ರಲ್ಲಿ ಮಹಿಳೆ ಹಾಲು ತರಲು ಹೋಗಿದ್ದಾಗ ಹಳೇಪುರದ ಮಂಜಪ್ಪನ ಮನೆ ಮುಂದೆ ಅಡ್ಡಗಟ್ಟಿ ಮಚ್ಚಿನಿಂದ ಕೊಚ್ಚಿ ಕೊಲೆಗೈದಿದ್ದ. ಆ ವೇಳೆ ಆಕೆಯ ರಕ್ಷಣೆಗೆ ಬಂದ ಮತ್ತಿಬ್ಬರಿಗೂ ಬೆದರಿಸಿದ್ದ. ಈ ಸಂಬಂಧ ಕವಲಂದೆ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಲಕ್ಷ್ಮಿಕಾಂತ ಕೆ.ತಳವಾರ್ ಕೇಸು ದಾಖಲಿಸಿ, ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 6ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶ ಪಿ.ಜೆ. ಸೋಮಶೇಖರ್ ಅವರು ವಾದ–ಪ್ರತಿವಾದಗಳನ್ನು ಆಲಿಸಿದ ಬಳಿಕ ಮಹಿಳೆಯನ್ನು ಕೊಲೆ ಮಾಡಿರುವುದು ಸಾಕ್ಷ್ಯಾಧಾರಗಳಿಂದ ಸಾಬೀತಾದ ಹಿನ್ನೆಲೆಯಲ್ಲಿ ಮಹದೇವನಾಯಕನಿಗೆ ಜೀವಾವಧಿ ಶಿಕ್ಷೆ ಮತ್ತು 10 ಸಾವಿರ ರೂ. ದಂಡ, ದಂಡ ಪಾವತಿಸಿದ್ದಲ್ಲಿ ಇನ್ನು 3 ತಿಂಗಳ ಸಾದಾ ಶಿಕ್ಷೆ ಹಾಗೂ ಐಪಿಸಿ ಕಲಂ 506ರ ಅಪರಾಧಕ್ಕೆ 1 ವರ್ಷ ಸಾದಾ ಶಿಕ್ಷೆ ಹಾಗೂ 2 ಸಾವಿರ ರೂ. ದಂಡ, ಈ ದಂಡ ಪಾವತಿಸಿದ್ದಲ್ಲೂ ಇನ್ನು 1 ತಿಂಗಳ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಎಂ.ಕಾಮಾಕ್ಷಿ ವಾದ ಮಂಡಿಸಿದ್ದಲ್ಲದೆ, ಕವಲಂದೆ ಠಾಣೆ ಮುಖ್ಯ ಪೇದೆ ಮುಕುಂದ್ ವಿಚಾರಣೆ ವೇಳೆ ಸಕಾಲಕ್ಕೆ ಸಾಕ್ಷ್ಯಾಧಾರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು.

ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ



ಮೈಸೂರಿನ ಡಿಸಿ ಕಚೇರಿ ಬಳಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಆಶಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಮಾ.19(ಎಂಟಿವೈ)– ಸರ್ಕಾರ ನೀಡಿದ ಭರವಸೆಯಂತೆ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ ಸೇರಿಸಿ ಕನಿಷ್ಠ 10 ಸಾವಿರ ರೂ. ಮಾಸಿಕ ಗೌರವಧನ ಮತ್ತು ಬಜೆಟ್‌ನಲ್ಲಿ ಘೋಷಿಸಿರುವಂತೆ 1 ಸಾವಿರ ರೂ. ಹೆಚ್ಚಳದ ಆದೇಶ ಹೊರಡಿಸುವಂತೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ಇಂದು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಮುಂದೆ ಬುಧವಾರ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಆಶಾ ಕಾರ್ಯಕರ್ತರು, ಸರ್ಕಾರ ನೀಡಿದ ಭರವಸೆಯನ್ನು ಈಡೇರಿಸಬೇಕು. ಜನರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಆಶಾ ಕಾರ್ಯಕರ್ತರು ಸಲ್ಲಿಸುತ್ತಿರುವ ಸೇವೆಗೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಗಿದೆ ಎಂದರು.

ವಿವಿಧ ಬೇಡಿಕೆಗಳ ಈಡೇರಿಕೆ ಹಲವು ಬಾರಿ ಹೋರಾಟ ಮಾಡಿದ ಹಿನ್ನೆಲೆಯಲ್ಲಿ ಸರ್ಕಾರ ಕೆಲ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿತ್ತು. ಮುಖ್ಯಮಂತ್ರಿಗಳು ಹೋರಾಟನಿರತ ಆಶಾ ಸಂಘದ ಪದಾಧಿಕಾರಿಗಳ ಸಭೆ ನಡೆಸಿ, ಚರ್ಚಿಸಿದ್ದರು. ಬಳಿಕ ಇಲಾಖೆ ಆಯುಕ್ತರು ಪ್ರತಿಭಟನಾ ಸ್ಥಳಕ್ಕೆ ಬಂದು ಆಶಾ ಕಾರ್ಯಕರ್ತೆಯರಿಗೆ 2 ಸಾವಿರ ಗೌರವಧನ ಹೆಚ್ಚಿಸುವುದಾಗಿ ಭರವಸೆ ನೀಡಿದ್ದರು. ಆದರೆ ಇದುವರೆಗೂ ಬೇಡಿಕೆ ಈಡೇರಿಸಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನೆ ವೇಳೆ ಪ್ರತಿ ತಿಂಗಳು ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ ಸೇರಿಸಿ ಕನಿಷ್ಠ 10 ಸಾವಿರ ರೂ. ನೀಡುವುದಾಗಿ ಘೋಷಿಸಲಾಗಿತ್ತು. ಆದರೆ, 2 ತಿಂಗಳಾದರೂ ಈ ಸಂಬಂಧ ಆದೇಶವಾಗಿಲ್ಲ. ಆಯವ್ಯಯ ಪೂರ್ವಭಾವಿ ಸಭೆಯನ್ನು ಆಶಾ ಕಾರ್ಯಕರ್ತೆಯರ ಸಂಘದೊಂದಿಗೆ ನಡೆಸಿಲ್ಲ. ಕೂಡಲೇ ಸರ್ಕಾರ ಪೂರಕ ಬಜೆಟ್‌ನಲ್ಲಿ ರಾಜ್ಯದ 2.50 ಲಕ್ಷ ಅಂಗನವಾಡಿ–ಬಿಸಿಯೂಟ ಕಾರ್ಯಕರ್ತೆಯರಿಗೆ 1 ಸಾವಿರ ರೂ. ಹೆಚ್ಚಿಸಿದಂತೆ 42,000 ಆಶಾ ಕಾರ್ಯಕರ್ತೆಯರಿಗೂ 1000 ರೂ. ಹೆಚ್ಚಿಸಿ, ಇದೇ ಬಜೆಟ್‌ನಲ್ಲಿ ಸೇರಿಸಿ, ಆದೇಶಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎಐಯುಟಿಯುಸಿ ಜಿಲ್ಲಾಧ್ಯಕ್ಷೆ ಯಶೋಧರ್, ಕಾರ್ಯದರ್ಶಿ ಚಂದ್ರಶೇಖರ ಮೇಟಿ, ಜಿಲ್ಲಾ ಗೌರವಾಧ್ಯಕ್ಷೆ ಸಂಧ್ಯಾ, ಅಧ್ಯಕ್ಷೆ ಭಾಗ್ಯಮ್ಮ, ಜಂಟಿ ಕಾರ್ಯದರ್ಶಿ ಮಣಿಲಾ, ಉಪಾಧ್ಯಕ್ಷರಾದ ಕೋಮಲಾ, ಸುಧಾ, ಲೀಲಾವತಿ, ಪವಿತ್ರಾ, ಸುನೀತಾ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

ಶ್ರೀ ಮಹದೇಶ್ವರ ಕೊಂಡೋತ್ಸವ...



ವರುಣ ಕ್ಷೇತ್ರಕ್ಕೆ ಸೇರಿರುವ ಹದಿನಾರು ಮೋಳೆ ಗ್ರಾಮದಲ್ಲಿ ಕಪಿಲಾ ನದಿಯಿಂದ ಕೀಲು ಮೆರವಣಿಗೆ ತಂದು ಪ್ರಮುಖ ಬೀದಿಗಳಲ್ಲಿ ಶ್ರೀ ಮಹದೇಶ್ವರ ಕೊಂಡೋತ್ಸವ ಜರುಗಿತು. ಕೊಂಡ ನಡೆಯುವ ವೇಳೆಯಲ್ಲಿ ಕಂಸಾಳೆ ಕಲಾವಿದರಿಂದ ಕಲಾ ಪ್ರದರ್ಶನ ನಡೆಯಿತು. ಹದಿನಾರು ಮೋಳೆ ಸುತ್ತಮುತ್ತ ಗ್ರಾಮಗಳ ಸಾವಿರಾರು ಭಕ್ತಾದಿಗಳು ಕೊಂಡೋತ್ಸವದಲ್ಲಿ ಪಾಲ್ಗೊಂಡಿದ್ದರು.

ಡಿಕೆಶಿ ಕನಸು ಭಗ್ನ: ರಾಮನಗರಕ್ಕೆ ಬೆಂಗಳೂರು ದಕ್ಷಿಣ ಮರುನಾಮಕರಣಕ್ಕೆ ಕೇಂದ್ರ ತಡೆ



ಬೆಂಗಳೂರು, ಮಾ.19– ರಾಮನಗರಕ್ಕೆ ಬೆಂಗಳೂರು ದಕ್ಷಿಣವೆಂದು ಮರು ನಾಮಕರಣ ಮಾಡಬೇಕೆಂಬ ಕರ್ನಾಟಕ ಸರ್ಕಾರದ ನಿರ್ಧಾರಕ್ಕೆ ಕೇಂದ್ರ ಸರ್ಕಾರವು ಅನುಮತಿ ನೀಡಿಲ್ಲ. ರಾಜ್ಯ ಸರ್ಕಾರದಿಂದ ಕಳುಹಿಸಿದ್ದ ಪ್ರಸ್ತಾವನೆಗೆ ತಡೆಯೊಡ್ಡಿದೆ. ಈ ಮೂಲಕ ರಾಮನಗರಕ್ಕೆ ಬೆಂಗಳೂರು ದಕ್ಷಿಣ ಎಂದು ನಾಮಕರಣ ಮಾಡಬೇಕು ಎಂಬ ಡಿ.ಕೆ.ಶಿವಕುಮಾರ್ ಅವರ ಕನಸು ಇನ್ನು ನನಸಾಗಿಲ್ಲ.

ಕೆಲ ತಿಂಗಳುಗಳ ಹಿಂದೆ ಕರ್ನಾಟಕ ಸರ್ಕಾರವು ಸಚಿವ ಸಂಪುಟದಲ್ಲಿ ರಾಮನಗರಕ್ಕೆ ಬೆಂಗಳೂರು ದಕ್ಷಿಣವೆಂದು ನಾಮಕರಣ ಮಾಡಲು ನಿರ್ಧಾರ ಮಾಡಿತ್ತು. ಅಂತೆಯೇ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರದ ಗೃಹ ಇಲಾಖೆಗೆ ಕಳುಹಿಸಲಾಗಿತ್ತು. ಆದರೆ, ಗೃಹ ಇಲಾಖೆಯು ಈ ಬಗ್ಗೆ ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆದಿದ್ದು, ಸ್ಥಳೀಯರ ವಿರೋಧವಿದೆ ಎಂಬ ಕಾರಣವನ್ನು ಉಲ್ಲೇಖಿಸಿ ನಿರಾಕರಣೆ ಮಾಡಿದೆ ಎಂದು ಮೂಲಗಳು ತಿಳಿಸಿವೆ.

ರಾಮನಗರವನ್ನು ಬೆಂಗಳೂರಿಗೆ ಸೇರಿಸಲಾಗುತ್ತದೆ. ಬೆಂಗಳೂರು ದಕ್ಷಿಣ ಎಂದು ಮರು ನಾಮಕರಣ ಮಾಡಲಾಗುತ್ತದೆ ಎಂದು ಡಿ.ಕೆ.ಶಿವಕುಮಾರ್ ಪ್ರತಿ ಭಾಷಣದಲ್ಲಿಯೂ ಹೇಳುತ್ತಿದ್ದರು. ಮಾತ್ರವಲ್ಲದೇ, ಮರು ನಾಮಕರಣದ ಬಳಿಕ ಬ್ರ್ಯಾಂಡ್ ವ್ಯಾಲ್ಯೂ ಹೆಚ್ಚಳವಾಗುತ್ತದೆ. ಕಂಪನಿಗಳು, ಕೈಗಾರಿಕೆಗಳು ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣವಾಗುತ್ತವೆ. ಹೆಚ್ಚಿನ ಅಭಿವೃದ್ಧಿಯಾಗಿ ಆ ಕೀರ್ತಿಯು ಕಾಂಗ್ರೆಸ್ ಸರ್ಕಾರಕ್ಕೆ ಹಾಗೂ ತನಗೆ ಸಿಗುತ್ತದೆ ಎಂದು ಡಿಕೆ ಶಿವಕುಮಾರ್ ಕನಸು ಕಂಡಿದ್ದರು. ಹೆಸರು ಬದಲಾವಣೆ ಮಾಡುವ ಪ್ರಸ್ತಾವನೆಗೆ ಕೇಂದ್ರ ಸ್ಪಂದಿಸಿಲ್ಲ ಎಂಬ ಬಗ್ಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರತಿಕ್ರಿಯಿಸಿದ್ದು, ಹೆಸರು ಬದಲಾವಣೆ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ ಎಂದು ಹೇಳಿದ್ದಾರೆ.

ಕೆಲ ತಿಂಗಳುಗಳ ಹಿಂದೆ ಕನಕಪುರ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಡಿಕೆ ಶಿವಕುಮಾರ್, ನಾವು ಬೆಂಗಳೂರಿನವರು, ನಮ್ಮ ಈ ಗುರುತನ್ನು ನಾವು ಯಾಕೆ ಬಿಟ್ಟುಕೊಡಬೇಕು. ಇದು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿದೆ. ಪ್ರಸ್ತಾವನೆಯನ್ನು ದೆಹಲಿಗೆ ಕಳುಹಿಸಲಾಗಿದೆ. ಕೇಂದ್ರ ಗೃಹ ಸಚಿವಾಲಯದಿಂದ ಇಂಟೆಲಿಜೆನ್ಸ್‌ನವರು ವರದಿ ಕಳುಹಿಸುವುದು ಬಾಕಿ ಇದೆ. ಆ ನಂತರ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಅಧಿಕೃತವಾಗಿ ಘೋಷಣೆಯಾಗಲಿದೆ. ರಾಮನಗರ ಜಿಲ್ಲಾ ಕೇಂದ್ರವಾಗಿಯೇ ಉಳಿಯಲಿದೆ. ಭವಿಷ್ಯದಲ್ಲಿ ನಿಮ್ಮ ಜಮೀನಿನ ಬೆಲೆ ಏನಾಗುತ್ತದೆ ಎಂದು ನೀವು ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ನೀವು ನಿಮ್ಮ ಆಸ್ತಿ ಮಾರಿಕೊಳ್ಳಬೇಡಿ ಎಂದು ಹೇಳಿದ್ದರು.

ಈ ಹಿಂದೆ ಕರ್ನಾಟಕ ಸರ್ಕಾರ ಕೆಲ ಜಿಲ್ಲೆಗಳ ಹೆಸರನ್ನು ಬದಲಾವಣೆ ಮಾಡುವಾಗ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆದಿತ್ತು ಪ್ರಮುಖವಾಗಿ ಬಿಜಾಪುರ ಜಿಲ್ಲೆಯ ಹೆಸರನ್ನು ವಿಜಯಪುರ ಎಂದು, ಗುಲ್ಬರ್ಗಾ ಜಿಲ್ಲೆಯ ಹೆಸರು ಅನ್ನು ಕಲಬುರಗಿ ಎಂದು ಎಂದು ಮರು ನಾಮಕರಣ ಮಾಡಲಾಗಿತ್ತು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ...



ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ವಿಸ್ತರ ಆಸ್ಪತ್ರೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಚಿತ್ರದಲ್ಲಿ ಮಾಜಿ ಕಾರ್ಪೋರೇಟರ್ ಪ್ರೇಮಾ ಶಂಕರೇಗೌಡ, ಆಸ್ಪತ್ರೆ ಮುಖ್ಯಸ್ಥರು, ಸಿಬ್ಬಂದಿವರ್ಗ ಇತರರು ಉಪಸ್ಥಿತರಿದ್ದಾರೆ.

ಮಾ.23ರಂದು ಗೌರವ ಪ್ರಶಸ್ತಿ; ಪುಸ್ತಕ ಪುರಸ್ಕಾರ

ಮೈಸೂರು,ಮಾ.19– ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕೊಂಕಣಿ ಕ್ರಿಶ್ಚಿಯನ್ ಅಸೋಸಿಯೇಶನ್ ಪ್ರಶಸ್ತಿ ಪ್ರದಾನ ಸಮಾರಂಭ–2024 ಕಾರ್ಯಕ್ರಮವನ್ನು ಮಾ.23ರಂದು ಸಂಜೆ 5.30ಕ್ಕೆ ಕೊಂಕಣ್ ಭವನ್, ವಿಜಯನಗರ 2ನೇ ಹಂತ ಮೈಸೂರು ಇಲ್ಲಿ ಆಯೋಜಿಸಲಾಗಿದೆ. ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಉದ್ಘಾಟನೆ ಮಾಡಲಿದ್ದಾರೆ. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಜೋಕಿಂ ಸ್ಟ್ಯಾನಿ ಆಲ್ವಾರಿಸ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹಾಗೂ ಗೌರವ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯರಾದ ಡಿ.ತಿಮ್ಮಯ್ಯ, ಕೊಂಕಣಿಯ ಹಿರಿಯ ಸಾಹಿತಿಯೂ ಆದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ವಲೇರಿಯನ್ ಡಿಸೋಜ (ವಲ್ಲಿ ವಗ್ಗ), ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಭಾಗವಹಿಸುವರು.

ಕನಕಗಿರಿಯಲ್ಲಿ ಬಂದಮ್ಮ ಪೂಜಾ ಮಹೋತ್ಸವ...



ಮೈಸೂರಿನ ಕನಕಗಿರಿಯಲ್ಲಿ ಜರುಗಿದ ಬಂದಮ್ಮ ಹಾಗೂ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮತ್ತು ಕಳಸ ಮೆರವಣಿಗೆಯಲ್ಲಿ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ಕನಕಗಿರಿಯ ಪೂಜಾ ಮಹೋತ್ಸವ ಮಂಡಳಿ ಅಧ್ಯಕ್ಷ ಕೇಬಲ್ ಮಹದೇವು, ನಿರ್ದೇಶಕರಾದ ಶಿವನಂಜು, ಪುಟ್ಟಸ್ವಾಮಿ, ಕಂಸಾಳೆ ರವಿ, ಮಹೇಶ್, ನಾಗರಾಜು, ರಾಜು, ಗುಣಶೇಖರ್, ಚಂದ್ರು, ಮಹದೇವು, ಮಲ್ಲೇಶ್, ಬಾಲು, ಕುಮಾರ್, ಕಂಸಾಳೆ ಸಿದ್ದರಾಮು ಮತ್ತಿತರರು ಉಪಸ್ಥಿತರಿದ್ದರು.

ಪಿಸಿಓಡಿ ತೊಂದರೆಗೆ ಚಿಕಿತ್ಸಾ ಶಿಬಿರ

ಮೈಸೂರು,ಮಾ.19–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮಾ.21ರಿಂದ 29ರವರೆಗೆ ಪಿಸಿಓಡಿ ತೊಂದರೆಗೆ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 9ರಿಂದ ಸಂಜೆ 4.30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9591810699, ದೂ. 0821–2548231 ಸಂಪರ್ಕಿಸಬಹುದು.

ಪ್ರಿಯಕರನ ಜೊತೆ ಸೇರಿ ಗಂಡನ ಕೊಲೆಗೈದು ದೇಹ 15 ತುಂಡು ಮಾಡಿ ಡ್ರಮ್‌ನಲ್ಲಿ ಹಾಕಿ ಸಿಮೆಂಟ್ ಸೀಲ್ ಮಾಡಿದ ಪತ್ನಿ!

ಮೀರತ್, ಮಾ.19– ದೆಹಲಿಯ ಶ್ರದ್ಧಾ ವಾಕರ್ ಕೊಲೆ ಪ್ರಕರಣವನ್ನು ನೆನಪಿಸುವ ಮತ್ತೊಂದು ಪ್ರಕರಣ ವರದಿಯಾಗಿದ್ದು, ಈ ಬಾರಿ ಪತ್ನಿಯೇ ತನ್ನ ಪ್ರಿಯಕರನೊಂದಿಗೆ ಸೇರಿ ನೌಕಾಧಿಕಾರಿ ಗಂಡನ ಕೊಂದು ದೇಹವನ್ನು 15 ತುಂಡು ಮಾಡಿ ಡ್ರಮ್‌ನಲ್ಲಿ ಹಾಕಿ ಸಿಮೆಂಟ್ ಸೀಲ್ ಮಾಡಿರುವ ಭೀಕರ ಘಟನೆ ಬೆಳಕಿಗೆ ಬಂದಿದೆ.

ಉತ್ತರ ಪ್ರದೇಶದ ಮೀರತ್‌ನಲ್ಲಿ ಈ ಪ್ರಕರಣ ಬೆಳಕಿಗೆ ಬಂದಿದ್ದು, ಐದು ವರ್ಷದ ಮಗಳ ಹುಟ್ಟುಹಬ್ಬ ಆಚರಿಸಲು ಮೀರತ್‌ಗೆ ಬಂದಿದ್ದ ನೌಕಾಧಿಕಾರಿ ಸೌರಭ್ ಕುಮಾರ್ ಎಂಬಾತನನ್ನು ಆತನ ಪತ್ನಿಯೇ ಪ್ರಿಯಕರನ ನೆರವಿನಿಂದ ಕೊಂದಿದ್ದಾಳೆ. ಅಚ್ಚರಿ ಎಂದರೆ ಈ ವಿಚಾರವನ್ನು ಆಕೆಯ ತಾಯಿಯೇ ಬಹಿರಂಗ ಮಾಡಿದ್ದು, ಆ ಮೂಲಕ ಮಗಳ ಕುಕೃತ್ಯವನ್ನು ಜಗಜ್ಜಾಹಿರು ಮಾಡಿದ್ದಾರೆ.

ಏನಿದು ಘಟನೆ: ತನ್ನ ಪತ್ನಿ ಮುಸ್ಕಾನ್ ರಸ್ತೋಗಿ ಮತ್ತು ಐದು ವರ್ಷದ ಮಗಳು ಪಿಹುಳ ಹುಟ್ಟುಹಬ್ಬ ಆಚರಿಸಲು ಭಾರತೀಯ ನೌಕಾಧಿಕಾರಿ ಸೌರಭ್ ಕುಮಾರ್ ಲಂಡನ್‌ನಿಂದ ಮೀರತ್‌ಗೆ ಬಂದಿದ್ದರು. ಆದರೆ ಅವನ ಪತ್ನಿ ಮುಸ್ಕಾನ್ ಮತ್ತು ಆಕೆಯ ಪ್ರಿಯಕರ ಸಾಹಿಲ್ ಶುಕ್ಲಾ ಆತನನ್ನು ಕೊಂದು, ನಂತರ ಸೌರಭ್‌ನ ದೇಹವನ್ನು 15 ತುಂಡುಗಳಾಗಿ ಕತ್ತರಿಸಿ, ಪ್ಲಾಸ್ಟಿಕ್ ಡ್ರಮ್‌ನಲ್ಲಿ ಹಾಕಿ ಸಿಮೆಂಟ್ ತುಂಬಿ ಸೀಲ್ ಮಾಡಿದ್ದಾರೆ.

ಸೌರಭ್ ಕುಮಾರ್ ಮತ್ತು ಮುಸ್ಕಾನ್ 2016ರಲ್ಲಿ ಪ್ರೀತಿಸಿ ಮದುವೆಯಾಗಿದ್ದರು. ಸೌರಭ್ ತನ್ನ ಮೀರತ್‌ನ ಪಕ್ಕದ ಮನೆಯ ನಿವಾಸಿಯಾಗಿದ್ದ ಮುಸ್ಕಾನ್‌ಳನ್ನು ಪ್ರೀತಿಸಿ ಮದುವೆಯಾಗಿದ್ದ. ಮದುವೆಯ ನಂತರ ಮರ್ಚೆಂಟ್ ನೇವಿಯಲ್ಲಿ ಕೆಲಸ ಸಿಕ್ಕಿತ್ತು. ಆದರೆ ಒಂದು ವರ್ಷದ ಬಳಿಕ ಆ ಕೆಲಸವನ್ನು ತೊರೆದ ಸೌರಭ್, ಮೀರತ್‌ನ



ಹಂತಕಿ ಮುಸ್ಕಾನ್, ಆಕೆಯ ಪ್ರಿಯಕರ ಸಾಹಿಲ್

ದೆಹಲಿ ರಸ್ತೆಯ ಒಂದು ಪ್ಲೈವುಡ್ ಅಂಗಡಿಯಲ್ಲಿ ಮೂರು ವರ್ಷ ಕೆಲಸ ಮಾಡಿದ್ದ. ಆ ನಂತರ ಲಂಡನ್‌ಗೆ ತೆರಳಿ ಅಲ್ಲಿನ ಒಂದು ಮಾಲ್‌ನಲ್ಲಿ ಸೇಲ್ಸ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ. ಸೌರಭ್ ಮತ್ತು ಮುಸ್ಕಾನ್ ಜೋಡಿಗೆ ಐದು ವರ್ಷದ ಪಿಹು ಎಂಬ ಮಗಳಿದ್ದಳು. ಮೀರತ್‌ನ ಇಂದಿರಾನಗರದಲ್ಲಿ ಓಂಪಾಲ್ ಎಂಬುವರ ಮನೆಯಲ್ಲಿ ಕಳೆದ ಮೂರು ವರ್ಷಗಳಿಂದ ಈ ಜೋಡಿ ಬಾಡಿಗೆಗೆ ವಾಸಿಸುತ್ತಿದ್ದರು.

ಕೊಲೆಗೆ ಭೀಕರ ಪ್ಲಾನ್: ಪೊಲೀಸ್ ಮೂಲಗಳ ಪ್ರಕಾರ ಸೌರಭ್ ಕೊಲೆಗೆ ಮುಸ್ಕಾನ್ ಮತ್ತು ಆಕೆಯ ಪ್ರಿಯಕರ ಸಾಹಿಲ್ ಶುಕ್ಲಾ ಭರ್ಜರಿ ತಯಾರಿ ನಡೆಸಿದ್ದರಂತೆ. ಮಾರ್ಚ್ 4ರ ರಾತ್ರಿ ಸೌರಭ್‌ಗೆ ಮಾದಕ ದ್ರವ್ಯ ಕುಡಿಸಿದ ಬಳಿಕ ಮುಸ್ಕಾನ್ ಮತ್ತು ಪ್ರಿಯಕರ ಸಾಹಿಲ್ ಶುಕ್ಲಾ ಆತನ ಎದೆಗೆ ಚಾಕುವಿನಿಂದ ಇರಿದು, ಗಂಟಲು ಸೀಳಿ ಕೊಲೆ ಮಾಡಿದ್ದಾರೆ. ಕೊಲೆಗೆ ಮುನ್ನ ಚಾಕುಗಳು, ಬ್ಲೇಡ್‌ಗಳು ಮತ್ತು ದೊಡ್ಡ ಪಾಲಿಥಿನ್ ಚೀಲಗಳನ್ನು ಖರೀದಿಸಿ ಯೋಜನೆ ಸಿದ್ಧಪಡಿಸಲಾಗಿತ್ತು. ಕೊಲೆಯಾದ ಬಳಿಕ ಶವವನ್ನು ಬಾತ್ ರೂಂಗೆ ಎಳೆದುಕೊಂಡು ಹೋಗಿ, ಇಬ್ಬರೂ ಸೇರಿ ದೇಹವನ್ನು 15 ತುಂಡುಗಳಾಗಿ ಕತ್ತರಿಸಿದ್ದಾರೆ. ಈ ಸಮಯದಲ್ಲಿ



ಸೌರಭ್ ಕುಮಾರ್ ದೇಹದ ಭಾಗಗಳನ್ನು ತುಂಬಿ ಸೀಲ್ ಮಾಡಿದ್ದ ಡ್ರಮ್ ಧ್ವಂಸಗೊಳಿಸಿರುವುದು

ಸ್ನಾನಗೃಹದಿಂದ ರಕ್ತ ಚರಂಡಿಗೆ ಹರಿಯುತ್ತಿತ್ತು. ಕೈಕಾಲುಗಳನ್ನು ಕತ್ತರಿಸಿ, ದೇಹದ ಭಾಗಗಳನ್ನು ಪಾಲಿಥಿನ್ ಚೀಲಗಳಲ್ಲಿ ಪ್ಯಾಕ್ ಮಾಡಲಾಗಿತ್ತು.

ದೇಹದ ತುಂಡುಗಳ ಡ್ರಮ್‌ನಲ್ಲಿ ಹಾಕಿ ಸೀಲ್: ಕೊಲೆ ಬಳಿಕ ಸಾಹಿಲ್ ದೇಹವನ್ನು ಮುಚಿಡಲು ದೊಡ್ಡ ಡ್ರಮ್ ತಂದಿದ್ದ. ಅಲ್ಲದೆ ಒಂದು ಚೀಲ ಸಿಮೆಂಟ್, ಮಣ್ಣು ಮತ್ತು ಕಟ್ಟಡ ನಿರ್ಮಾಣಕ್ಕೆ ಬಳಸುವ ಡಸ್ಟ್ ಅನ್ನು ಶೇಖರಿಸಿಟ್ಟಿದ್ದ. ದೇಹದ ತುಂಡುಗಳನ್ನು ಡ್ರಮ್‌ನಲ್ಲಿ ತುಂಬಿಸಿ, ನೀರು ಸುರಿದು ಸಿಮೆಂಟ್ ಮತ್ತು ಡಸ್ಟ್ ಹಾಕಿ ಅದನ್ನು ಮುಚ್ಚಿದ್ದ. ಇದೇ ಡ್ರಮ್ ನಲ್ಲಿ ಸೌರಭ್ ದೇಹ ಕತ್ತರಿಸಲು ಬಳಸಲಾಗಿದ್ದ ಚಾಕು, ಕತ್ತಿಗಳನ್ನು ಕೂಡ ಹಾಕಿ ಸಿಮೆಂಟ್‌ನಿಂದ ಸೀಲ್ ಮಾಡಲಾಗಿತ್ತು.

ಮಗಳ ಬಿಟ್ಟು ಪರಾರಿಯಾಗಿದ್ದ ಮುಸ್ಕಾನ್: ಮುಸ್ಕಾನ್ ನೆರೆಹೊರೆಯ ಜನರಿಗೆ ಸೌರಭ್ ಜೊತೆ ವಾಕ್ ಮಾಡಲು ಹೋಗುತ್ತಿರುವುದಾಗಿ ಹೇಳಿಕೊಂಡಿದ್ದಳು. ಸೌರಭ್ ಕೊಲೆಯ ನಂತರ ಮುಸ್ಕಾನ್ ತನ್ನ ಮನೆಗೆ ಬೀಗ ಹಾಕಿ ಐದು ವರ್ಷದ ಮಗಳು ಪಿಹುವನ್ನು ತನ್ನ ಹೆತ್ತವರ ಮನೆಯಲ್ಲಿ ಬಿಟ್ಟು ಪ್ರಿಯಕರ ಸಾಹಿಲ್ ಜೊತೆ ಶಿಮ್ಲಾಕ್ಕೆ ಪರಾರಿಯಾಗಿದ್ದಳು.

ಪ್ರಕರಣ ಬಯಲಾಗಿದ್ದೇ ರೋಚಕ: ಮುಸ್ಕಾನ್ ತನ್ನ ಪ್ರಿಯಕರ ಸಾಹಿಲ್ ಜೊತೆ ಸೌರಭ್ ಖಾತೆಯಿಂದ ಹಣವನ್ನು ಹಿಂಪಡೆಯಲು ಪ್ರಯತ್ನಿಸಿದ್ದಾರೆ. ಸೌರಭ್ ಅವರ ಖಾತೆಯಲ್ಲಿ ಸುಮಾರು ಆರು ಲಕ್ಷ ರೂಪಾಯಿಗಳಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಇಬ್ಬರೂ ಅದನ್ನು ತೆಗೆಯಲು ಪ್ರಯತ್ನಿಸಿದರು. ಆದರೆ ಅವರು ಯಶಸ್ವಿಯಾಗಲಿಲ್ಲ. ಇದಾದ ನಂತರ ಮುಸ್ಕಾನ್ ತನ್ನ ತಾಯಿಯನ್ನು ಸಂಪರ್ಕಿಸಿ ಹಣ ಕೇಳಿದ್ದಾಳೆ. ತಾಯಿ ಸೌರಭ್ ಬಗ್ಗೆ ಕೇಳಿದಾಗ, ಮುಸ್ಕಾನ್ ಅನುಮಾನಾಸ್ಪದ ಉತ್ತರ ನೀಡಿದ್ದಾಳೆ. ಈ ವೇಳೆ ಅವರ ತಾಯಿ ಗದರಿ ಕೇಳಿದಾಗ ಮುಸ್ಕಾನ್ ಕೊಲೆ ವಿಚಾರ ಬಾಯಿ ಬಿಟ್ಟಿದ್ದಾಳೆ. ಇದನ್ನು ಕೇಳಿದ ತಕ್ಷಣ ಮುಸ್ಕಾನ್ ತಾಯಿ ಗಾಬರಿಯಾಗಿದ್ದಾರೆ. ಅಲ್ಲದೆ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಮುಸ್ಕಾನ್‌ಳನ್ನು ವಶಕ್ಕೆ ತೆಗೆದುಕೊಂಡು ತೀವ್ರ ವಿಚಾರಣೆ ನಡೆಸಿದಾಗ ಆಕೆ ತನ್ನ ಅಪರಾಧವನ್ನು ಒಪ್ಪಿಕೊಂಡಿದ್ದಾಳೆ.

ಪೊಲೀಸರು ಹೇಳಿದ್ದೇನು: ಸೌರಭ್ ರಜಪೂತ್ ಹಲವು ದಿನಗಳಿಂದ ಕಾಣದಿದ್ದಾಗ ಅವರ ಕುಟುಂಬ ದೂರು ದಾಖಲಿಸಿದೆ ಎಂದು ಮೀರತ್ ನಗರ ಪೊಲೀಸ್ ಮುಖ್ಯಸ್ಥ ಆಯುಷ್ ವಿಕ್ರಮ್ ಸಿಂಗ್ ಹೇಳಿದ್ದಾರೆ. ಅನುಮಾನದ ಮೇಲೆ ನಾವು ಅವರ ಪತ್ನಿ ಮುಸ್ಕಾನ್ ಮತ್ತು ಆಕೆಯ ಪ್ರಿಯಕರ ಸಾಹಿಲ್ ವಶಕ್ಕೆ ಪಡೆದಿದ್ದೇವೆ. ವಿಚಾರಣೆಯ ಸಮಯದಲ್ಲಿ, ಮಾರ್ಚ್ 4ರಂದು ಅವರು ಸೌರಭ್‌ರನ್ನು ಚಾಕುವಿನಿಂದ ಇರಿದು ಕೊಂದಿರುವುದಾಗಿ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾರೆ. ಆರೋಪಿಗಳು ಸೌರಭ್ ಶವವನ್ನು ಕತ್ತರಿಸಿ, ಡ್ರಮ್‌ನಲ್ಲಿ ಹಾಕಿ ಸಿಮೆಂಟ್‌ನಿಂದ ಮುಚ್ಚಿದ್ದಾರೆ. ಪೊಲೀಸರು ಶವವನ್ನು ವಶಪಡಿಸಿಕೊಂಡು ಶವಪರೀಕ್ಷೆಗೆ ಕಳುಹಿಸಿದ್ದಾರೆ. ನಾವು ಇಬ್ಬರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಹಿರಿಯ ಅಧಿಕಾರಿ ಹೇಳಿದ್ದಾರೆ.

ದೇಶ - ವಿದೇಶ

ಗ್ರಾಹಕನ ಮೇಲೆ ಟೀ ಚೆಲ್ಲಿದ್ದಕ್ಕೆ 432 ಕೋಟಿ ರೂ ದಂಡ!

ಲಾಸ್ ಏಂಜಲೀಸ್: ಟೀ ಪಾರ್ಸೆಲ್ ನೀಡುವಾಗ ಗ್ರಾಹಕನ ಮೇಲೆ ಟೀ ಬಿದ್ದ ಪರಿಣಾಮ ಟೀ ತಯಾರಿಕಾ ಸಂಸ್ಥೆಗೆ ಕೋರ್ಟ್ ಬರೋಬ್ಬರಿ 50 ಮಿಲಿಯನ್ ಡಾಲರ್ (4,32,81,55,000) ದಂಡ ಹಾಕಿದ ಅಚ್ಚರಿ ಘಟನೆ ವರದಿಯಾಗಿದೆ.

ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಈ ಘಟನೆ ನಡೆದಿದ್ದು, ಇಲ್ಲಿನ ಡ್ರೈವ್–ಥ್ರೂನಲ್ಲಿ ಗ್ರಾಹಕನಿಗೆ ಟೀ ಪಾರ್ಸೆಲ್ ನೀಡುವಾಗ ಅಜಾಗರೂಕವಾಗಿ ವರ್ತಿಸಿ ಬಿಸಿ ಚಹಾ ಆತನ ಮೇಲೆ ಬೀಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಖ್ಯಾತ ಚಹಾ ತಯಾರಿಕಾ ಸಂಸ್ಥೆ Starbuckಗೆ 50 ಮಿಲಿಯನ್ ಡಾಲರ್ ದಂಡ ಹಾಕಲಾಗಿದೆ. ಫೆಬ್ರವರಿ 2020ರಲ್ಲಿ ಮೈಕೆಲ್ ಗಾರ್ಸಿಯಾ ಎಂಬುವವರು ಕ್ಯಾಲಿಫೋರ್ನಿಯಾದ ಡ್ರೈವ್–ಥ್ರೂನಲ್ಲಿರುವ ಸ್ಟಾರ್‌ಬಕ್ಸ್ ಕೆಫೆಗೆ ತೆರಳಿದ್ದರು. ಈ ವೇಳೆ ಅವರು ಮೂರು ಸೂಪರ್–ಸೈಜ್ ಚಹಾ ಆರ್ಡರ್ ಮಾಡಿದ್ದರು. ಆರ್ಡರ್ ಪಡೆದ ಸ್ಟಾರ್ ಬಕ್ಸ್ ಮಹಿಳಾ ಸಿಬ್ಬಂದಿ ಚಹಾ ಕಪ್‌ಗಳನ್ನು ಒಂದು ಟ್ರೇನಲ್ಲಿಟ್ಟುಕೊಂಡು ಮೈಕೆಲ್ ಗಾರ್ಸಿಯಾರ ಕಾರಿನ ಕಿಟಕಿಯೊಳಗೆ ನೀಡಿದ್ದಾರೆ. ಈ ವೇಳೆ ಚಹಾ ಕಪ್ ಕಾರಿಗೆ ತಗುಲಿ ನೋಡ ನೋಡುತ್ತಲೇ ಬಿಸಿ ಬಿಸಿ ಚಹಾ ಅವರ ಕಾಲಿನ ಮೇಲೆ ಬಿದ್ದಿದೆ. ಈ ವೇಳೆ ಮೈಕೆಲ್‌ರ ಮರ್ಮಾಂಗ, ತೊಡೆಸಂದು ಮತ್ತು ಒಳ ತೊಡೆಗಳಲ್ಲಿ ಸುಟ್ಟಗಾಯಗಳಿಗೆ ಕಾರಣವಾಗಿದೆ.

ಮಿನಿ ಬಸ್‌ಗೆ ಬೆಂಕಿ; 4 ಮಂದಿ ಸಜೀವ ದಹನ

ಪುಣೆ: ಬುಧವಾರ ಮುಂಜಾನೆ ಭೀಕರ ಅಪಘಾತ



ಸಂಭವಿಸಿದ್ದು, ಖಾಸಗಿ ಮಿನಿ ಬಸ್‌ಗೆ ಬೆಂಕಿ ಹೊತ್ತಿದ ಪರಿಣಾಮ ಬಸ್‌ನಲ್ಲಿದ್ದ ಪ್ರಯಾಣಿಕರ ಪೈಕಿ 4 ಮಂದಿ ಸಜೀವ ದಹನವಾಗಿದ್ದಾರೆ. ಮಹಾರಾಷ್ಟ್ರದ ಪಿಂಪ್ರಿ ಚಿಂಚ್‌ವಾಡ್ ಪ್ರದೇಶದ ಹಿಂಜೇವಾಡಿಯಲ್ಲಿ ಬೆಳಗ್ಗೆ 7.30ರ ಸುಮಾರಿಗೆ ಈ ಘಟನೆ ಸಂಭವಿಸಿದೆ. ವಾಹನವು ವ್ಯೋಮಾ ಗ್ರಾಫಿಕ್ಸ್‌ನ 12 ಉದ್ಯೋಗಿಗಳನ್ನು ವಾರ್ಜೆಯಿಂದ ಹಿಂಜೇವಾಡಿಗೆ ಕರೆದೊಯ್ಯುತ್ತಿತ್ತು. ವಾಹನವು ಡಸ್ಸಾಲ್ಟ್ ಸಿಸ್ಟಮ್ಸ್ ಬಳಿ ಇದ್ದಾಗ ಚಾಲಕನ ಪಾದದ ಬಳಿ ಮೊದಲು ಬೆಂಕಿ ಕಾಣಿಸಿಕೊಂಡಿತು. ಬೆಂಕಿ ಮುಂಭಾಗಕ್ಕೆ ಹರಡುತ್ತಿದ್ದಂತೆಯೇ ಚಾಲಕ ವಾಹನವನ್ನು ನಿಲ್ಲಿಸಿದ್ದಾನೆ. ಅಪಾಯವನ್ನರಿತ ನಾಲ್ವರು ಉದ್ಯೋಗಿಗಳು ತಕ್ಷಣ ಮಿನಿ ಬಸ್‌ನಿಂದ ಇಳಿದರು. ಆದರೆ ನಿರ್ಗಮನ ಬಾಗಿಲು ಜಾಮ್ ಆಗಿ ತೆರೆದುಕೊಳ್ಳದ ಕಾರಣ ಕೆಲ ಉದ್ಯೋಗಿಗಳು ಬೆಂಕಿಯಲ್ಲಿ ಸಿಲುಕಿಕೊಂಡರು. ಹೀಗಾಗಿ 4 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮತ್ತೆ ನಾಲ್ವರನ್ನು ಇತರರ ನೆರವಿನಿಂದ ರಕ್ಷಿಸಲಾಗಿದ್ದು ಸುಟ್ಟಗಾಯಗಳೊಂದಿಗೆ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಸಂಪೂರ್ಣ ಎಐನಿಂದಲೇ ಪ್ರಕಟವಾದ ಮೊದಲ ದಿನಪತ್ರಿಕೆ

ಇಟಲಿ: ಮೊದಲ ಬಾರಿಗೆ ಜಗತ್ತಿನಲ್ಲೇ ಸಂಪೂರ್ಣ



ವಾಗಿ ಕೃತಕ ಬುದ್ಧಿಮತ್ತೆಯಿಂದ(ಎಐ) ರೂಪಿಸಲಾದ ಸಂಚಿಕೆಯನ್ನು ಮಂಗಳವಾರ ಪ್ರಕಟಿಸಿರುವುದಾಗಿ ಇಟಲಿಯ ಎಲ್ ಫೋಗ್ಲಿಯೋ ಹೇಳಿಕೊಂಡಿದೆ.

ಎಐ ಹೇಗೆ ನಮ್ಮ ಕೆಲಸದ ಮೇಲೆ ಪರಿಣಾಮ ಬೀರಬಹುದು ಎಂಬ ಪ್ರಯೋಗಾರ್ಥವಾಗಿ ಸಂಚಿಕೆ ರೂಪಿಸಲಾಗಿದೆ ಎಂದು ಪತ್ರಿಕೆ ಸಂಪಾದಕ ಕ್ಲಾಡಿಯೊ ಸೆರಾಸಾ ತಿಳಿಸಿದ್ದಾರೆ. ವರದಿಗಾರಿಕೆ, ಶೀರ್ಷಿಕೆ, ಕೋಟ್‌ಗಳು, ಸಾರಾಂಶ ಸೇರಿ ಎಲ್ಲದಕ್ಕೂ ಎಐ ಬಳಕೆಯಾಗಿದೆ. ಎಐ ಟೂಲ್‌ಗಳಲ್ಲಿ ಪ್ರಶ್ನೆಗಳನ್ನು ಕೇಳುವುದು ಮತ್ತು ಉತ್ತರಗಳನ್ನು ಓದುವುದಕ್ಕಷ್ಟೇ ಪತ್ರಕರ್ತರ ಪಾತ್ರ ಸೀಮಿತವಾಗಿತ್ತು ಎಂದಿದ್ದಾರೆ. ಪ್ರಕಟವಾದ ಯಾವುದೇ ಲೇಖನಗಳಲ್ಲಿ ಮಾನವರ ಹೇಳಿಕೆಯನ್ನು ಕೋಟ್ ಮಾಡಲಾಗಿಲ್ಲ ಎಂಬುದು ವಿಶೇಷವಾಗಿದೆ. 4 ಪುಟಗಳ ಎಲ್ ಫೋಗ್ಲಿಯೋ ಸಂಪೂರ್ಣವಾಗಿ ಎಐನಿಂದ ರೂಪಿಸಿರುವ ಪ್ರಯೋಗವು ಮುಂಬರುವ ದಿನಗಳಲ್ಲಿ ಪತ್ರಿಕೋದ್ಯಮದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆಯ ಸಾಧ್ಯತೆಗಳನ್ನು ತೆರೆದಿಟ್ಟಿದೆ.

ಮಧ್ಯಪ್ರದೇಶ ದೋಣಿ ದುರಂತ: ಏಳು ಮಂದಿ ಸಾವು

ಶಿವಪುರಿ: ಮಧ್ಯಪ್ರದೇಶದ ಶಿವಪುರಿ ಜಿಲ್ಲೆಯ ಮಾತಟಿಲಾ ಅಣೆಕಟ್ಟಿನಲ್ಲಿ ದೋಣಿ ಮಗುಚಿ 7 ಜನ ಮೃತಪಟ್ಟಿದ್ದರು, ಮೂವರು ಮಕ್ಕಳು ಸೇರಿದಂತೆ 6 ಜನರ ಶವಗಳನ್ನು ಹೊರತೆಗೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೋಣಿಯಲ್ಲಿದ್ದ ಮತ್ತೊಬ್ಬ ಬಾಲಕಿಗಾಗಿ ಹುಡುಕಾಟ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಖಾನಿಯಾಧಾನ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಮಾತಿಟಿಲಾ ಅಣೆಕಟ್ಟಿನ ದ್ವೀಪದಲ್ಲಿರುವ ದೇವಸ್ಥಾನಕ್ಕೆ 15 ಜನರನ್ನು ಕರೆದೊಯ್ಯುತ್ತಿದ್ದ ದೋಣಿ ಮಂಗಳವಾರ ಸಂಜೆ ಮಗುಚಿ ಬಿದ್ದಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಗ್ರಾಮಸ್ಥರ ಸಹಾಯದಿಂದ ಎಂಟು ಜನರನ್ನು ರಕ್ಷಿಸಲಾಗಿದ್ದರೆ, ಇತರ ಏಳು ಜನರು ನೀರಿನಲ್ಲಿ ನಾಪತ್ತೆಯಾಗಿದ್ದರು. ಆ ಪೈಕಿ ಆರು ಜನರ ಶವಗಳನ್ನು ಹೊರತೆಗೆಯಲಾಗಿದೆ ಎಂದು ಹೇಳಿದ್ದಾರೆ. ರಾತ್ರಿಯಿಡೀ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು ಮತ್ತು ಬುಧವಾರ ಮಧ್ಯಾಹ್ನದವರೆಗೆ ಕಾಣೆಯಾದ ಆರು ಜನರ ಶವಗಳನ್ನು ಹೊರತೆಗೆಯಲಾಗಿದೆ ಎಂದು ಪಿಚೋರ್‌ನ ಉಪ ವಿಭಾಗೀಯ ಪೊಲೀಸ್ ಅಧಿಕಾರಿ ಪ್ರಶಾಂತ್ ಶರ್ಮಾ ತಿಳಿಸಿದ್ದಾರೆ. ಕಾಣೆಯಾದ 15 ವರ್ಷದ ಕುಂಕುಮ್ ಎಂಬ ಬಾಲಕಿಗಾಗಿ ಹುಡುಕಾಟ ಇನ್ನೂ ಮುಂದುವರೆದಿದೆ ಎಂದು ಅವರು ಹೇಳಿದ್ದಾರೆ.

ಅಪರಿಚಿತರ ಗುಂಡಿನ ದಾಳಿಗೆ ಜೆಯುಐ ಮುಖಂಡ ಹತ್ಯೆ

ಇಸ್ಲಾಮಾಬಾದ್: ಲಷ್ಕರ್ ಎ ತೊಯ್ಬಾ ಉಗ್ರ ಸಂಘಟನೆ ಮುಖ್ಯಸ್ಥ ಹಫೀಜ್ ಸಯೀದ್‌ನ



ಸಂಬಂಧಿ ಹಾಗೂ 2013ರ ರಜೌರಿ ದಾಳಿ ಹಿಂದಿನ ಮಾಸ್ಟರ್ ಮೈಂಡ್ ಅಬು ಖತಲ್ ಪಾಕಿಸ್ತಾನದಲ್ಲಿ ಅಪರಿಚಿತರಿಂದ ಹತನಾಗಿದ್ದ ಬೆನ್ನಲ್ಲೇ ಕ್ವೆಟ್ಟಾ ವಿಮಾನ ನಿಲ್ದಾಣದಲ್ಲಿ ಅಪರಿಚಿತ ವ್ಯಕ್ತಿಗಳ ಗುಂಡಿನ ದಾಳಿಗೆ ಜಾಮಿಯತ್ ಇ ಇಸ್ಲಾಮ್ (ಜೆಯುಐ) ಹಿರಿಯ ಮುಖಂಡ ಮುಫ್ತಿ ಅಬ್ದುಲ್ ಬಾಖಿ ನೂರ್ಜೈ ಹತ್ಯೆಯಾಗಿರುವ ಘಟನೆ ನಡೆದಿದೆ. ಇಸ್ಲಾಮಿಕ್ ವಿದ್ವಾಂಸ, ಜೆಯುಐನ ಹಿರಿಯ ಸದಸ್ಯ, ಭಾರತದ ಕಟ್ಟರ್ ವಿರೋಧಿಯಾಗಿದ್ದ ನೂರ್ಜೈ ಮೇಲೆ ಅಪರಿಚಿತ ವ್ಯಕ್ತಿಗಳು ಗುಂಡು ಹಾರಿಸಿದ್ದರು. ಚಿಂತಾಜನಕ ಸ್ಥಿತಿಯಲ್ಲಿದ್ದ ನೂರ್ಜೈಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ದಾರಿ ಮಧ್ಯೆಯೇ ಈತನ ಪ್ರಾಣಪಕ್ಷಿ ಹಾರಿ ಹೋಗಿರುವುದಾಗಿ ವೈದ್ಯರು ಘೋಷಿಸಿದ್ದರು.

ಪಾಕಿಸ್ತಾನ ಹಾಗೂ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಸರಣಿ ಹತ್ಯಾ ಪ್ರಕರಣದಲ್ಲಿ ನೂರ್ಜೈ ಘಟನೆ ಹೊಸ ಸೇರ್ಪಡೆಯಾಗಿದೆ. ಕಳೆದ 3 ವರ್ಷಗಳಲ್ಲಿ ಲಷ್ಕರ್ ಎ ತೊಯ್ಬಾ, ಜೈಶ್ ಎ ಮೊಹಮ್ಮದ್ ಹಾಗೂ ಹಿಜ್ಬುಲ್ ಮುಜಾಹಿದೀನ್ ಉಗ್ರ ಸಂಘಟನೆಯ 15ಕ್ಕೂ ಅಧಿಕ ಉಗ್ರರನ್ನು ಅಪರಿಚಿತ ವ್ಯಕ್ತಿಗಳು ಹೊಡೆದುರುಳಿಸಿರುವುದಾಗಿ ವರದಿ ವಿವರಿಸಿದೆ.

ಪೊಲೀಸ್ ಬಂದೋಬಸ್ತಿನಲ್ಲಿ ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಭೂಮಿ ಪೂಜೆ

ದಲಿತ ಸಂಘಟನೆಗಳ ನಡುವೆ ತೀವ್ರ ಭಿನ್ನಾಭಿಪ್ರಾಯ

ಮಡಿಕೇರಿ,ಮಾ.19– ಜಿಲ್ಲಾ ಕೇಂದ್ರ ಮಡಿಕೇರಿಯ ಸುದರ್ಶನ ವೃತ್ತದ ಬಳಿಯ ಡಾ. ಅಂಬೇಡ್ಕರ್ ಸಮುದಾಯ ಭವನದ ಆವರಣದಲ್ಲಿ ವಿವಿಧ ದಲಿತ ಸಂಘಟನೆಗಳ ವಿರೋಧದ ನಡುವೆ ಪೊಲೀಸ್ ಬಂದೋಬಸ್ತ್‌ನಡಿ 'ಡಾ.ಅಂಬೇಡ್ಕರ್ ಪ್ರತಿಮೆ' ನಿರ್ಮಾಣಕ್ಕೆ ಭೂಮಿ ಪೂಜೆಯನ್ನು ನಡೆಸಲಾಯಿತು. ಡಾ. ಅಂಬೇಡ್ಕರ್ ಸಮುದಾಯ ಭವನದ ಹಕ್ಕಿಗಾಗಿ ಕಳೆದ ಕೆಲ ಸಮಯಗಳಿಂದ ಭವನದ ಆಡಳಿತ ಮಂಡಳಿ ಮತ್ತು ವಿವಿಧ ದಲಿತ ಸಂಘಟನೆಗಳ ನಡುವೆ ಭಿನ್ನಾಭಿಪ್ರಾಯಗಳಿದ್ದು, ವಿಷಯಕ್ಕೆ ಸಂಬಂಧಿಸಿದಂತೆ ವಾದ ವಿವಾದ, ಪ್ರತಿಭಟನೆಗಳು ನಡೆದಿದೆ. ಡಾ.ಅಂಬೇಡ್ಕರ್ ಸಮುದಾಯದ ಭವನದ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಮಾಡುವ ಹಿನ್ನೆಲೆಯಲ್ಲಿ, ಬುಧವಾರ ಭವನದ ಆಡಳಿತ ಮಂಡಳಿ ಅಧ್ಯಕ್ಷ ಹೆಚ್.ಎಂ. ನಂದಕುಮಾರ್, ನಿರ್ದೇಶಕ ಹೆಚ್.ಆರ್. ಮುತ್ತಪ್ಪ ಹಾಗೂ ಬಿ.ಎನ್. ಮುದ್ದುರಾಜ್ ಮತ್ತು ಡಾ.ಸತೀಶ್ ಅವರು ಭೂಮಿ ಪೂಜೆಯನ್ನು ನೆರವೇರಿಸಿದರು.

ಭೂಮಿ ಪೂಜೆಗೆ ವಿರೋಧ: ಡಾ. ಅಂಬೇಡ್ಕರ್ ಸಮುದಾಯ ಭವನ ಆವರಣದಲ್ಲಿ ಡಾ.ಅಂಬೇಡ್ಕರ್ ಪ್ರತಿಮೆ ಸ್ಥಾಪನೆ ಉಚಿತವಲ್ಲ. ಈಗಾಗಲೆ ಜಿಲ್ಲಾಡಳಿತದಿಂದ ವೃತ್ತದ ಬಳಿ ಪ್ರತಿಮೆ ಸ್ಥಾಪನೆಗೆ ನಿರ್ಧಾರವಾಗಿರುವುದರಿಂದ, ಭವನದ ಆವರಣದಲ್ಲಿ ಪ್ರತಿಮೆ ಸ್ಥಾಪಿಸಬಾರದು ಎಂದು ಜಿಲ್ಲಾ ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ಹೆಚ್.ಎಲ್. ದಿವಾಕರ್ ಮತ್ತು ಪ್ರಮುಖರು ಆಗ್ರಹಿಸಿದ್ದರು. ಪ್ರತಿಮೆ ನಿರ್ಮಾಣಕ್ಕೆ ಮುಂದಾದಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದರು. ಅದರಂತೆ ಇಂದು ಬೆಳಗ್ಗೆ ದಸಂಸ ಜಿಲ್ಲಾ ಸಂಚಾಲಕ ಹೆಚ್.ಎಲ್. ದಿವಾಕರ್, ನಗರಸಭಾ ಸದಸ್ಯ ಹೆಚ್.ಸಿ.ಸತೀಶ್, ಪ್ರೇಂಕುಮಾರ್, ಅಂಬೇಡ್ಕರ್ ಹೋರಾಟ ಸಮಿತಿಯ ಗೌರವ ಸಲಹೆಗಾರ ಎನ್.ವೀರಭದ್ರಯ್ಯ, ಉಪಾಧ್ಯಕ್ಷ ಡಿ.ಜೆ.ಈರಪ್ಪ, ಟಿ.ಎನ್.ಗೋವಿಂದಪ್ಪ, ದಸಂಸ ಜಿಲ್ಲಾ ಸಂಚಾಲಕಿ ಹೆಚ್.ಕೆ.ಪ್ರೇಮ ಕೃಷ್ಣಪ್ಪ, ಸೋಮವಾರಪೇಟೆಯ ನಿರ್ವಾಣಪ್ಪ, ನಾಗೇಂದ್ರ, ದಿಲೀಪ್ ಒಳಗೊಂಡಂತೆ ಹಲವರು ಡಾ.ಅಂಬೇಡ್ಕರ್ ಸಮುದಾಯ ಭವನದ ಬಳಿಗೆ ಆಗಮಿಸಿ ಪ್ರತಿಭಟನೆಗೆ ಮುಂದಾದರು.

ಪೊಲೀಸ್ ಮಧ್ಯ ಪ್ರವೇಶ: ಸ್ಥಳದಲ್ಲಿ ಬಿಗುವಿನ ವಾತಾವರಣ ಏರ್ಪಟಿದ್ದ ಹಿನ್ನೆಲೆಯಲ್ಲಿ ಡಾ. ಅಂಬೇಡ್ಕರ್ ಸಮುದಾಯ ಭವನದ ಆವರಣದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಅಳವಡಿಸಲಾಗಿತ್ತು. ಭವನದ ಸುತ್ತ ಮುತ್ತಲ ಪ್ರದೇಶದಲ್ಲಿ ನಿಷೇಧಾಜ್ಞೆ ವಿಧಿಸಲಾಗಿದೆ. ಆದ್ದರಿಂದ ಪ್ರತಿಭಟನೆಗೆ ಅವಕಾಶವಿಲ್ಲ. 5 ಮಂದಿಗಿಂತ ಹೆಚ್ಚಿನವರು ಒಟ್ಟಾಗಿ ಬರುವಂತಿಲ್ಲ ಎಂದು ಪ್ರತಿಭಟನಾಕಾರರಿಗೆ ಹೇಳಿದರು.

ಪೊಲೀಸರ ಸಮಜಾಯಿಷಿಗೆ ಸ್ಪಂದಿಸಿದ ದಸಂಸ ಪ್ರಮುಖರು ಭವನದ ಆವರಣದಿಂದ ಹೊರ ತೆರಳಿದರು. ಒಂದು ಹಂತದಲ್ಲಿ ಭವನದ ಅಧ್ಯಕ್ಷ ಹೆಚ್.ಎಂ. ನಂದ ಕುಮಾರ್ ಮತ್ತು ಹೆಚ್.ಸಿ. ಸತೀಶ್ ಅವರ ನಡುವೆ ಈ ಸಂದರ್ಭ ವಾಗ್ವಾದ ನಡೆಯಿತು. ಇಷ್ಟೆಲ್ಲ ಬೆಳವಣಿಗೆಗಳ ನಡುವೆ ಭವನದ ಅಧ್ಯಕ್ಷ ಹೆಚ್.ಎಂ. ನಂದ ಕುಮಾರ್ ಸೇರಿದಂತೆ ನಾಲ್ವರು ಭವನದ ಆವರಣದಲ್ಲಿ ಸರಳವಾಗಿ ಭೂಮಿ ಪೂಜೆಯನ್ನು ನೆರವೇರಿಸಿದರು.

ಪ್ರತಿಮೆ ನಿರ್ಮಾಣವಾಗಲಿದೆ

ಮುಂಬರುವ ಡಾ.ಅಂಬೇಡ್ಕರ್ ಜಯಂತಿಯೊಳಗೆ 15 ಅಡಿ ಎತ್ತರದ ಪೀಠದ ಮೇಲೆ 18 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಸರ್ವರ ಸಹಕಾರದೊಂದಿಗೆ ಸ್ಥಾಪಿಸಲಾಗುವುದು ಎಂದು ಡಾ.ಅಂಬೇಡ್ಕರ್ ಭವನ ಸಮಿತಿಯ ಅಧ್ಯಕ್ಷ ಹೆಚ್.ಎಂ. ನಂದಕುಮಾರ್ ತಿಳಿಸಿದರು. ಡಾ.ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಸಮಿತಿಯಿಂದ ಡಾ.ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣಗೊಳ್ಳಲಿದೆ ಎಂದು ತಿಳಿಸಿದ ಅವರು, ಕೆಲವು ಕಿಡಿಗೇಡಿಗಳು ಮಡಿಕೇರಿಯಲ್ಲಿ ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣವಾಗಬಾರದು ಎನ್ನುವ ದುರುದ್ದೇಶದಿಂದ ಈ ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಸೌಹಾರ್ದತೆಯಿಂದ ಎಲ್ಲರೂ ಸೇರಿ ಪ್ರತಿಮೆ ನಿರ್ಮಿಸಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಆದರೆ ಇದಕ್ಕೆ ಕೆಲವರು ಒಪ್ಪಿಗೆ ಸೂಚಿಸದೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಯಾವುದೇ ಅಡ್ಡಿ ಎದುರಾದರೂ ಎಲ್ಲರ ಸಹಕಾರ ಪಡೆದುಕೊಂಡು ಪ್ರತಿಮೆ ಸ್ಥಾಪಿಸುವುದು ಶತಃಸಿದ್ಧ ಎಂದರು.



ಪೊಲೀಸ್ ಬಂದೋಬಸ್ತ್ ಅಡಿ 'ಡಾ.ಅಂಬೇಡ್ಕರ್ ಪ್ರತಿಮೆ' ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿತು.

ಕುಡಿಯುವ ನೀರಿನ ವ್ಯವಸ್ಥೆ ಆದ್ಯತೆಗೆ ಕ್ರಮ

ವಿರಾಜಪೇಟೆ ಪುರಸಭೆಯ ಉಳಿತಾಯ ಬಜೆಟ್ ಮಂಡನೆ

ವಿರಾಜಪೇಟೆ, ಮಾ.19– ಪುರಸಭೆಯ 2025–26ನೇ ಸಾಲಿಗೆ 5,80,90,311 ರೂಗಳ ಉಳಿತಾಯ ಬಜೆಟನ್ನು ಪುರಸಭೆಯ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಮಂಡಿಸಿದರು.

2025–26ನೇ ಸಾಲಿಗೆ ನಿರೀಕ್ಷಿತ ಖರ್ಚು 86,80,32,250 ರೂ.ಗಳ ಬಜೆಟ್ ಮಂಡಿಸಿದ್ದಾರೆ. ಎಂದಿನಂತೆ ಉಳಿತಾಯ ಬಜೆಟ್ ರೂಪಿಸಿದ್ದು ಪ್ರಾರಂಭಿಕ ಶಿಲ್ಕು 5,80,90,311 ರೂ. ಸೇರಿದಂತೆ ಈ ಸಾಲಿನ ನಿರೀಕ್ಷಿತ ಆದಾಯ 81,59,77,250 ರೂ. ಇದ್ದು ಒಟ್ಟು ಆದಾಯ 87,40,67,561 ರೂ. ಆಗಿದೆ.

ಬಜೆಟ್ ಮಂಡನೆ ಬಳಿಕ ಮಾತನಾಡಿದ ಅಧ್ಯಕ್ಷೆ ದೇಚಮ್ಮ, ಮೂಲಭೂತ ಸೌಕರ್ಯ, ಚರಂಡಿ ನಿರ್ಮಾಣ, ಸ್ವಚ್ಛತೆ, ರಸ್ತೆ ಅಭಿವೃದ್ಧಿ, ಬೀದಿ ದೀಪ ಅಳವಡಿಕೆ, ಹೊಸದಾಗಿ ಸೇರ್ಪಡೆಗೊಂಡ ಬಿಟ್ಟಂಗಾಲ, ಚೆಂಬೆಬೆಳ್ಳೂರು, ಅರ್ಜಿ ಗ್ರಾ.ಪಂ ವ್ಯಾಪ್ತಿಯ ಭಾಗಶಃ ಭಾಗಗಳಿಗೆ ಚರಂಡಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆಗೆ ಒತ್ತು ನೀಡಲಾಗುತ್ತದೆ. ವಿಶೇಷವಾಗಿ ಬೇತ್ರಿ 2ನೇ ಹಂತದ ಕುಡಿಯುವ ನೀರಿನ ಕಾಮಗಾರಿ ಪ್ರಗತಿಯಲ್ಲಿದ್ದು ಮುಂದಿನ ದಿನದಲ್ಲಿ ಪಟ್ಟಣದಲ್ಲಿ ನೀರಿನ ಸಮಸ್ಯೆ ನೀಗಲಿದೆ.



ವಿರಾಜಪೇಟೆ ಪುರಸಭೆಯ 2025–26ನೇ ಸಾಲಿನ ಬಜೆಟನ್ನು ಪುರಸಭೆಯ ಅಧ್ಯಕ್ಷೆ ಎಂ.ಕೆ.ದೇಚಮ್ಮ ಬುಧವಾರ ಮಂಡಿಸಿದರು.

ಇದೇ ಸಂದರ್ಭ ವಿರಾಜಪೇಟೆಯ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುತ್ತಿರುವ ಶಾಸಕರಿಗೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಸದಸ್ಯೆ ಅನಿತಾ ಬಜೆಟ್ ವಿಚಾರದಲ್ಲಿ ಮಾತನಾಡಿ ಬೆಟ್ಟ ಪ್ರದೇಶಗಳಲ್ಲಿ ಬೇಸಿಗೆಯಲ್ಲಿ ಕಾಡಿಗೆ ಬೆಂಕಿ ಬೀಳುತ್ತಿದ್ದು, ಪುರಸಭೆಯ ವ್ಯಾಪ್ತಿಯಲ್ಲಿ ಅಗ್ನಿಶಾಮಕ ಘಟಕವನ್ನು ಸ್ಥಾಪಿಸುವಂತೆ ಒತ್ತಾಯಿಸಿದರು. ಇವರ ಮನವಿಗೆ ಸ್ಪಂದಿಸಿದ ಅಧ್ಯಕ್ಷೆ ಈಗಾಗಲೆ ಶಾಸಕರ ಅನುದಾನದಲ್ಲಿ ಸರಕಾರದಿಂದ ಮೂರು ಕೋಟಿ ಬಿಡುಗಡೆಗೊಂಡಿದ್ದು, ಪಟ್ಟಣದ ಸುತ್ತಮುತ್ತಲಿನ 2 ಏಕ್ರೆ ಜಾಗ ಗುರುತಿಸುವಂತೆ ತಹಶೀಲ್ದಾರ್ ಹಾಗೂ ಪುರಸಭೆ ಮುಖ್ಯಾಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದ್ದಾರೆ ಅತಿ ಶೀಘ್ರದಲ್ಲಿಯೇ ಅಗ್ನಿಶಾಮಕ ಘಟಕ ವಿರಾಜಪೇಟೆಯಲ್ಲಿ ಸ್ಥಾಪನೆಯಾಗುವ ಭರವಸೆ ಇದೆ ಎಂದರು.

ಕಾಂಗ್ರೆಸ್ ಸದಸ್ಯ ರಜನಿಕಾಂತ್ ಮಾತನಾಡಿ, ಹೆಚ್.ಕೇರಿಯಲ್ಲಿರುವ ಕೆಲವು ಕುಟುಂಬಗಳಿಗೆ ಹಕ್ಕು ಪತ್ರ ನೀಡುವ ಬಗ್ಗೆ ಪ್ರಸ್ತಾಪಿಸಿದಾಗ ಅಧ್ಯಕ್ಷರು ಈಗಾಗಲೆ 5 ಕುಟುಂಬಗಳ ಹಕ್ಕು ಪತ್ರ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ 12 ಲಕ್ಷ ರೂ.ಗಳ ಅನುದಾನ ಮೀಸಲಿಡಲಾಗಿದೆ. ಈ ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ಅಭಿವೃದ್ಧಿಗೆ ತೊಡಕಾಗಿದೆ. ನ್ಯಾಯಾಲಯದಲ್ಲಿ ಪ್ರಕರಣ ಶೀಘ್ರ ಬಗೆಹರಿದರೆ ಕೂಡಲೇ ನೀಡಲಾಗುತ್ತದೆ ಎಂದು ಭರವಸೆ ನೀಡಿದರು.

ಪುರಸಭೆ ಸದಸ್ಯರುಗಳಾದ ರಾಜೇಶ್ ಪದ್ಮನಾಭ, ಮಹಮ್ಮದ್ ರಾಫಿ, ರಂಜಿ ಪೂಣಚ್ಚ, ಸಿ.ಕೆ. ಪೃಥ್ವಿನಾಥ್, ಎಸ್.ಎಚ್. ಮತೀನ್, ನಾಮ ನಿರ್ದೇಶಿತ ಸದಸ್ಯ ಶಭರೀಶ್ ಶೆಟ್ಟಿ ಸೇರಿದಂತೆ ಹಲವರು ಮಾತನಾಡಿ ಪುರಸಭೆ ಇತಿಹಾಸದಲ್ಲೇ ಅತ್ಯಂತ ದೊಡ್ಡ ಗಾತ್ರದ ಬಜೆಟ್ ಮಂಡಿಸಲಾಗಿದ್ದು, ವಿರಾಜಪೇಟೆ ಪ್ರಗತಿಪಥದಲ್ಲಿ ಸಾಗುತ್ತಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಇದಕ್ಕಾಗಿ ಅಧ್ಯಕ್ಷೆ ಹಾಗೂ ಕ್ಷೇತ್ರದ ಶಾಸಕ ಪೊನ್ನಣ್ಣ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ಮತ್ತು ಇದು ಆಶಾದಾಯಕ ಬಜೆಟ್ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಉಪಾಧ್ಯಕ್ಷೆ ಫಸಿಹ ತಬ್ಸಂ, ಮುಖ್ಯಾಧಿಕಾರಿ ಪಿ.ಕೆ. ನಾಚಪ್ಪ, ಅಭಿಯಂತರ ಹೇಮಾಕುಮಾರ್, ಪರಿಸರ ಅಭಿಯಂತರ ರೀತು ಸಿಂಗ್, ಪುರಸಭೆಯ ಸದಸ್ಯರು ಉಪಸ್ಥಿತರಿದ್ದರು.

ಭೂ ರಾಜಕೀಯ ಸ್ವಾಯತ್ತತೆಗೆ ಆಗ್ರಹಿಸಿ ಸಿಎನ್‌ಸಿಯಿಂದ ಸತ್ಯಾಗ್ರಹ

ಮಡಿಕೇರಿ: ವಿಶ್ವಸಂಸ್ಥೆಯ ಅಂತರ ರಾಷ್ಟ್ರೀಯ ಜನಾಂಗೀಯ ತಾರತಮ್ಯ ನಿರ್ಮೂಲನಾ ದಿನವಾದ ಮಾ.21ರಂದು ಶಾಂತಿಯುತ ಸತ್ಯಾಗ್ರಹ ನಡೆಸಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಿರ್ಧರಿಸಿದೆ. ಅಂದು ಬೆಳಿಗ್ಗೆ 10.30 ಗಂಟೆಯಿಂದ 11.30ರವರೆಗೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಸತ್ಯಾಗ್ರಹ ನಡೆಸಿ ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಸೇರಿದಂತೆ ವಿವಿಧ ಬೇಡಿಕೆಗಳ ಹಕ್ಕೊತ್ತಾಯವನ್ನು ಮಂಡಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ, ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

ಕೊಡವ ಜನಾಂಗವನ್ನು ಪರಿಶಿಷ್ಟ ಪಂಗಡ (ಎಸ್‌ಟಿ) ಎಂದು ಗುರುತಿಸಬೇಕು. ಸಿಕ್ಕಿಂನಲ್ಲಿ ಬೌದ್ಧ ಸನ್ಯಾಸಿಗಳಿಗೆ ಮೀಸಲಾದ 'ಸಂಘ' ಕ್ಷೇತ್ರದಂತೆಯೇ ಸಂಸತ್ತು ಮತ್ತು ವಿಧಾನಸಭೆಯಲ್ಲಿ ಕೊಡವರಿಗೆ ಪ್ರಾತಿನಿಧ್ಯ ನೀಡಬೇಕು. ಅಂತರರಾಷ್ಟ್ರೀಯ ಕಾನೂನಿನಡಿಯಲ್ಲಿ ಕೊಡವರ ಹಕ್ಕುಗಳನ್ನು ಪರಿಗಣಿಸಬೇಕು. ಬ್ರಿಟಿಷರು, ಹೊರಗಿನ ರಾಜರು ಮತ್ತು ಆಡಳಿತ ವ್ಯವಸ್ಥೆ ವಶಪಡಿಸಿಕೊಂಡ ಅಥವಾ ಹೊರಗಿನವರಿಗೆ ಮಾರಾಟ ಮಾಡಿದ ಪೂರ್ವಜರ ಕೊಡವ ಭೂಮಿಯನ್ನು ಮರಳಿಸಬೇಕು. ಭಾರತೀಯ ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿ ಕೊಡವ ಭಾಷೆಯನ್ನು ಸೇರಿಸಬೇಕು. 4,500 ವರ್ಷಗಳ ಶ್ರೀಮಂತ ಇತಿಹಾಸವನ್ನು ಹೊಂದಿರುವ ಕೊಡವ ಜನಾಂಗದ ಕೊಡವ ಮಾತೃ ಭಾಷೆಗೆ ಅಧಿಕೃತ ಸ್ಥಾನಮಾನ ಮತ್ತು ರಕ್ಷಣೆಯನ್ನು ನೀಡಬೇಕು.

ಕೊಡವ ಮಂದ್‌ಗಳನ್ನು ಕೊಡವ ಜನಾಂಗದ ಆಧ್ಯಾತ್ಮಿಕ ಸ್ಥಾನವೆಂದು ಘೋಷಿಸಬೇಕು ಮತ್ತು ಅವುಗಳ ಆಧ್ಯಾತ್ಮಿಕ ಮಹತ್ವವನ್ನು ಗೌರವಿಸಬೇಕು ಎಂದು ಸತ್ಯಾಗ್ರಹದ ಸಂದರ್ಭ ಪ್ರತಿಪಾದಿಸಿ ಹಕ್ಕೊತ್ತಾಯದ ಮನವಿ ಪತ್ರವನ್ನು ಜಿಲ್ಲಾಡಳಿತ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ. ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಹಾಗೂ ಸಿಎನ್‌ಸಿ ಜಂಟಿಯಾಗಿ ಹೈಕೋರ್ಟ್‌ನಲ್ಲಿ ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತ ತೆಯನ್ನು ಕೋರಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಸಲ್ಲಿಸಿದ್ದು, ಕಾನೂನುಬದ್ಧ ಬೇಡಿಕೆ ಈಡೇರುವ ವಿಶ್ವಾಸವಿದೆ ಎಂದಿದ್ದಾರೆ.

ಶಾಂತಿಯುತ ಸತ್ಯಾಗ್ರಹದಲ್ಲಿ ಸರ್ವ ಕೊಡವ, ಕೊಡವತಿಯರು ಸಾಂಪ್ರದಾಯಿಕ ಉಡುಪಿನಲ್ಲಿ ಪಾಲ್ಗೊಂಡು ಸಿಎನ್‌ಸಿಯ ಹೋರಾಟಕ್ಕೆ ಮತ್ತಷ್ಟು ಬಲ ತುಂಬಬೇಕೆಂದು ಮನವಿ ಮಾಡಿದ್ದಾರೆ.

ಕುಶಾಲನಗರ: ಪಾನಮತ್ತರಾಗಿ ವಾಹನ ಚಲಾಯಿಸುತ್ತಿದ್ದ ಐವರಿಗೆ 50 ಸಾವಿರ ರೂ. ದಂಡ

ಮಡಿಕೇರಿ,ಮಾ.19– ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದ 5 ಮಂದಿ ಚಾಲಕರಿಗೆ ಕುಶಾಲನಗರ ನ್ಯಾಯಾಲಯ 50 ಸಾವಿರ ದಂಡ ವಿಧಿಸುವ ಮೂಲಕ ಬಿಸಿ ಮುಟ್ಟಿಸಿದೆ.

ಕುಶಾಲನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕೊಪ್ಪ ಗೇಟ್ ಬಳಿ ಮದ್ಯಪಾನ ಮಾಡಿ ವಾಹನ ಚಲಾವಣೆ ಮಾಡುತ್ತಿರುವ ಬಗ್ಗೆ ಪೊಲೀಸರು ತಪಾಸಣೆ ನಡೆಸುತ್ತಿದ್ದರು. ಈ ಸಂದರ್ಭ ವಾಹನ ಚಾಲಕರಾದ ಕಿರಣ್, ಗಣೇಶ್ ಎಚ್.ಆರ್. ಶಂಭು, ಕುಮಾರ, ವೆಂಕಟೇಶ್ ಚಾಲಕರನ್ನು ತಪಾಸಣೆಗೆ ಒಳಪಡಿಸಿದಾಗ ಮದ್ಯಪಾನ ಸೇವಿಸಿ ವಾಹನ ಚಾಲನೆ ಮಾಡುತ್ತಿರುವುದು ಪತ್ತೆಯಾಗಿದೆ.

ಈ ಪ್ರಕರಣದಲ್ಲಿ ಕುಶಾಲನಗರದ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ 5 ವಾಹನಗಳ ಚಾಲಕರಿಗೆ ತಲಾ ರೂ.10 ಸಾವಿರದಂತೆ ದಂತೆ ಒಟ್ಟು 50 ಸಾವಿರ ರೂ.ದಂಡವನ್ನು ವಿಧಿಸಿದೆ. ಕಾರ್ಯಚರಣೆಯಲ್ಲಿ ಕುಶಾಲನಗರ ಪಿಎಸ್‌ಐ ಗಣೇಶ್, ಶ್ರೀನಿವಾಸ್ ಹಾಗೂ ಕುಶಾಲನಗರ ಸಂಚಾರ ಪೊಲೀಸ್ ಠಾಣೆ ಸಿಬ್ಬಂದಿ ಪಾಲ್ಗೊಂಡಿದ್ದರು..

ವಿದ್ಯುತ್ ಸ್ಪರ್ಶದಿಂದ ಮಹಿಳೆಗೆ ತೀವ್ರ ಗಾಯ

ಸುಂಟಿಕೊಪ್ಪ: ಕಾಫಿ ತೋಟದಲ್ಲಿ ಕರಿಮೆಣಸು ಕುಯ್ಯುತ್ತಿದ್ದ ಸಂದರ್ಭ ಸನಿಹದಲ್ಲಿ ಹಾದು ಹೋಗಿದ್ದ ಅಲುಮಿನಿಯಂ ಏಣಿ ಆಯತಪ್ಪಿ ವಿದ್ಯುತ್ ತಂತಿಗೆ ತಗುಲಿದ ಪರಿಣಾಮ ಮಹಿಳೆಯೋರ್ವರು ವಿದ್ಯುತ್ ಸ್ಪರ್ಶದಿಂದ ತೀವ್ರ ಗಾಯಗೊಂಡಿದ್ದಾರೆ. ಗಾಯಾಳುವನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿದ್ದು, ಆಕೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬುಧವಾರ ಮಧ್ಯಾಹ್ನ 3.30ರ ಸಮಯದಲ್ಲಿ ಸುಂಟಿಕೊಪ್ಪ ಸಮೀಪದ ಮತ್ತಿಕಾಡು ಕುಟ್ಟೋಟ್ಟಿ ತೋಟದಲ್ಲಿ ಈ ಘಟನೆ ನಡೆದಿದ್ದು, ತಮಿಳುನಾಡಿನ ಸೇಲಂ ನಿವಾಸಿ ರತ್ನ(45) ಎಂಬಾಕೆ ಅಲ್ಯೂಮಿನಿಯಂ ಏಣಿಗೆ ವಿದ್ಯುತ್ ಸ್ಪರ್ಶಗೊಂಡ ಪರಿಣಾಮ ವಿದ್ಯುತ್ ಪ್ರವಹಿಸಿ ಗಾಯಗೊಂಡಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಜಗದೀಶ್ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಆಹಾರ ಸುರಕ್ಷತೆ, ಪ್ರಮಾಣೀಕರಣ ತರಬೇತಿ



ಆಹಾರ ಸುರಕ್ಷತೆ, ಪ್ರಮಾಣೀಕರಣ ತರಬೇತಿ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಚಾಮರಾಜನಗರ, ಮಾ.19– ಜಿಲ್ಲೆಯ ವಿದ್ಯಾರ್ಥಿ ನಿಲಯಗಳ ನಿಲಯ ಪಾಲಕರು, ಶಾಲಾ ಮುಖ್ಯೋಪಾಧ್ಯಾಯರು ಹಾಗೂ ರಸ್ತೆ ಬದಿ ಆಹಾರ ಉದ್ದಿಮೆದಾರರಿಗೆ ಆಹಾರ ಸುರಕ್ಷತೆ ಮತ್ತು ಪ್ರಮಾಣೀಕರಣ ತರಬೇತಿ ಕಾರ್ಯಕ್ರಮ ಇಂದು ನಗರದಲ್ಲಿ ನಡೆಯಿತು.

ನಗರದ ವರ್ತಕರ ಭವನದಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು ಜಿಲ್ಲೆಯ ವಿಧ್ಯಾರ್ಥಿ ನಿಲಯಗಳ ನಿಲಯ ಪಾಲಕರಿಗೆ, ಸರ್ಕಾರಿ ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಹಾಗೂ ರಸ್ತೆ ಬದಿ ಆಹಾರ ಉದ್ದಿಮೆದಾರರಿಗೆ ಆಹಾರ ಸುರಕ್ಷತೆ ಮತ್ತು ಪ್ರಮಾಣೀಕರಣ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆಹಾರ ಸುರಕ್ಷಾಧಿಕಾರಿ ಸರಿತಾ ಮಾತನಾಡಿ, ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ತಯಾರಿಸಿಕೊಡುವ ಸಂದರ್ಭದಲ್ಲಿ ಶುದ್ಧವಾದ ಸಾಮಗ್ರಿಗಳನ್ನು ಉಪಯೋಗಿಸಬೇಕು. ಅಡುಗೆ ತಯಾರಿಸಲು ಹಾಗೂ ಕುಡಿಯಲು ಉತ್ತಮ ಗುಣಮಟ್ಟದ ನೀರನ್ನು ಬಳಸಬೇಕು, ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ನಿಷೇಧಿತ ರುಚಿಕಾರಕಗಳು, ಕೃತಕ ಬಣ್ಣ ಇತ್ಯಾದಿ ಪದಾರ್ಥಗಳನ್ನು ಉಪಯೋಗಿಸಬಾರದು ಎಂದರು.

ಅಡುಗೆ ತಯಾರಕರು ಸಂಬಂಧಿಸಿದ ಸಿಬ್ಬಂದಿವರ್ಗ ಯಾವುದೇ ರೀತಿಯ ಸಾಂಕ್ರಾಮಿಕ ರೋಗಕ್ಕೆ ಒಳಪಟ್ಟಿದ್ದರೆ ಸೂಕ್ತ ಚಿಕಿತ್ಸೆ ಪಡೆದು ನಂತರ ಅಡುಗೆ ತಯಾರಿ ಚಟುವಟಿಕೆಗಳಲ್ಲಿ ತೊಡಗಬೇಕು ಎಂದರು.

ಎಲ್ಲಾ ಆಹಾರ ಉದ್ದಿಮೆದಾರರು ಆಹಾರ ನೊಂದಣಿ ಹಾಗೂ ಪರವಾನಗಿ ಪಡೆದುಕೊಂಡು ಅದರ ಪ್ರತಿಯನ್ನು ತಮ್ಮ ಉದ್ದಿಮೆ ಸ್ಥಳದ ಆವರಣದಲ್ಲಿ ಪ್ರದರ್ಶಿಸಬೇಕು. ಕಾಲಕಾಲಕ್ಕೆ ಪರವಾನಗಿ ನವೀಕರಣ ಮಾಡಿಸಬೇಕು. ಏಕ ಬಳಕೆ ಪ್ಲಾಸ್ಟಿಕ್ ಬಳಸಬಾರದು. ತ್ಯಾಜ್ಯಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಬೇಕು ಎಂದು ಸರಿತಾ ತಿಳಿಸಿದರು.

ಅಂಕಿತಾಧಿಕಾರಿ ಡಾ. ಎಸ್.ಎಲ್.ರವೀಂದ್ರ ಕಾರ್ಯಕ್ರಮ ಉದ್ಘಾಟಿಸಿದರು. ಆಹಾರ ಸುರಕ್ಷತಾಧಿಕಾರಿಗಳಾದ ಡಾ. ಶ್ರೀನಿವಾಸ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೆಗಾ ಲೋಕ್ ಅದಾಲತ್‌ನಲ್ಲಿ 74,307 ಪ್ರಕರಣ ಇತ್ಯರ್ಥ

ಚಾಮರಾಜನಗರ, ಮಾ.19– ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಜಿಲ್ಲಾದ್ಯಂತ ಸರ್ವರಿಗೂ ನ್ಯಾಯ ಎಂಬ ಪರಿಕಲ್ಪನೆ ಅಡಿಯಲ್ಲಿ ಜನಸಾಮಾನ್ಯರ ಅನುಕೂಲಕ್ಕಾಗಿ ಶೀಘ್ರವಾಗಿ ಹಾಗೂ ತ್ವರಿತವಾಗಿ ಪ್ರಕರಣಗಳನ್ನು ಇತ್ಯರ್ಥ ಪಡಿಸಿ ನ್ಯಾಯ ಒದಗಿಸಲು ಕಳೆದ ಮಾ.8ರಂದು ನಡೆಸಿದ ಮೆಗಾ ಲೋಕ್ ಅದಾಲತ್‌ನಲ್ಲಿ 74307 ಪ್ರಕರಣಗಳು ಇತ್ಯರ್ಥಗೊಂಡಿವೆ.

ಎಲ್ಲಾ ರೀತಿಯ ಸಿವಿಲ್ ಹಾಗೂ ರಾಜಿಯಾಗಬಲ್ಲ ಕ್ರಿಮಿನಲ್ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸಲು ಮಾ.8ರಂದು ಮೆಗಾ–ಲೋಕ್ ಅದಾಲತ್ ಏರ್ಪಡಿಸಲಾಗಿತ್ತು. ಚಾಮರಾಜನಗರದಲ್ಲಿ 272, ಯಳಂದೂರಿನಲ್ಲಿ 303, ಕೊಳ್ಳೇಗಾಲದಲ್ಲಿ 839 ಮತ್ತು ಗುಂಡ್ಲುಪೇಟೆಯಲ್ಲಿ 184 ಪ್ರಕರಣಗಳು ಸೇರಿ ಒಟ್ಟು 1598 ನ್ಯಾಯಾಲಯ ಪ್ರಕರಣಗಳು ಹಾಗೂ 72,709 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ ಒಟ್ಟಾರೆ 74,307 ಪ್ರಕರಣಗಳು ಲೋಕ್ ಅದಾಲತ್‌ನಲ್ಲಿ ತೀರ್ಮಾನಗೊಂಡಿವೆ.

ನ್ಯಾಯಾಲಯದ 1598 ಇತ್ಯರ್ಥ ಪ್ರಕರಣಗಳು 7,82,73,297 ರೂಗಳು ಮೌಲ್ಯದ್ದಾಗಿದೆ. ವ್ಯಾಜ್ಯ ಪೂರ್ವ 72,709 ಇತ್ಯರ್ಥ ಪ್ರಕರಣಗಳು 5,24,59,921 ರೂಗಳ ಮೌಲ್ಯದ್ದಾಗಿದೆ.ಒಟ್ಟಾರೆ 74,307 ಪ್ರಕರಣಗಳು 13,07,33,218 ರೂಗಳ ಮೌಲ್ಯದ್ದಾಗಿದೆ.

ಲೋಕ್ ಅದಾಲತ್‌ನಲ್ಲಿ ಹೆಚ್ಚಿನ ಪ್ರಕರಣಗಳು ಇತ್ಯರ್ಥಗೊಂಡಿದ್ದು, ಜನ ಸಾಮಾನ್ಯರಿಗೆ ಅನುಕೂಲವಾಗಿರುವುದಲ್ಲದೆ ನ್ಯಾಯಾಲಯಗಳ ಮೇಲಿನ ಪ್ರಕರಣಗಳ ಹೊರೆ ತಗ್ಗಿದೆ. ಲೋಕ್ ಅದಾಲತ್ ಯಶಸ್ಸಿಗೆ ಶ್ರಮಿಸಿದ ಜಿಲ್ಲೆಯ ಎಲ್ಲರಿಗೂ ಪ್ರಾಧಿಕಾರದ ವತಿಯಿಂದ ತುಂಬು ಹೃದಯದಿಂದ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಚಾಮರಾಜನಗರದಲ್ಲಿ ಲೋಕ್ ಅದಾಲತ್ ನಡೆದ ಸಿವಿಲ್ ನ್ಯಾಯಾಲಯ.

ಹಣ ಡಬ್ಲಿಂಗ್ ಮಾಡಲು ಹೊರಟಿದ್ದ ಆರೋಪಿ ಬಂಧನ

ಹನೂರು: ಹಣ ಡಬ್ಲಿಂಗ್ ಮಾಡಲು ವಂಚನೆ ಮಾಡುವ ನೋಟು ಹಾಗೂ ಹಣ ಎಣಿಕೆ ಮಾಡುವ ಯಂತ್ರಗಳನ್ನು ಸಾಗಿಸುತ್ತಿದ್ದ ಓರ್ವನನ್ನು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದ ತಲೆ ದಿಂಬದ ಬಳಿ ಪೊಲೀಸರು ಬಂಧಿಸಿದ್ದು, ಮತ್ತಿಬ್ಬರು ತಲೆಮರೆಸಿಕೊಂಡಿದ್ದಾರೆ.

ಹನೂರು ತಾಲೂಕಿನ ದಂಟಳ್ಳಿ ಗ್ರಾಮದ ಶೇಖರ್ ಬಂಧಿತ ಆರೋಪಿ.

ಘಟನೆ ವಿವರ: ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ಪೊಲೀಸರು ಬುಧವಾರ ಸಂಜೆ ಆನೆ ತಲೆ ದಿಂಬದ ಬಳಿ ವಾಹನಗಳನ್ನು ಪರಿಶೀಲನೆ ನಡೆಸುತ್ತಿದ್ದಾಗ, ಪೊಲೀಸರ ವಾಹನ ಕಂಡು ಬಿಳಿ ಬಣ್ಣದ ಗ್ರಾಂಡ್‌ವಿಟ್ರಾ ಕಾರಿನ ಚಾಲಕ ಕಾರು ನಿಲ್ಲಿಸಿ ಪರಾರಿಯಾಗಿದ್ದಾನೆ. ಅನುಮಾನಗೊಂಡ ಪೊಲೀಸರು ಸುತ್ತುವರಿದು ಕಾರಿನಲ್ಲಿದ್ದ ಆರೋಪಿ ಶೇಖರ್ ಎಂಬಾತನನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಪರಿಶೀಲನೆ ವೇಳೆ ಕಾರಿನೊಳಗೆ ಒಂದು ಬ್ಯಾಗಿನಲ್ಲಿ 500 ನೋಟುಗಳಿಗೆ ಹೋಲುವ ಕಪ್ಪು ಬಣ್ಣದ 370 ಬಂಡಲ್ ಪೇಪರ್ ಕಟ್ಟುಗಳಿದ್ದು, ಒಂದು ಬಂಡಲ್‌ನಲ್ಲಿ 100 ಹಾಳೆಗಳು, ಎರಡು ಖಾಲಿ ಬ್ಯಾಗ್, ನೋಟುಗಳು ಎಣಿಸುವ ಮಿಷನ್ ಪತ್ತೆಯಾಗಿದೆ. ಬಂಧಿತ ಆರೋಪಿಯಿಂದ 500 ರೂ ಬೆಲೆಯ 1,11,500 ರೂಪಾಯಿ ಹಣ ವಶಕ್ಕೆ ಪಡೆದುಕೊಂಡಿದ್ದಾರೆ.

ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಕೊಳ್ಳೇಗಾಲ ಉಪ ವಿಭಾಗದ ಡಿವೈಎಸ್‌ಪಿ ಧರ್ಮೇಂದ್ರ ಮಾರ್ಗ ದರ್ಶನದಲ್ಲಿ ಇನ್ಸ್‌ಪೆಕ್ಟರ್ ಜಗದೀಶ್ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ನಾಪತ್ತೆಯಾಗಿರುವ ತಾಲೂಕಿನ ಸಂತೇಮರಹಳ್ಳಿ ಗ್ರಾಮದ ಮಾದೇಶ್, ಸುಖೇಶ್ ಎಂಬುವವರನ್ನು ಬಂಧಿಸಲು ಈಗಾಗಲೇ ತಂಡ ರಚನೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.



ಡಬ್ಲಿಂಗ್ ಮಾಡುವ ನೋಟು ಹಾಗೂ ಹಣ ಎಣಿಕೆ ಮಾಡುವ ಯಂತ್ರ ಮತ್ತು ಕಾರಿನೊಂದಿಗೆ ಆರೋಪಿಯನ್ನು ಬಂಧಿಸಿರುವುದು.

ಸಂಭ್ರಮದ ಬಂಡಿಗೆರೆ ಮಾದೇಶ್ವರ ರಥೋತ್ಸವ

ಬೇಗೂರು : ಗ್ರಾಮದ ಬಂಡಿಗೆರೆ ಮಾದೇಶ್ವರ ಕೊಂಡೋತ್ಸವ ಹಾಗೂ ರಥೋತ್ಸವ ಸಂಭ್ರಮದಿಂದ ನೆರವೇರಿತು. ಗ್ರಾಮದ ಬಂಡಿಗೆರೆ ಮಹದೇಶ್ವರ ಕೊಂಡೋತ್ಸವ ಮಂಗಳವಾರ ನಸುಕಿನ ಜಾವ ನಡೆಯಿತು.ನೂರಾರು ಭಕ್ತರು ಕೊಂಡದ ಮೇಲೆ ನಡೆದು ಹರಿಕೆ ತೀರಿಸಿದರು. ಮಂಗಳವಾರ ಬೆಳಗ್ಗೆಯಿಂದ ಸಂಜೆ ತನಕ ಬೇಗೂರು ಸೇರಿದಂತೆ ಬೇಗೂರು ಸುತ್ತ ಮುತ್ತಲಿನ ಭಕ್ತರು ಆಗಮಿಸಿ ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.ಹರಕೆ ಹೊತ್ತ ಭಕ್ತರು ಹುಲಿ ವಾನ ಸೇವೆ ಮಾಡಿಸಿದರು.

ಸಂಜೆ ಮಹದೇಶ್ವರ ವಿಗ್ರಹ ರಥದ ಮೇಲೆ ಕೂರಿಸಿ ಪೂಜೆ ಸಲ್ಲಿಸಿದ ಬಳಿಕ ದೇವಸ್ಥಾನದ ಸುತ್ತ ತೇರನ್ನು ಎಳೆದರು. ಬೇಗೂರು ಗ್ರಾಮಸ್ಥರು,ಯುವಕರು,ಮಹಿಳೆಯರು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿದ್ದರು.



ಬೇಗೂರು ಬಂಡಿಗೆರೆ ಮಹದೇಶ್ವರ ಜಾತ್ರಾ ಮಹೋತ್ಸವ ನಡೆಯಿತು.

ಅಕ್ರಮ ಗಾಂಜಾ ಸಾಗಣೆ, ನಾಲ್ವರು ಆರೋಪಿ ಬಂಧನ



ಡಿವೈಎಸ್ಪಿ ವಿಚಕ್ಷಣಾ ತಂಡದ ಪೊಲೀಸರು ಬುಧವಾರ ರಾತ್ರಿ ಆರೋಪಿಗಳನ್ನು ಬಂಧಿಸಿ 3 ಕೆಜಿ 600 ನೂರು ಗ್ರಾಂ ಗಾಂಜಾ ವಶಪಡಿಸಿಕೊಂಡಿರುವುದು.

ಕೊಳ್ಳೇಗಾಲ: ಅಕ್ರಮ ಗಾಂಜಾ ಸಾಗಣೆಯಲ್ಲಿ ನಿರತರಾಗಿದ್ದ 4ಮಂದಿಯನ್ನು ಡಿವೈಎಸ್ಪಿ ವಿಚಕ್ಷಣಾ ತಂಡದ ಪೊಲೀಸರು ಬುಧವಾರ ರಾತ್ರಿ ಬಂಧಿಸಿದ್ದು ಆರೋಪಿಗಳಿಂದ 3 ಕೆಜಿ 600 ನೂರು ಗ್ರಾಂ ಗಾಂಜಾ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತರನ್ನು ಬಿದಿರಹಳ್ಳಿ ಮಂಜು, ಯರ್ರಂಬಾಡಿ ರಾಮಕೃಷ್ಣ, ಹೊಸಪಾಳ್ಯ ಮಹದೇವಪ್ರಭು, ವಿಎಸ್ ದೊಡ್ಡಿ ಮಹದೇವಪ್ಪ ಎಂದು ಗುರುತಿಸಲಾಗಿದೆ.

ಆರೋಪಿಗಳು ನಾಲಾ ರೋಡ್‌ನತ್ತ ಅಕ್ರಮವಾಗಿ 4 ಬೈಕ್‌ನಲ್ಲಿ 2 ಚೀಲದಲ್ಲಿ ಮೂರು ಕೆಜಿ ಆರುನೂರು ಗ್ರಾಂ ಗಾಂಜಾ ಸಾಗಣೆ ಮಾಡುತ್ತಿದ್ದ

ಖಚಿತ ಮಾಹಿತಿ ಅರಿತ ಡಿವೈಎಸ್ಪಿ ವಿಚಕ್ಷಣ ತಂಡದ ಎಎಸ್ಐ ತಖೀವುಲ್ಲಾ, ಮುಖ್ಯ ಪೇದೆಗಳಾದ ವೆಂಕಟೇಶ್, ಕಿಶೋರ್, ರವಿ, ಬಿಳಿಗೌಡ ಶಿವಕುಮಾರ್ ಇನ್ನಿತರರು ವಡಕೆಹಳ್ಳ ಸಮೀಪದ ಆಂಜನೇಯ ದೇವಸ್ಥಾನ ಸಮೀಪದಲ್ಲಿ ದಾಳಿ ನಡೆಸಿ ಬಂಧಿತರಿಂದ 2ಬೈಕ್ ವಶಕ್ಕೆ ಪಡೆದು ಮುಂದಿನ ಕ್ರಮಕೈಗೊಂಡಿದ್ದಾರೆ.

ಸರ್ಕಾರದ ನಿಯಮ ಉಲ್ಲಂಘನೆ, ದುಪ್ಪಟು ತೆರಿಗೆ ವಸೂಲಿ ಖಂಡಿಸಿ ಪ್ರತಿಭಟನೆ

ಕೊಳ್ಳೇಗಾಲ. ಮಾ.19– ರಾಜ್ಯ ಸರ್ಕಾರದ ಅಧಿಸೂಚನೆಯನ್ನು ಉಲ್ಲಂಘಿಸಿ ನಗರ ಸಭೆ ಅನಧಿಕೃತ ಬಡಾವಣೆಗಳಿಗೆ ಆಸ್ತಿ ತೆರಿಗೆದಾರರಿಂದ ದುಪ್ಪಟು ತೆರಿಗೆ ವಸೂಲಾತಿ ಮಾಡುತ್ತಿರುವುದನ್ನು ವಿರೋಧಿಸಿ, ನಗರಸಭೆ ಅಧಿಕಾರಿಗಳ ವರ್ತನೆ ಖಂಡಿಸಿ ಸದಸ್ಯೆ ಜಯಮರಿ, ಸಾರ್ವಜನಿಕರ ಸಹಕಾರದೊಂದಿಗೆ ನಗರಸಭೆ ಕಚೇರಿ ಮುಂಭಾಗ ಬುಧವಾರ ಧರಣಿ ನಡೆಸಿದರು.

ಗುರುವಾರವೂ ಧರಣಿ ಮುದಂವರೆಸಲಾಗುವುದು, ಸ್ಥಳಕ್ಕೆ ಡಿಸಿ ಬಂದರೆ ದರಣಿ ಸ್ಥಗಿತವಾಗಲಿದೆ, ಇಲ್ಲದಿದ್ದರೆ ಅಹೋರಾತ್ರಿ ಧರಣಿ ಮುಂದುವರೆಯಲಿದೆ ಎಂದು ನಗರಸಭೆ ಸದಸ್ಯೆ ಜಯಮರಿ ತಿಳಿಸಿದರು.

ರಾಜ್ಯ ಸರ್ಕಾರ ಬಿ–ಖಾತೆ ವಿತರಣೆ ವಿಚಾರವಾಗಿ ಸುತ್ತೋಲೆ ಹೊರಡಿಸಿದೆ. 2023–24ನೇ ಸಾಲಿನ ಹಿಂದಿನ 6 ವರ್ಷಕ್ಕೆ ಕಂದಾಯ ವಸೂಲಿ ಮಾಡಬೇಕು. 1 ವರ್ಷಕ್ಕೆ ಡಬಲ್ ಟ್ಯಾಕ್ಸ್ ಅನ್ನು ಕಟ್ಟಿಸಿಕೊಳ್ಳುವಂತೆ ತಿಳಿಸಿದೆ. ಆದರೆ, ನಗರಸಭೆ ಅಧಿಕಾರಿಗಳು ಇ–ಸ್ವತ್ತು ಆದ ವರ್ಷದಿಂದಲೂ ಡಬಲ್ ಟ್ಯಾಕ್ಸ್ ಕಟ್ಟಬೇಕು ಎಂದು ಹೇಳುತ್ತಾರೆ. ಈ ಅಧಿಕಾರವನ್ನು ನಗರಸಭೆಗೆ ಯಾರು ನೀಡಿದವರು. ಸರ್ಕಾರಕ್ಕಿಂತಲೂ ನಗರಸಭೆ ದೊಡ್ಡದೇ, ಸರ್ಕಾರದ ಸುತ್ತೋಲೆಯಂತೆ ನಗರಸಭೆ ಕಂದಾಯ ವಸೂಲಾತಿ ಮಾಡಲಿ, ಇನ್ನಾದರೂ ನಿಯಮ ಪಾಲಿಸಲಿ, ಗೊಂದಲ ಸೃಷ್ಟಿಸದೆ ನಾಗರಿಕರ ಸಮಸ್ಯೆಗೆ ಒತ್ತು ನೀಡಲಿ ಎಂದು ಆಗ್ರಹಿಸಿದರು

ಸಾಮಾಜಿಕ ಕಾರ್ಯಕರ್ತ ದಶರಥ್, ಭಾರತೀಯ ಮಾನವ ಹಕ್ಕುಗಳ ಜಾಗೃತಿ ಸೇನೆಯ ರಾಜ್ಯ ಜಂಟಿ ಕಾರ್ಯದರ್ಶಿ ಮಹೇಶ್, ಛಲವಾಧಿ ಮಹಾಸಭೆ ಚಾಮರಾಜು, ಡಿಎಸ್‌ಎಸ್ ಲಿಂಗರಾಜು, ಪುಟ್ಟಸ್ವಾಮಿ, ನಾಗರಾಜು, ಸುಮನ್, ಕೆ.ಆರ್. ಎಸ್ ಪಕ್ಷದ ಮಹೇಶ್ ಕಂದಹಳ್ಳಿ, ಜಿಲ್ಲಾಧ್ಯಕ್ಷ ಗಿರೀಶ್, ಕುಮಾರ್, ಶಿವಪ್ರಕಾಶ್, ಯಳಂದೂರು ತಾಲೂಕು ಅಧ್ಯಕ್ಷ ರಂಗರಾಜು ಇನ್ನಿತರಿದ್ದರು.



ಆಸ್ತಿ ತೆರಿಗೆದಾರರಿಂದ ದುಪ್ಪಟು ತೆರಿಗೆ ವಸೂಲಾತಿ ಮಾಡುತ್ತಿರುವುದನ್ನು ವಿರೋಧಿಸಿ, ಸದಸ್ಯೆ ಜಯಮರಿ ನೇತೃತ್ವದಲ್ಲಿ ನಗರ ಸಭೆ ಕಚೇರಿ ಮುಂಭಾಗ ಧರಣಿ ನಡೆಸಿದರು.

ಇಂದು ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಮಾ.20 ನಗರದಲ್ಲಿ ಶ್ರೀ ಯೋಗಿ ನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿಯನ್ನು ಆಯೋಜಿಸಲಾಗಿದೆ.

ಬೆಳಿಗ್ಗೆ 10.30 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರದವರೆಗೆ ಶ್ರೀ ಯೋಗಿನಾರೇಯಣ ಯತೀಂದ್ರರ ಭಾವಚಿತ್ರ ಮೆರವಣಿಗೆ ನಡೆಯಲಿದೆ. ಮಧ್ಯಾಹ್ನ 12.30 ಗಂಟೆಗೆ ನಗರದ ವರನಟ ಡಾ. ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು ಮಾರಾಟಕ್ಕಿದೆ
52x60 ಕಾರ್ನರ್ ಸೈಟು ಜಯಪುರ, ಹೆಚ್.ಡಿ. ಕೋಟೆ ಮುಖ್ಯ ರಸ್ತೆ, 11A ಖಾತಾ.
9591810822, 8971261355

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
45 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸ್ಥಳ: ಇಲವಾಲ, ಬಿಳಿಕೆರೆ, ಕೆ.ಆರ್. ನಗರ. ಸಂಪರ್ಕಿಸಿ:
Mob: 70224 57197

MUDA SITE FOR SALE
ದಟ್ಟಗಳ್ಳಿ ರಿಂಗ್ ರೋಡ್ ಪಕ್ಕ 'ಅಶ್ವತ್ಥಾಮ ಲೇಔಟ್' 40'x60' ಈಸ್ಟ್ ಫೇಸಿಂಗ್ ಸೈಟ್.
Mob: 9886048471

ಒಂದು ಎಕರೆ ನಾಲ್ಕು ಗುಂಟೆ ಜಮೀನು ಮಾರಾಟಕ್ಕಿದೆ
ಉದ್ಬೂರು ಸಿಂಧುವಳ್ಳಿ ರಸ್ತೆ ಮೈಸೂರು. Dhaatri and Banashankari Layout attached general property. Contact:
9611537157 / 99869 19694

MUDA SITE FOR SALE
ಇನ್ಫೋಸಿಸ್ ಪಕ್ಕ "KBL ಸಿಲಿಕಾನ್ ಸಿಟಿ" 30'x40' ಸೈಟ್
Mob: 9886048471

WANTED
1) ACCOUNTANT: 1 No. - Middle age, M/F, Min. 3 to 5 years experience in working in Tally Prime.
2) SALES BOY: 1 No. Work experience in Hardware Shop, 3 years.
KAVERI GLASS & PLYWOOD H/W Near Surya Bakery Circle, Hebbal 1st Stage, Mysuru.
7760266990, 9845280152

ಶ್ರೀ ಗೌರೀಶಂಕರ ಟ್ರಾವೆಲ್ಸ್
10–4–25 (6 ದಿನ): ಅಯೋಧ್ಯೆ, ಕಾಶಿ, ಪ್ರಯಾಗ್‌ರಾಜ್, ಗಯಾ, ಬುದ್ಧಗಯಾ.
17–4–25 (4 ದಿನ): ಹಂಪಿ, ಬಾದಾಮಿ, ಕೂಡಲಸಂಗಮ, ಐಹೊಳೆ ಇತ್ಯಾದಿ.
20–5–25 (10 ದಿನ): ಅಯೋಧ್ಯೆ, ಕಾಶಿ, ಪೋಕ್ರ, ಮುಕ್ತಿನಾಥ್, ಕಠ್ಮಂಡು ಇತ್ಯಾದಿ.
8–6–25 (12 ದಿನ): ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರ್‌ನಾಥ್, ಇತ್ಯಾದಿ.
(ವಿಮಾನ, ಬಸ್, ಊಟ, ರೂಂ)
Mob: 8317491430

ತಕ್ಷಣ ಬೇಕಾಗಿದ್ದಾರೆ
SRS Security Services
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್, ಸೂಪರ್ ವೈಸರ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC, PUC, BA, Any Degree
ವೇತನ: S/G = 22000, S/Sup=25000/- Valet DVR = 21500/- ಸಂಬಳವಿರುತ್ತದೆ ಕೆಲಸದ ಸಮಯ 8 ಗಂಟೆಗಳು ಹಾಗೂ OT ಸೌಲಭ್ಯವಿರುತ್ತದೆ.
ವಯೋಮಿತಿ: 19 ರಿಂದ 45ರ ಒಳಪಟ್ಟಿರುವವರು.
ESI, PF & Week Off, G.H ಸೌಲಭ್ಯವಿರುತ್ತದೆ.
ಕೆಲಸ ಮಾಡುವ ಸ್ಥಳ: Nexus Mall.
Dinesh Y.S
7760097320,9606832471

ಬೇಕಾಗಿದ್ದಾರೆ
ಕನ್ನಡ ಟೈಪಿಂಗ್ ಮತ್ತು ಇಂಗ್ಲೀಷ್ ಟೈಪಿಂಗ್ ಬರುವಂತಹವರು ಮೈಸೂರು ಪೂರ್ವ ಸಬ್ ರಿಜಿಸ್ಟ್ರಾರ್ ಆಫೀಸ್ ಹತ್ತಿರ, ಡಾ.ರಾಜ್‌ಕುಮಾರ್ ರಸ್ತೆ, ತ್ರಿವೇಣಿ ಸರ್ಕಲ್ ಹತ್ತಿರ, ಶ್ರೀರೇಣುಕಾ ಎಂಟರ್‌ಪ್ರೈಸಸ್ ಆಫೀಸ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ: ಚಂದ್ರಶೇಖರ್
9986030489

ಮನೆಯನ್ನು ಕಟ್ಟಿಕೊಡಲಾಗುತ್ತದೆ
ಹೊಸ ಮನೆ ಕಟ್ಟಬೇಕೇ? ಚಿಂತೇ ಬೇಡ? ಒಂದು ಚದರಕ್ಕೆ 1,75,000/– ರೂ. ನಂತೆ ಮಂಡ್ಯ, ಮೈಸೂರಿನ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳ ಸಿಟಿ ಹಾಗೂ ಹಳ್ಳಿಗಳಲ್ಲಿ ಕಟ್ಟಿಕೊಡಲಾಗುವುದು.
9620377533

ಬೋಳು ತಲೆಯ ಸಮಸ್ಯೆಯೇ?


ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9611028523 MANGALORE: 9343142258

WANTED BILL CLERK
for Cement Company in Mysore.
Candidates must be SSLC pass, below 30 years.
Contact 94483 57475

ಹೊಸ ಮನೆ ಮಾರಾಟಕ್ಕಿದೆ
20x30 N/F
42 LAKHS
ಗುರೂರು 4ನೇ ಬ್ಲಾಕ್, ಮೈಸೂರು
Fully Furnished ಗ್ರಾನೈಟ್ ಮನೆ
9379056972

COMMERCIAL SPACE FOR RENT
1000 sq.ft. useful for Cafe, Bakery, Ice Cream shop etc. Narayana Shastri Road, Near Mahadeshwara Temple, Mysore.
Mob: 8147833038

SK CONSTRUCTION
ನಿಮ್ಮ ಕನಸಿನ ಮನೆಗೆ Plan Working Plan, 3D ಎಲಿವೇಶನ್ Approval Plan ಇಂಟೀರಿಯರ್ ಪ್ಲಾನ್ ಮತ್ತು ಅತಿ ಉತ್ತಮ ಗುಣಮಟ್ಟದಲ್ಲಿ Construction ಸಹಿತ ಮಾಡಿಕೊಡುತ್ತೇವೆ.
9620528490

ಸೈಟುಗಳು ಮಾರಾಟಕ್ಕಿವೆ
30x40, 30x50 ಶ್ರೀರಾಂಪುರ ರಿಂಗ್ ರೋಡ್, ಶ್ರೀನಗರ ಹಿಂಭಾಗ ಮೈಸೂರು
8050345574

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

PAY 25 LAKHS & OWN YOUR DREAM HOME
Rest with Easy EMI
Vastu & Architectural Built
20X30 North Facing
2/3/4 BHK Duplex Houses
Starts from Rs. 60/90/95 Lakhs
Fully Furnished, Ready to Move in
50 Mtrs from Ring Road, Next to Police Layout
98800 65122 / 76193 99919

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

Co-working Space available only just 1500 per month
Contact Number
9845830203

SITES @ NH 275 100% BANK LOAN
9448958332

ಬೇಕಾಗಿದ್ದಾರೆ
ಮೈಸೂರಿನ ಇನ್ಫೋಸಿಸ್‌ಗೆ ಪುರುಷರು ಅಭ್ಯರ್ಥಿಗಳು
ಸೆಕ್ಯೂರಿಟಿ ಗಾರ್ಡ್ಸ್
ಆಕರ್ಷಕ ಸಂಬಳ : 23,750/–
ವಿದ್ಯಾರ್ಹತೆ: 10ನೇ ತರಗತಿ & ಪಿಯುಸಿ ತೇರ್ಗಡೆ
ವಯಸ್ಸು : 22 ರಿಂದ 40 ವರ್ಷ
78296 48007
98802 02926

Solar Water Heaters


SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಅಶೋಕ ರಸ್ತೆ, ಗಾಂಧಿ ಚೌಕದ ಬಳಿಯಿರುವ ಹಾರ್ಡ್‌ವೇರ್ ಅಂಗಡಿಗೆ 40 ರಿಂದ 50 ವರ್ಷದವರು ರೀಟೆಲ್ ಸ್ಟೋರ್ ಕೀಪರ್ ಕೆಲಸಕ್ಕೆ ಬೇಕಾಗಿದ್ದಾರೆ.
ಕೆಲಸದ ಸಮಯ: ಬೆಳಗ್ಗೆ 9.30 ರಿಂದ ರಾತ್ರಿ 8.00 ರವರೆಗೆ. ಭಾನುವಾರ ರಜೆ. ಉತ್ತಮ ಸಂಬಳ.
ಸಂಪರ್ಕಿಸಿ: 99015 18513

WANTED
Girls staff required for book store.
CHETHANA BOOK HOUSE
Narayana Shastry Road, Mysore.

Document Lost
Venkatesha Kumar B.N., No. 1277, 1st Cross, Srirampura 2nd Stage, Mysore-570 023, I lost my allotment letter (MIG 00077217) and conditional sale deed (1060) bearing site No. MIG 87/B2 Ilavala, Mysore district. Finders please contact:
Mob: 9071555576

CHANGE OF NAME
I, DINAMANI D/o, Lakshminarasimhaiah Residing at #44, 2nd Cross, 1st Main, Vijayanagar 2nd Stage, Mahajana Layout, Mysore, Karnataka-570017, I have Changed my name from DINAMANI to DINAMANI GOPAL vide affidavit sworn before Notary Bose MA Madappa Mysuru Dist. Dtd. 14.03.2025
Sd/- Dinamani Gopal

ಸೈಟ್ ಮಾರಾಟಕ್ಕಿದೆ
20x30 ಗೋರೂರು (ಆಶ್ರಯ) ರಾಷ್ಟ್ರೋತ್ಥಾನ ಸ್ಕೂಲ್ ಹತ್ತಿರ ರೂ.16 ಲಕ್ಷ
9620563026

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
Mob: 6360884930

CHANGE OF NAME
I, R. Mithun, S/o Ramesh, residing at #01, 1st Cross, North of Gokulam, Gokulam 3rd Stage, Mysore-570 002, declare that my son's name is Dhruv M., the same is mentioned in his Aadhar Card (No. 8895 2533 7004) and also in all his educational documents. The name Dhruv M, 'M' stand for Mithun (Sur name). I am changed my son's name from Dhruv M. to Dhruv Mithun, on my own free will, in front of Notary S.N. Hemalatha on 18-3-2025.
Sd/- R. Mithun

ಬೇಕಾಗಿದ್ದಾರೆ
ಹಳೇ ಆರ್‌ಎಂಸಿ ಸರ್ಕಲ್‌ನ ಪೆಟ್ರೋಲ್ ಬಂಕ್‌ಗೆ ಕ್ಯಾಷಿಯರ್ & ಹೆಲ್ಪರ್ಸ್ (ಪುರುಷ / ಮಹಿಳೆ). ವಯಸ್ಸು: 18 ರಿಂದ 40 ಬೇಕಾಗಿದ್ದಾರೆ.
Mob: 9035541774

ರೂಂ ಬಾಯ್ಸ್ ಬೇಕಾಗಿದ್ದಾರೆ
ಮಡಿಕೇರಿಯ ಹೋಂ ಸ್ಟೇ ಗೆ ಅನುಭವವುಳ್ಳ ರೂಂ ಬಾಯ್ಸ್ ಬೇಕಾಗಿದ್ದಾರೆ. ಊಟ ಮತ್ತು ವಸತಿ ನೀಡಲಾಗುವುದು. ವೇತನ: 12,000 + ಟಿಪ್ಸ್. ಸಂಪರ್ಕಿಸಿ:
Mob: 7337722277

ಉದ್ಯೋಗವಕಾಶ
ವಿಡಿಯೋ ಎಡಿಟಿಂಗ್ ಮಾಡಲು ಅನುಭವ ವಿರುವವರು ಮನೆಯಿಂದಲೇ ಕೆಲಸ ನಿರ್ವಹಿಸುವ ಅವಕಾಶ, ಉತ್ತಮ ವೇತನ. ವಾಟ್ಸಪ್ ಮೆಸೇಜಿನ ಮೂಲಕ ಸಂಪರ್ಕಿಸಿ:
9448984400

SITES WANTED
@ Anandasagar Nithyananda Sagara Paramananda Sagara, Vijayanagara Yelwala, Kadakola & Mysore- Sourroundings
Quick Regn.
93421-25252

ಬೇಕಾಗಿದ್ದಾರೆ
ಮಹಿಳೆಯರು ಮತ್ತು ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ.
ಚೇತನ್ ಬುಕ್ ಹೌಸ್
ನಾರಾಯಣಶಾಸ್ತ್ರಿ ರಸ್ತೆ, ಮೈಸೂರು

ಉದ್ಯೋಗ ಅವಕಾಶ
ಒಂದೆ ದಿನದಲ್ಲೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ ಸಂಬಳ - ರೂ. 15200 - 86,100
7337645977, 7892046990

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ. ಒಂದು ಗ್ರಾಂ ಚಿನ್ನಕ್ಕೆ Rs. 7,900 (24 CT)
Mob: 9108146123

MUDA APPROVED Site for Sale
40x60 West Facing
SemiCommercial Site, 60ft Road
URS Layout Shrirampura Mysore
Just 300 Meter From Ring Road
Ready to Register
Bank Loan Available
Call for More Details
☎-9620349543

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7996497954

ಉಚಿತ ಮದ್ಯ ವರ್ಜನ ಶಿಬಿರ
ಮೈಸೂರು: ನಗರದ ಶ್ರೀರಾಂಪುರದಲ್ಲಿನ ಚೈತನ್ಯ ಫೌಂಡೇಷನ್‌ನ ಎರಡನೇ ವಾರ್ಷಿಕೋತ್ಸವದ ಪ್ರಯುಕ್ತ ಮಾ. 24 ರಿಂದ 21 ದಿನಗಳ ಕಾಲ ಸಂಪೂರ್ಣ ಉಚಿತ ಕುಡಿತ ಮತ್ತು ಮಾದಕ ವಸ್ತು ಬಿಡಿಸುವ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಊಟ, ವಸತಿಯೊಂದಿಗೆ ವೈದ್ಯರಿಂದ ಚಿಕಿತ್ಸಾ ಸೌಲಭ್ಯವಿ,ಯೋಗ, ಧ್ಯಾನದೊಂದಿಗೆ ಆಪ್ತ ಸಮಾಲೋಚನೆ ಸಿಗಲಿದೆ. ಹೆಚ್ಚಿನ ಮಾಹಿತಿಗೆ
6361744190,9164469570

HOUSE FOR SALE
'B' Khata Newly Construction
20x30 Ground Floor
1 bhk First Floor
4BHK Duplex Ramakrishna Nagar, E&F Block
Baba Temple
9590033909,9731545495

FOR RENT
COMMERCIAL SPACE
2nd & 3rd FLOOR
2500 Sq.ft
LIFT & PARKING FACILITY
MOB : 9448177117

House For Sale
20/30 Duplex
MUDA Allotment
3 BHK East Face
Near Jss layout 2nd Stage
More Details Contact
9380284276

Sri Murugan Pharma @ Vijayanagar 3rd Stage
REQUIRED STAFFS
Freshers and Experienced
Attractive Salary
Call: 99802 53762
Email: srimuruganpharmacymysuru@gmail.com

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು , ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್ /ಪಾಸ್ ಊಟ ವಸತಿ ದೊರೆಯುತ್ತದೆ
9110455297

WANTED/ಬೇಕಾಗಿದ್ದಾರೆ
ಕೆಪಿಟಿಸಿಎಲ್, ಮೈಸೂರು, ಕುಶಾಲನಗರ, ಕೆ ಆರ್ ನಗರ, ಶಿವನಸಮುದ್ರ, ಮಂಡ್ಯ ಭಾಗಗಳಲ್ಲಿ ಗ್ಯಾಂಗ್ ಮ್ಯಾನ್ ಕೆಲಸಕ್ಕಾಗಿ ಬೇಕಾಗಿದ್ದಾರೆ
ಹುದ್ದೆ: ಲೈನ್ ಸಹಾಯಕರು/ ಗ್ಯಾಂಗ್ ಮ್ಯಾನ್
• ವಿದ್ಯಾರ್ಹತೆ: 10ನೆ ತರಗತಿ ಪಾಸ್
ವಯಸ್ಸು: 21 ರಿಂದ 40 ವರ್ಷಗಳು
ಮಾಸಿಕ ವೇತನ: ರೂ,18,500/– (EPF&ESI ಒಳಗೊಂಡು) ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ:
9449820243 / 7892845653

WANTED
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ: 15000/-
Education : SSLC, PUC Any Degree
7624845011

ಮನೆ ಮಾರಾಟಕ್ಕಿದೆ
30x40
20x30
30x50
30x40
9008711654

ಶ್ರೀ ಬನಶಂಕರಿ ಎಂಟರ್‌ಪ್ರೈಸಸ್
ಮಹಾಮನೆ ಸರ್ಕಲ್ ಹತ್ತಿರ 20x30 ಮನೆ ಮಾರಾಟಕ್ಕಿದೆ. ದಟ್ಟಗಳ್ಳಿ. ಬೆಲೆ: 56 ಲಕ್ಷ.
Mob: 8618495118

PRAKRUTHI PROPERTIES
SITES FOR SALE
40x60 Commercial Site Nr Bramharamba Chltry,
40x60 Site & House @ Ramakrishna Nagar
20x45 House @ Kuvempu Ngr
40x60 Shardha Lyt (JP Nagar)
20x30 VRL Lyt HD Kote Road
30x50 Nr Mookambika Lyt,HD Kote Rd
Sites also available Near RT Nagar, Bogadi in & around Mysore
95386 90359, 90359 90359

WANTED
Teaching staff for reputed institution (Experience preferred) for all subjects. Transport facilities available. Drop your resume through Whatsapp.
8971577685, 9980631121

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
40x60, North West Corner Site for sale in KBL Silicon City, Near Infosys, Mysore
Price: 4800/- Sqft.,
Call: 8197707001

ಸೈಟು ಮಾರಾಟಕ್ಕಿದೆ
30x40 Alliance Serena ಬಡಾವಣೆ ವಾಜಮಂಗಲ ರಸ್ತೆ ಮೈಸೂರು
9663570750

ನೇರ ಸಂದರ್ಶನ
1) ಫೀಲ್ಡ್ ಸೂಪರ್‌ವೈಸರ್ PUC + ದ್ವಿಚಕ್ರ ವಾಹನ ವಿರಬೇಕು
2) ಹೌಸ್ ಕೀಪಿಂಗ್ ಹುಡುಗರು
3) ಅಡುಗೆ/ಮಹಿಳೆ/ಕೆಲಸ
4) Lab Assit (F)
5) Taxi Yellow Board (Dezir ಬಾಡಿಗೆಗೆ)
9448150408,9036745292

SITE FOR SALE
N/E Corner
60x70
Suvarna Nagara, Bogadi Road.
Mob: 8050821108

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ನಂಜನಗೂಡು ಟೌನ್, ಕಾಯಂಗಡಿ ಬೀದಿ, #1173, ಬಾಲಾಜಿ ನಿಲಯದಲ್ಲಿ ವಾಸವಾಗಿರುವ ಸಿ. ಪೂರ್ಣಿಮಾ ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಸರಿಯಾದ ಹೆಸರು ಸಿ. ಪೂರ್ಣಿಮಾ ಎಂದಾಗಿದ್ದು, ನನ್ನ ಆಧಾರ್ ಕಾರ್ಡ್ ನಂ. 8816 5452 2035 ರಲ್ಲಿ ನಮೂದಾಗಿರುತ್ತದೆ. ನನ್ನ ವಿವಾಹಕ್ಕೆ ಮುಂಚೆ ನನ್ನನ್ನು ಪೂರ್ಣಿಮಾ ಎನ್.ಆರ್. ಎಂದು ಕರೆಯುವುದು ರೂಢಿಯಿದ್ದು, ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಮೈಸೂರು ರವರಲ್ಲಿ ಷೇರುದಾರರಾಗಿದ್ದು, ಸದರಿ ದಾಖಲಾತಿಯಲ್ಲಿ ನನ್ನ ಹೆಸರು ಪೂರ್ಣಿಮಾ ಎನ್.ಆರ್. ಎಂದು ನಮೂದಾಗಿರುತ್ತದೆ. ಹಾಗಾಗಿ ಸಿ. ಪೂರ್ಣಿಮಾ ಹಾಗೂ ಪೂರ್ಣಿಮಾ ಎನ್.ಆರ್. ಎಂಬ ಎರಡು ಹೆಸರುಗಳು ನನ್ನದೇ ಆಗಿರುತ್ತದೆ ಎಂದು ನೋಟರಿ ಸುರೇಶ ರವರ ಮುಂದೆ ದಿನಾಂಕ 28–2–2025ರಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಸಿ. ಪೂರ್ಣಿಮಾ

SITE FOR SALE
MUDA APPROVED
20x30
Near Vidya Vikas College, Bannur Road.
8792207164, 6361799533

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.SC, B.COM, MA, M.Com, M.Sc, MBA, MBBS, BE, M.Tech, B.Ed, D.Ed, M.Ed., ವಿವಾಹ ನೋಂದಣಿಗೆ ಕರೆ ಮಾಡಿ (2nd Marriage Also)
91647-43059

ಬೇಕಾಗಿದ್ದಾರೆ
ಮೈಸೂರಿನ ಪಿಜಿಯೊಂದರಲ್ಲಿ ಅಡುಗೆ ಮಾಡಲು ಮಹಿಳಾ ಅಡುಗೆ ಭಟ್ಟರು ಬೇಕಾಗಿದ್ದಾರೆ. ಕಡ್ಡಾಯವಾಗಿ ಪಿಜಿಯಲ್ಲೇ ಉಳಿದು ಕೊಳ್ಳುವವರಿಗೆ ಮಾತ್ರ ಅವಕಾಶ. ಸಂಪರ್ಕಿಸಿ:
9591547239

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಸೈಟು ಮಾರಾಟಕ್ಕಿದೆ
15x30 ವಿಜಯನಗರ 2ನೇ ಹಂತ ಕೆ.ಡಿ.ಸರ್ಕಲ್, ಮೈಸೂರು
9663570750

ಬೇಕಾಗಿದ್ದಾರೆ
ಸೆಕ್ಯೂರಿಟಿ ಸುಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ+ಪಿಎಫ್+ ಇಎಸ್‌ಐ ಸೌಲಭ್ಯವಿರುತ್ತದೆ.
ಸ್ಥಳ: ಮೈಸೂರು ಸಿಟಿ, ಹೆಬ್ಬಾಳು ಕೈಗಾರಿಕ ನಗರ, ಸಿದ್ದಾರ್ಥ ಬಡಾವಣೆ ಹಿನ್‌ಕಲ್ ಮತ್ತು ಮಂಡ್ಯ.
7829393555/ 9886200104/9739376832

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ.
ಹೌಸ್ ಕೀಪಿಂಗ್, ಸೆಕ್ಯೂರಿಟಿ ಗಾರ್ಡ್, ನರ್ಸ್ & ರಿಸೆಪ್ಷನಿಸ್ಟ್
ಸಂಪರ್ಕ ಸಂಖ್ಯೆ
8152035168

HOUSE FOR SALE
3 BHK (E&N) CARNER HOUSE FULLY FURNISHED IN VIJAYANAGAR 4TH STAGE, MYSURU NEAR RVK SCHOOL
Owner: 9986014168

ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ.
ವಯಸ್ಸು : 18 ರಿಂದ 45
ಸಂಬಳ: ESI PF ಕಳೆದು 17000 8 hrs Duty
3 Shift ಗಳು ಇರುತ್ತದೆ.
ಯಾವುದೇ Fees ತೆಗೆದುಕೊಳ್ಳುವುದಿಲ್ಲ.
ಹೆಚ್ಚಿನ ಮಾಹಿತಿಗಾಗಿ ಸ್ಥಳಕ್ಕೆ ಭೇಟಿ ನೀಡಿ
ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ಮೈಸೂರು
9986874574

ರಿಸಾರ್ಟ್‌ನಲ್ಲಿ ಉದ್ಯೋಗಾವಕಾಶ!
ಬಿಳಿಕೆರೆ ಬಳಿಯಲ್ಲಿರುವ ರಿಸಾರ್ಟ್‌ಗೆ ಕೆಳಕಂಡ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ.
ಹೌಸ್ ಕೀಪಿಂಗ್ ಬಾಯ್ಸ್
ರಿಸೆಪ್ಷನಿಸ್ಟ್‌ಗಳು
ವೇಟರ್‌ಗಳು
ಆಸಕ್ತ ಅಭ್ಯರ್ಥಿಗಳು ತಕ್ಷಣ ಸಂಪರ್ಕಿಸಿ:
9538899588

ಬೇಕಾಗಿದ್ದಾರೆ
ಫರ್ನಿಚರ್ ಅಂಗಡಿ ಹಾಗೂ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆಯಿಲ್ಲ
9902435523

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಮತ್ತು House Keeping ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಇರುತ್ತದೆ.
9986501873
9590268610

ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಸರ್ ಬೇಕಾಗಿದ್ದಾರೆ
J K Tyers Metagalli, Mysore
ವಿದ್ಯಾಭ್ಯಾಸ: SSLC ಮೇಲ್ಪಟ್ಟು
ವಯಸ್ಸು: 25 ರಿಂದ 45ರ ಒಳಗಿರಬೇಕು
ಸಂಬಳ: 21000/-ರೂ.
ಸೌಲಭ್ಯ: ESI/PF/Bonus/NFH
9538014456
9538886654

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ ಅಂಜೂರ, ಒಣದ್ರಾಕ್ಷಿ, ಖರ್ಜೂರ, ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

ಬೇಕಾಗಿದ್ದಾರೆ
ಕಾರ್ ಡ್ರೈವರ್ ಅಡಿಗೆ ಭಟ್ಟರು ಮಹಿಳೆಯರು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿ – ವಿದ್ಯಾರ್ಥಿನಿಯರು ಬೇಕಾಗಿದ್ದಾರೆ
9141614633

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ನೆರಗ್ಯಾತನಹಳ್ಳಿ ಪಿಎಸಿಎಸ್‌ಗೆ ಕುಮಾರಸ್ವಾಮಿ ಅಧ್ಯಕ್ಷ

ಉಪಾಧ್ಯಕ್ಷೆಯಾಗಿ ಕೆಂಪಮ್ಮಣಿ ಅವಿರೋಧ ಆಯ್ಕೆ

ತಿ.ನರಸೀಪುರ, ಮಾ.19– ನೆರಗ್ಯಾತನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ತಾಪಂ ಮಾಜಿ ಅಧ್ಯಕ್ಷ ಎಂ.ಕುಮಾರಸ್ವಾಮಿ, ಉಪಾಧ್ಯಕ್ಷೆಯಾಗಿ ಕೆಂಪಮ್ಮಣಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮದ ಸಹಕಾರ ಸಂಘದಲ್ಲಿ ಮುಂದಿನ 5 ವರ್ಷಗಳ ಅವಧಿಗಾಗಿ ಬುಧವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ಕುಮಾರಸ್ವಾಮಿ, ಉಪಾಧ್ಯಕ್ಷ ಸ್ಥಾನಕ್ಕೆ ಕೆಂಪಮ್ಮಣಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಜಿ.ಪ್ರೇಮ ಪ್ರಕಟಿಸಿದರು.

ಮಾ.9ರಂದು ನಡೆದ ನಿರ್ದೇಶಕರ ಚುನಾವಣೆಯಲ್ಲಿ ಎಂ.ಕುಮಾರಸ್ವಾಮಿ ಬಣದ 9 ಸದಸ್ಯರು ಜಯಗಳಿಸಿದ್ದರು. ಪ್ರತಿಸ್ಪರ್ಧಿ ಡೈರಿ ಗುರುಮೂರ್ತಿ ಬಣದ 3 ಸದಸ್ಯರು ಆಯ್ಕೆಯಾಗಿದ್ದರು.

ಚುನಾವಣೆಯಲ್ಲಿ ನಿರ್ದೇಶಕರಾದ ಎಂ.ಪುಟ್ಟಸ್ವಾಮಿ, ಜೆ.ಎನ್.ಗುರುಮೂರ್ತಿ, ನಾಗೇಶ್, ರುದ್ರಸ್ವಾಮಿ, ಪ್ರೇಮ, ಮುದ್ದಯ್ಯ, ಬಸವರಾಜಪ್ಪ, ಶಿವಮ್ಮ, ಮಹದೇವಮ್ಮ ಹಾಗೂ ಗುರುಸ್ವಾಮಿ ಹಾಜರಿದ್ದು ಸಹಕಾರ ಸಂಘದ ವರಿಷ್ಠರ ಆಯ್ಕೆಗೆ ಸಮ್ಮತಿ ಸೂಚಿಸಿದರು. ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧ ಆಯ್ಕೆ ಪ್ರಕಟಗೊಳ್ಳುತ್ತಿದ್ದಂತೆ ಸಂಘದ ಮುಂದೆ ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.


ನೆರಗ್ಯಾತನಹಳ್ಳಿ ಪಿಎಸಿಎಸ್ ಅಧ್ಯಕ್ಷರಾಗಿ ಎಂ.ಕುಮಾರಸ್ವಾಮಿ, ಉಪಾಧ್ಯಕ್ಷರಾಗಿ ಕೆಂಪಮ್ಮಣಿ ಆಯ್ಕೆಯಾದರು.

ನೂತನ ಅಧ್ಯಕ್ಷ ಎಂ.ಕುಮಾರಸ್ವಾಮಿ ಮಾತನಾಡಿ, ಸಂಘದ ಮುಂದಿನ 5 ವರ್ಷಗಳ ಅವಧಿಗೆ ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ನಿರ್ದೇಶಕರಿಗೆ ಧನ್ಯವಾದ ತಿಳಿಸಿದ ಅವರು ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡುವ ಮೂಲಕ ಹೆಚ್ಚಿನ ಜವಾಬ್ದಾರಿ ನೀಡಿದ್ದಾರೆ. ಸಹಕಾರಿ ಬಂಧುಗಳಿಗೆ, ರೈತಾಪಿ ವರ್ಗದವರಿಗೆ ಸಂಘದಿಂದ ದೊರಕಬಹುದಾದ ಸೌಲಭ್ಯಗಳಾದ ಗೊಬ್ಬರ, ಬಿತ್ತನೆ ಬೀಜ ಸೇರಿದಂತೆ ಇನ್ನಿತರೆ ಪರಿಕರಗಳನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಎಲ್ಲಾ ನಿರ್ದೇಶಕರೊಂದಿಗೆ ಸಮನ್ವಯತೆಯಿಂದ ಕೆಲಸ ಮಾಡಿ ಸಹಕಾರ ಸಂಘವನ್ನು ಮತ್ತಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯಲು ಪ್ರಯತ್ನಿಸುವ ಜೊತೆಗೆ ನನ್ನ ಮೇಲೆ ನಿರ್ದೇಶಕರು ಇಟ್ಟಿರುವ ನಂಬಿಕೆಗೆ ಚ್ಯುತಿ ಬಾರದಂತೆ ಕೆಲಸ ಮಾಡಿ ತೋರಿಸುತ್ತೇನೆ. ಸಹಕಾರ ಸಂಘವನ್ನು ಹೆಚ್ಚು ಅಭಿವೃದ್ಧಿ ಪಡಿಸಲು ಎಲ್ಲಾ ನಿರ್ದೇಶಕರು ಹಾಗೂ ಸಹಕಾರಿಗಳು ನನಗೆ ಸಹಕಾರ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಮುಖಂಡರಾದ ನೆರಗ್ಯಾತನಹಳ್ಳಿ ರಾಜಪ್ಪ, ಶಿವನಂಜಪ್ಪ, ಚಂದ್ರಪ್ಪ, ಚೇರ್ಮನ್ ಮಲ್ಲೇಶ್, ಗುಣ, ಎಂ.ಎಲ್.ಹುಂಡಿ ಪ್ರಭುಸ್ವಾಮಿ, ಮುಡುಕನಪುರ ಪಟೇಲ್ ನಾಗೇಶ್, ಕಳ್ಳೀಪುರ ರವಿ, ಬೂದಹಳ್ಳಿ ನಾಗ, ರೈತ ಸಂಘದ ಶಂಕರ್, ಮುಡುಕನಪುರ ರಾಜು, ಶಿವು, ಸತೀಶ್, ಬಸವಲಿಂಗಪ್ಪ, ಗುರುಮಲ್ಲಪ್ಪ, ಪಿಗ್ಮಿ ಮಹದೇವಸ್ವಾಮಿ, ಸುಜ್ಜಲೂರು ಅರುಣ್, ಹಲವಾರ ಮಹದೇವಸ್ವಾಮಿ, ಕೋಣಗಹಳ್ಳಿ ಬಸವಣ್ಣ, ಕನ್ನಾಯಕನಹಳ್ಳಿ ಚಿಕ್ಕೀರಯ್ಯ, ನಾಗಲಗೆರೆ ಶಾಂತರಾಜು ಹಾಗೂ ಕೊಳತ್ತೂರು ಗ್ರಾಪಂ ಸದಸ್ಯರು ಉಪಸ್ಥಿತರಿದ್ದರು.

ವಿದ್ಯುತ್ ಸ್ಪರ್ಶ: ಹಸು ಸಾವು

ಸರಗೂರು, ಮಾ.19– ವಿದ್ಯುತ್ ಸ್ಪರ್ಶಗೊಂಡ ಪರಿಣಾಮ ಹಸು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದಲ್ಲಿ ಬುಧವಾರ ನಡೆದಿದೆ. ಪಟ್ಟಣದ ನಿವಾಸಿ ಟೈಲರ್ ರಾಖಿ ಪ್ರಕಾಶ್ ಅವರಿಗೆ ಸೇರಿದ ಹಸು ಸಾವನ್ನಪ್ಪಿರುವುದು. ಇಂದು ಬೆಳಗ್ಗೆ ಪಟ್ಟಣದ ಮಹಾವೀರ ವೃತ್ತದ ಬಳಿಯ ಟ್ರಾನ್ಸ್‌ಫಾರ್ಮರ್ ಬಳಿ ಹಸು ಮೇಯುತ್ತಿದ್ದ ವೇಳೆ ವಿದ್ಯುತ್ ಸ್ಪರ್ಶಸಿದೆ. ಪರಿಣಾಮ ಸ್ಥಳದಲ್ಲೇ ಹಸು ಸಾವನ್ನಪ್ಪಿದೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಚೆಸ್ಕಾಂ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಪರಿಹಾರ ನೀಡುವುದಾಗಿ ಭರವಸೆ ನೀಡಿದರು. ಹಸು ಮಾಲೀಕ ರಾಖಿ ಪ್ರಕಾಶ್ ಮಾತನಾಡಿ, ವಿದ್ಯುತ್ ಸ್ಪರ್ಶದಿಂದ 4 ತಿಂಗಳ ತೆನೆ ಹಸು ಸಾವನ್ನಪ್ಪಿದೆ. ಡೈರಿಗೆ ಹಾಲು ಹಾಕಿ ಜೀವನ ನಡೆಸುತ್ತಿದ್ದ ನನಗೆ ದಿಕ್ಕೇ ತೋಚದಂತಾಗಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ವಿಜೃಂಭಣೆಯ ರಾಜಮುಡಿ ಉತ್ಸವ



ನಂಜನಗೂಡು, ಮಾ.19– ತಾಲೂಕಿನ ಕಳಲೆ ಗ್ರಾಮದ ಶ್ರೀಲಕ್ಷ್ಮಿಕಾಂತಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ರಾತ್ರಿ ರಾಜಮುಡಿ ಉತ್ಸವ ವಿಜೃಂಭಣೆಯಿಂದ ಜರುಗಿತು.

ಉತ್ಸವ ಅಂಗವಾಗಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀಲಕ್ಷ್ಮಿಕಾಂತಸ್ವಾಮಿಯವರ ಉತ್ಸವ ಮೂರ್ತಿಯನ್ನು ನಾದಸ್ವರದೊಂದಿಗೆ ಮೆರವಣಿಗೆ ನಡೆಸಲಾಯಿತು. ಈ ವೇಳೆ ಲಕ್ಷ್ಮಣಚಾರ್, ಅಂಕಣ್ಣ ಸೇರಿದಂತೆ ಗ್ರಾಮದ ಎಲ್ಲಾ ಬೀದಿ ಯಜಮಾನರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಫೈನಾನ್ಸ್ ಸಿಬ್ಬಂದಿಯಿಂದ ತಾಯಿ, ಮಗನ ಮೇಲೆ ಹಲ್ಲೆ

ನಂಜನಗೂಡು, ಮಾ.19– ಹಣ ಕಟ್ಟುವಂತೆ ಒತ್ತಾಯಿಸಿ ಖಾಸಗಿ ಫೈನಾನ್ಸ್ ಸಿಬ್ಬಂದಿ ತಾಯಿ ಮತ್ತು ಮಗನ ಮೇಲೆ ಹಲ್ಲೆ ನಡೆಸಿರುವ ಘಟನೆ ನಗರದ ಚಾಮಲಾಪುರದ ಹುಂಡಿಯಲ್ಲಿ ನಡೆದಿದೆ.

ಚೆನ್ನಾಜಮ್ಮ (52) ಮತ್ತು ಅವರ ಪುತ್ರ ಚಂದ್ರು ಫೈನಾನ್ಸ್ ಸಿಬ್ಬಂದಿಯಿಂದ ಹಲ್ಲೆಗೊಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಫಿನ್ ಕೇರ್ ಸ್ಮಾಲ್ ಫೈನಾನ್ಸ್ ಕಂಪನಿಯಿಂದ ಚೆನ್ನಾಜಮ್ಮ 50 ಸಾವಿರ ಸಾಲ ಪಡೆದಿದ್ದರು. ಪ್ರತಿ ತಿಂಗಳು 2700 ರೂ. ಕಂತು ಕಟ್ಟುತ್ತಿದ್ದರು ಎನ್ನಲಾಗಿದೆ. ಬುಧವಾರ ಕಂತಿನ ದಿನವಾದ್ದರಿಂದ ಮನೆ ಬಳಿಗೆ ಬಂದ ಫೈನಾನ್ಸ್ ಸಿಬ್ಬಂದಿ ನಾಗಮಲ್ಲಪ್ಪ ಹಣ ಕಟ್ಟುವಂತೆ ಒತ್ತಾಯಿಸಿದ್ದಾರೆ. ಈ ವೇಳೆ ಚೆನ್ನಾಜಮ್ಮ ಈ ತಿಂಗಳು ನನ್ನ ಬಳಿ ಹಣವಿಲ್ಲ. ಆದ್ದರಿಂದ ಕಂತು ಕಟ್ಟಲು ಕಾಲಾವಕಾಶ ನೀಡಬೇಕೆಂದು ಕೇಳಿದ್ದಾರೆ. ಇದರಿಂದ ಪ್ರತಿ ತಿಂಗಳು ನಾಟಕವಾಡಬೇಡಿ. ಈಗಲೇ ಕಂತಿನ ಹಣ ನೀಡಿ ಎಂದು ಧಮ್ಕಿ ಹಾಕಿದ್ದಾರೆ. ಈ ವೇಳೆಗೆ ಮನೆಗೆ ಬಂದ ಚೆನ್ನಾಜಮ್ಮ ಅವರ ಮಗ ಚಂದ್ರು, ಸರ್ಕಾರದ ನಿಯಮಾವಳಿಯಂತೆ ನಮಗೆ ಕಾಲಾವಕಾಶ ನೀಡಬೇಕು. ಇಲ್ಲವಾದಲ್ಲಿ ಕಂತಿನ ಹಣ ಕಟ್ಟುವುದಿಲ್ಲ ಏನು ಬೇಕಾದರೂ ಮಾಡಿಕೊಳ್ಳಿ ಎಂದಿದ್ದಾರೆ. ಈ ಸಂದರ್ಭ ಮಾತಿಗೆ ಮಾತು ಬೆಳೆದು ತಳ್ಳಾಟ, ನೂಕಾಟ ಸಂಭವಿಸಿ ಮೈಕ್ರೋ ಫೈನಾನ್ಸ್ ಸಿಬ್ಬಂದಿ ನಾಗಮಲ್ಲಪ್ಪ ತಾಯಿ, ಮಗನ ಮೇಲೆ ಹಲ್ಲೆ ನಡೆಸಿದ್ದಾರೆ. ಮೈಕ್ರೋ ಫೈನಾನ್ಸ್ ಹಾವಳಿ ತಡೆಗಟ್ಟಲು ಸರ್ಕಾರ ಸುಗ್ರೀವಾಜ್ಞೆ ಜಾರಿಗೊಳಿಸಿ ಬಲವಂತವಾಗಿ ಸಾಲ ವಸೂಲಿ ಮಾಡಬಾರದೆಂದು ಖಾಸಗಿ ಹಾಗೂ ಮೈಕ್ರೋ ಫೈನಾನ್ಸ್‌ಗಳಿಗೆ ಎಚ್ಚರಿಕೆ ನೀಡಿದ್ದರೂ ಸಹ ಸರ್ಕಾರದ ಆದೇಶ ಧಿಕ್ಕರಿಸಿ ದರ್ಪ ತೋರಿದ್ದಾರೆ. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕೊಪ್ಪ ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಬೆಟ್ಟದಪುರ, ಮಾ.19– ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಗ್ರಾಮದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧ್ಯಕ್ಷರಾಗಿ ಎ.ಎಸ್.ಸೋಮಶೇಖರ್, ಉಪಾಧ್ಯಕ್ಷರಾಗಿ ಎಸ್.ಎಸ್.ಮೋಹನ್ ರಾಜ್ ಆಯ್ಕೆಯಾದರು.

ಬುಧವಾರ ಸಹಕಾರ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎ.ಎಸ್.ಸೋಮಶೇಖರ್, ಎಂ.ಅಲ್ಲಾವುದ್ದೀನ್ ಉಪಾಧ್ಯಕ್ಷ ಸ್ಥಾನಕ್ಕೆ ಎಂ.ಎಸ್.ಮೋಹನ್ ರಾಜ್, ಎಂ.ಟಿ.ತಾರಾ ನಾಮಪತ್ರ ಸಲ್ಲಿಸಿದ್ರು ನಂತರ ನಡೆದ ಚುನಾವಣೆಯಲ್ಲಿ ತಲಾ 7 ಮತಗಳನ್ನು ಪಡೆದ ಸೋಮಶೇಖರ್ ಹಾಗೂ ಮೋಹನ್ ರಾಜ್ ಅಧ್ಯಕ್ಷ, ಉಪಾಧ್ಯಕ್ಷರಾಗಿ ಆಯ್ಕೆಯಾದರೇ ತಲಾ 6 ಮತಗಳನ್ನು ಪಡೆದ ಎಂ.ಅಲ್ಲಾವುದ್ದೀನ್, ತಾರಾ ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ ಜೆ.ಹಿತೇಂದ್ರ ಕಾರ್ಯ ನಿರ್ವಹಿಸಿದರು. ಈ ವೇಳೆ ನೆರೆದಿದ್ದ ಅಭಿಮಾನಿಗಳು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.


ಕೊಪ್ಪ ಪಿಎಸಿಎಸ್ ಅಧ್ಯಕ್ಷರಾಗಿ ಸೋಮಶೇಖರ, ಉಪಾಧ್ಯಕ್ಷರಾಗಿ ಮೋಹನ್ ರಾಜ್ ಆಯ್ಕೆಯಾದರು.

ನೂತನ ಅಧ್ಯಕ್ಷ ಸೋಮಶೇಖರ್ ಮಾತನಾಡಿ, ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ಎಲ್ಲಾ ನಿರ್ದೇಶಕರಿಗೆ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಶಾಸಕ ಕೆ.ಮಹದೇವ್ ಅವರಿಗೆ ಮತ್ತು ಕೊಪ್ಪ ಭಾಗದ ಜೆಡಿಎಸ್ ಮುಖಂಡರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮುಂದಿನ ದಿನಗಳಲ್ಲಿ ಸಹಕಾರ ಸಂಘದಲ್ಲಿ ರೈತರ ಕೃಷಿ ಚಟುವಟಿಕೆಗಳಿಗೆ ಹೆಚ್ಚು ಸಾಲ ನೀಡಿ ಆರ್ಥಿಕವಾಗಿ ಸಬಲರಾಗಿ ಮಾಡಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಉಪಾಧ್ಯಕ್ಷ ಮೋಹನ್ ರಾಜ್, ತಾಲೂಕು ರೋಟರಿ ಮಿಡ್ ಟೌನ್ ಮಾಜಿ ಅಧ್ಯಕ್ಷ ರಾಜೇಗೌಡ, ತಾಪಂ ಮಾಜಿ ಸದಸ್ಯ ರಾಮು ಮಾತನಾಡಿದರು.

ಈ ವೇಳೆ ನಿರ್ದೇಶಕರಾದ ಕೆ.ಎಸ್.ಕಲ್ಯಾಣಪ್ಪ, ಅಶೋಕ್ ಕುಮಾರ್, ಚಂದ್ರೇಗೌಡ ಎಂ.ಎ, ಶಿವಪ್ಪ, ವೆಂಕಟೇಶ್, ಸುಮಿತ್ರ.ಕೆ.ಹೆಚ್, ಮಂಜು.ಎಸ್, ಸುಬ್ರಹ್ಮಣ್ಯ. ಬಿ.ಆರ್, ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮಿ, ಮಾಜಿ ಅಧ್ಯಕ್ಷ ರೇಣುಕಾಸ್ವಾಮಿ, ಸದಸ್ಯ ರಾಮಚಂದ್ರ, ಮುಖಂಡರಾದ ಯೋಗೀಶ್, ಶಿವಣ್ಣ, ದಿವಾಕರ, ಚಂದ್ರಶೇಖರ್, ಗಿರೀಶ್, ಬಲರಾಮು, ಮುಖಂಡ ಕುಮಾರಸ್ವಾಮಿ ಇತರರಿದ್ದರು.

ಪುನೀತ್‌ರಾಜ್‌ಕುಮಾರ್ ಹುಟ್ಟುಹಬ್ಬ ಆಚರಣೆ

ನಟ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಪ್ರಯುಕ್ತ ಮೈಸೂರು ತಾಲೂಕಿನ ಶ್ರೀರಾಂಪುರ ಗ್ರಾಮದ ನವಚೇತನ ಬಸವೇಶ್ವರ ವಿಶೇಷ ಮಕ್ಕಳ ಶಾಲೆಯಲ್ಲಿ ಸಮಾಜ ಸೇವಕ ಎಸ್.ಶ್ರೀಕಾಂತ್ ಪುನೀತ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮಕ್ಕಳಿಗೆ ಸಿಹಿ ಊಟ ಬಡಿಸಿ, ಸಮವಸ್ತ್ರ ವಿತರಿಸಿದರು. ವಿಶೇಷ ಮಕ್ಕಳ ಶಾಲೆ ಸಂಸ್ಥಾಪಕ ಅಧ್ಯಕ್ಷ ಮರೀಗೌಡ ಮತ್ತು ಶಿಕ್ಷಕರು ಹಾಜರಿದ್ದರು.



ಆಕಸ್ಮಿಕ ಬೆಂಕಿ: ಬಾಳೆ, ಶುಂಠಿ, ಕೃಷಿ ಪರಿಕರ ಭಸ್ಮ

ಬೆಟ್ಟದಪುರ, ಮಾ.19– ಆಕಸ್ಮಿಕ ಬೆಂಕಿ ತಗುಲಿ ಬಾಳೆ, ಶುಂಠಿ ಫಸಲು ಸೇರಿದಂತೆ ಲಕ್ಷಾಂತರ ರೂ. ಮೌಲ್ಯದ ಕೃಷಿ ಪರಿಕರಗಳು ಭಸ್ಮವಾಗಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಹರದೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಹೆಚ್.ಜೆ. ಹರೀಶ್ ಅವರಿಗೆ ಸೇರಿದ ಫಸಲು, ಕೃಷಿ ಪರಿಕರ ಭಸ್ಮವಾಗಿರುವುದು. ಹರೀಶ್ ಅವರು ಮಂಜುನಾಥ್ ಅವರಿಗೆ ಸೇರಿದ ಜಮೀನನ್ನು ಪಡೆದು ಶುಂಠಿ, ಬಾಳೆ ಬೆಳೆದಿದ್ದರು. ಆದರೆ ಆಕಸ್ಮಿಕ ಬೆಂಕಿ ಬಿದ್ದು ಫಸಲು ಸೇರಿದಂತೆ ಕೃಷಿ ಪರಿಕರಗಳು ಭಸ್ಮವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಹೀಗಾಗಿ ಸೂಕ್ತ ಪರಿಹಾರ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಹರೀಶ್ ಒತ್ತಾಯಿಸಿದರು. ಸ್ಥಳಕ್ಕೆ ಕಂದಾಯ ಇಲಾಖೆ ನಿರೀಕ್ಷಕ ಅಜ್ಮಲ್ ಷರೀಫ್, ಗ್ರಾಮ ಆಡಳಿತ ಅಧಿಕಾರಿ ನಿರಂಜನ್ ಭೇಟಿ ನೀಡಿ ಪರಿಶೀಲಿಸಿದರು.

ಕೋಟೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪೂರ್ವಭಾವಿ ಸಭೆ

ಹೆಚ್.ಡಿ.ಕೋಟೆ, ಮಾ.19– ಪಟ್ಟಣದ ತಾಪಂ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ವ್ಯವಸ್ಥಿತ ಹಾಗೂ ಪಾರದರ್ಶಕವಾಗಿ ನಡೆಸುವ ಸಂಬಂಧ ಪೂರ್ವಭಾವಿ ಸಭೆ ನಡೆಯಿತು.

ತಹಸೀಲ್ದಾರ್, ತಾಪಂ ಇಓ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಮಾ.21ರಿಂದ ಏ.4ರವರೆಗೆ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೇಮಕವಾದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಪ್ರಶ್ನೆ ಪತ್ರಿಕೆ ಅಭಿರಕ್ಷಕರಿಗೆ ಪೂರ್ವಭಾವಿಯಾಗಿ ಪರೀಕ್ಷೆಯನ್ನು ವ್ಯವಸ್ಥಿತ ಹಾಗೂ ಪಾರದರ್ಶಕವಾಗಿ ನಡೆಸುವ ಸಂಬಂಧ ಸಲಹೆ ಸೂಚನೆಗಳನ್ನು ನೀಡಲಾಯಿತು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆಯಿಂದ ವ್ಯವಸ್ಥಿತ, ಪಾರದರ್ಶಕವಾಗಿ ಪರೀಕ್ಷೆ ನಡೆಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.


ತಾಪಂ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.

ತಾಲೂಕಿನ ದೂರದ ಊರುಗಳಿಂದ ಮಕ್ಕಳು ಪರೀಕ್ಷಾ ಕೇಂದ್ರಗಳಿಗೆ ಬರುವುದರಿಂದ ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರ್‌ಗೆ ಕರೆ ಮಾಡಿ ಸಮರ್ಪಕವಾಗಿ ಬಸ್ ಸೌಲಭ್ಯ ಒದಗಿಸಬೇಕು ಎಂದು ತಿಳಿಸಿದರು.

ತಾಪಂ ಇಓ ಧರಣೇಶ್ ಮಾತನಾಡಿ, ಪರೀಕ್ಷಾ ಕೇಂದ್ರಗಳಲ್ಲಿ ಸ್ವಚ್ಛತೆ ಹಾಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಅಕ್ಷರ ದಾಸೋಹ ಅಧಿಕಾರಿ ರಾಜು, ಶಿಕ್ಷಣ ಸಂಯೋಜಕ ಕೃಷ್ಣಮೂರ್ತಿ, ಪುರುಷೋತ್ತಮ್, ನಾರಾಯಣಸ್ವಾಮಿ, ಭೀಮಪ್ಪ, ಪ್ರಕಾಶ್, ನಾಗರಾಜು, ರಾಥೋಡ್, ವಿಶ್ವನಾಥ್ ಪ್ರಸಾದ್, ಧರ್ಮಪ್ಪ, ಸುಜಾತ, ಪ್ರಕಾಶ್, ಪ್ರಮೋದ್ ಇನ್ನಿತರರಿದ್ದರು.

> ಸಿಸಿಟಿವಿ ಕಣ್ಗಾವಲಿನಲ್ಲಿ ಪರೀಕ್ಷೆಯನ್ನು ಪಾರದರ್ಶಕ, ಸುವ್ಯವಸ್ಥಿತವಾಗಿ ನಡೆಸಲು ಕ್ರಮ ಕೈಗೊಳ್ಳಲಾಗುವುದು. ಮುಖ್ಯ ಅಧೀಕ್ಷಕರು ಪರೀಕ್ಷೆ ನಡೆಯುವ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪೀಠೋಪಕರಣಗಳ ವ್ಯವಸ್ಥೆ ಪರಿಶೀಲಿಸಬೇಕು ಹಾಗೂ ಪರೀಕ್ಷಾರ್ಥಿಗಳಿಗೆ ಪರೀಕ್ಷೆ ದಿನ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ಕೇಂದ್ರಗಳಲ್ಲಿ ಸಾಧ್ಯವಾದ ಮಟ್ಟಿಗೆ ಯುಪಿಎಸ್ ವ್ಯವಸ್ಥೆ ಮಾಡಬೇಕು.
>
> – ಅನಂತರಾಜು, ಕ್ಷೇತ್ರ ಶಿಕ್ಷಣಾಧಿಕಾರಿ.

ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ನಟರಾಜು ಅಧ್ಯಕ್ಷ, ನಂಜುಂಡ ಉಪಾಧ್ಯಕ್ಷ

ತಿ.ನರಸೀಪುರ, ಮಾ.19– ತಾಲೂಕಿನ ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಹೆಳವರಹುಂಡಿ ಪಿ.ನಟರಾಜು, ಉಪಾಧ್ಯಕ್ಷರಾಗಿ ಆಲಗೂಡು ನಂಜುಂಡ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ಬುಧವಾರ ನಡೆದ ಚುನಾವಣೆಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಪಿ.ನಟರಾಜು ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಉಪಾಧ್ಯಕ್ಷ ಸ್ಥಾನಕ್ಕೆ ಆಲಗೂಡು ನಂಜುಂಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹಸೀನಾ ಘೋಷಿಸಿದರು.

ಚುನಾವಣಾ ವಿಶೇಷ ಸಭೆಯಲ್ಲಿ ಸಾಲಗಾರರ ಕ್ಷೇತ್ರದಿಂದ ನಿರ್ದೇಶಕರಾಗಿ ಆಯ್ಕೆಯಾದ ನಾಗಣ್ಣ, ಬಿ.ವೀರಭದ್ರಪ್ಪ, ಮಹದೇವ, ಶಿವಣ್ಣ, ಮಹದೇವಮ್ಮ, ಕಾಂತಮ್ಮ, ಹೆಚ್.ಮರಿಸ್ವಾಮಿ, ಮಲ್ಲಣ್ಣ, ಜಯಣ್ಣ, ಸಾಲಗಾರರಲ್ಲದ ಕ್ಷೇತ್ರದಿಂದ ಆಯ್ಕೆಯಾದ ಸಹದೇವ ಹಾಜರಿದ್ದು ಅಧ್ಯಕ್ಷ –ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.


ಆಲಗೂಡು ಪಿಎಸಿಎಸ್ ಅಧ್ಯಕ್ಷರಾಗಿ ನಟರಾಜು, ಉಪಾಧ್ಯಕ್ಷರಾಗಿ ನಂಜುಂಡ ಆಯ್ಕೆಯಾದರು.

ಸಹಕಾರ ಸಂಘದ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿ ಸದಸ್ಯರನ್ನು ಆಯ್ಕೆ ಮಾಡಲು ಮಾ.8ರಂದು ಚುನಾವಣೆ ನಡೆದಿತ್ತು. ಈ ವೇಳೆ ಹೆಳವರಹುಂಡಿ ನಟರಾಜು ಹಾಗೂ ಮಾಜಿ ಅಧ್ಯಕ್ಷ ಬಿ.ವೀರಭದ್ರಪ್ಪ ತಂಡದ ನಡುವೆ ನಿರ್ದೇಶಕರ ಆಯ್ಕೆಗೆ ತೀವ್ರ ಪೈಪೋಟಿ ಎದುರಾಗಿ ವೀರಭದ್ರಪ್ಪ ಬಣದಿಂದ ಅವರೊಬ್ಬರು ಆಯ್ಕೆಯಾದರೇ, ನಟರಾಜು ಬಣದಿಂದ 10 ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಮತ್ತೊಂದು ಬಣದಿಂದ ಧರ್ಮಯ್ಯನ ಹುಂಡಿ ಮಲ್ಲಣ್ಣ ಮಾತ್ರವೇ ಜಯಗಳಿಸಿದ್ದರು.

ನೂತನ ಅಧ್ಯಕ್ಷ ಪಿ.ನಟರಾಜು ಮಾತನಾಡಿ, ತಮ್ಮ ಆಯ್ಕೆಗೆ ಸಹಕರಿಸಿದ ಎಲ್ಲ ನಿರ್ದೇಶಕರಿಗೂ ಧನ್ಯವಾದ. ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ರೈತರಿಗೆ ದೊರಕಿಸಿ ಕೊಡಲಾಗುವುದು. ಸಂಘದಿಂದ ಸಾಲ, ರಸಗೊಬ್ಬರ, ಬಿತ್ತನೆ ಬೀಜ ಮತ್ತು ಇತರೆ ಉಪಕರಣಗಳನ್ನು ರೈತರಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಸಹಕಾರಿಗಳು ನಮ್ಮ ತಂಡಕ್ಕೆ ನಿರೀಕ್ಷೆ ಮೀರಿ ಸಹಕಾರ ನೀಡಿದ್ದಾರೆ. ಅವರ ನಂಬಿಕೆಗೆ ಯಾವುದೇ ಚ್ಯುತಿ ಬಾರದಂತೆ ಕರ್ತವ್ಯ ನಿರ್ವಹಿಸುವ ಮೂಲಕ ಸಂಘವನ್ನು ತಾಲೂಕಿನಲ್ಲಿಯೇ ಮಾದರಿ ಸಂಘ ಮಾಡಲು ನಿರ್ದೇಶಕರೊಡಗೂಡಿ ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ತಿ.ನರಸೀಪುರ ಟಿಎಪಿಸಿಎಂಎಸ್ ಅಧ್ಯಕ್ಷ ಸುಬ್ರಮಣ್ಯ, ಕಸಬಾ ಪಿಎಸಿಎಸ್ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಉಪಾಧ್ಯಕ್ಷ ಫಣೀಶ್ ಕುಮಾರ್, ತಾಪಂ ಮಾಜಿ ಸದಸ್ಯ ಎಂ.ರಮೇಶ, ಮುಖಂಡರಾದ ಸಿ.ಮಹದೇವ, ಅರುಣ್ ಕುಮಾರ, ಗುರುಸ್ವಾಮಿ, ಲಿಂಗರಾಜು, ಅಮಾಸ್ಯೆಗೌಡ, ನಾಗಣ್ಣ, ಮೂರ್ತಿ, ಹೊಸಪುರ ನವೀನ್, ಸುರೇಶ್, ಯೋಗೀಶ್, ಮನೋಜ್ ಕುಮಾರ್, ಪುರಸಭೆ ಸದಸ್ಯ ಕಿರಣ್, ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ, ಶಿವರಾಜು, ಮಂಜುನಾಥ್, ಸಂಘದ ಮೇಲ್ವಿಚಾರಕ ಶೇಖರ್, ಸಿಇಓ ಸೋಮಣ್ಣ ಸೇರಿದಂತೆ ಇತರರಿದ್ದರು.

ಬೆಳಗಾವಿಯಲ್ಲಿ ಮರಾಠಿಗರ ಪುಂಡಾಟಿಕೆ; ತಮಿಳ್ನಾಡಿನಿಂದ ಮೇಕೆದಾಟು ಯೋಜನೆಗೆ ವಿರೋಧ ಖಂಡಿಸಿ ಮೈಸೂರಲ್ಲಿ ವಾಟಾಳ್ ಪ್ರತಿಭಟನೆ

ಕನ್ನಡಿಗರು ಮಾ.22ರ ಬಂದ್ ಬೆಂಬಲಿಸಲು ಮನವಿ



ಬೆಳಗಾವಿಯಲ್ಲಿ ಮರಾಠಿಗರ ಪುಂಡಾಟಿಕೆ ಖಂಡಿಸಿ, ಎಂಇಎಸ್ ನಿಷೇಧಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.19(ಎಂಟಿವೈ)– ಬೆಳಗಾವಿಯಲ್ಲಿ ಮರಾಠಿಗರ ಪುಂಡಾಟಿಕೆ ಖಂಡಿಸಿ, ಎಂಇಎಸ್ ನಿಷೇಧಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿದರು.

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಬುಧವಾರ ಮಧ್ಯಾಹ್ನ ಬೆಂಬಲಿಗರೊಂದಿಗೆ ವಾಟಾಳ್ ನಾಗರಾಜ್ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ, ಮರಾಠಿಗರು ನಡೆಸುತ್ತಿರುವ ಪುಂಡಾಟಿಕೆಗೆ ಕಡಿವಾಣ ಹಾಕಬೇಕು. ಎಂಇಎಸ್ ಸಂಘಟನೆಯನ್ನು ನಿಷೇಧಿಸಬೇಕು. ಕಳಸಾ–ಬಂಡೂರಿ ಮಹದಾಯಿ ಯೋಜನೆಯನ್ನು ಕೂಡಲೇ ಆರಂಭಿಸಬೇಕು. ಹಿಂದಿ ಹೇರಿಕೆ ಬೇಡ. ಕಲ್ಯಾಣ ಕರ್ನಾಟಕದ ಅಭಿವೃದ್ಧಿಯಾಗಬೇಕು. ರಾಜ್ಯದ ಕಂಡಕ್ಟರ್‌ಗಳ ಮೇಲೆ ಮರಾಠಿಗರ ದಾಳಿ ಸಂಬಂಧ ಸಮಗ್ರ ತನಿಖೆ ಆಗಬೇಕು ಎಂದು ಒತ್ತಾಯಿಸಿದರು.

ಮರಾಠಿಗರ ಪುಂಡಾಟ ಖಂಡಿಸಿ, ಮೇಕೆದಾಟು ಯೋಜನೆಯನ್ನು ವಿರೋಧಿಸುತ್ತಿರುವ ತಮಿಳುನಾಡು, ರಾಜ್ಯಕ್ಕೆ ಬೆಂಬಲ ನೀಡದ ಕೇಂದ್ರ ಸರ್ಕಾರದ ವಿರುದ್ಧ ಮಾ.22ರಂದು ಕರ್ನಾಟಕ ಬಂದ್‌ಗೆ ಕರೆ ನೀಡಲಾಗಿದೆ. ಕನ್ನಡಿಗರು ಈ ಬಂದ್‌ಗೆ ಕೈಜೋಡಿಸಬೇಕು. ಸಮಗ್ರ ಕನ್ನಡಿಗರಿಗಾಗಿ, ಕನ್ನಡಿಗರ ಗೌರವ–ಸ್ವಾಭಿಮಾನಕ್ಕೆ, ಕನ್ನಡಕ್ಕಾಗಿ ಕರ್ನಾಟಕ ಬಂದ್ ಮಾಡಲಾಗುತ್ತಿದೆ. ಬೆಳಗಾವಿಯಿಂದ ಚಾಮರಾಜನಗರವರೆಗೆ ಬಂದ್ ನಡೆಯಲಿದೆ. ಈಗ ಬೆಳಗಾವಿ ಕನ್ನಡಿಗರ ಕೈಯ್ಯಲ್ಲಿ ಇಲ್ಲ, ಮರಾಠಿಗರ ಕೈಯಲ್ಲಿ ಇದೆ. ಮಹಾರಾಷ್ಟ್ರ ಏಕೀಕರಣ ಸಮಿತಿ ಬೇಕಾಗಿಲ್ಲ ಎಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಎಂದರು.

ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಎಂಇಎಸ್ ಇರಬಾರದು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಚಾಲಕರು ಮತ್ತು ನಿರ್ವಾಹಕರಿಗೆ ಕನ್ನಡದ ಭೂಮಿಯಲ್ಲಿ ಹೊಡೆದಿದ್ದಾರೆ. ಚಾಲಕರು ಈ ಬಂದ್ ವೇಳೆ ವಾಹನಗಳನ್ನು ಚಾಲನೆ ಮಾಡಬಾರದು. ರಾಜ್ಯಪಾಲರ, ಮುಖ್ಯಮಂತ್ರಿಗಳ ಕಾರು ಚಾಲಕರು ಬಂದ್ ದಿನ ಕರ್ತವ್ಯಕ್ಕೆ ಹೋಗಬಾರದು. ಕನ್ನಡಪರ ಸಂಘಟನೆಗಳ ಬಳಿಯೂ ಮನವಿ ಮಾಡಿದ್ದೇನೆ. ಚಿತ್ರರಂಗ ಸಂಪೂರ್ಣ ಬಂದ್ ಆಗುತ್ತದೆ ಎಂದು ನಂಬಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನವರು ವರ್ಷದಲ್ಲಿ ಮೂರು ದಿನ ಒಬ್ಬಟ್ಟು ಊಟ ಮಾಡಿ ಮಲಗುತ್ತಾರೆ. ಸಾಹಿತಿಗಳು ಬೆಂಬಲ ಕೊಡಬೇಕು ಎಂದು ಹೇಳಿದರು.

ಪ್ರಮುಖ ಬೇಡಿಕೆಗಳು: ಕರ್ನಾಟಕ ಬಂದ್ ವೇಳೆ ರಾಜ್ಯದ ಹಿತ ದೃಷ್ಟಿಯಿಂದ ವಿವಿಧ ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸಲಾಗುವುದು. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಅಭಿವೃದ್ಧಿಯಾಗಬೇಕು. ರಾಜ್ಯದ ಗಡಿನಾಡುಗಳ ಬೆಳವಣಿಗೆಯಾಗಬೇಕು. ಶಿವಸೇನೆ ಹಾಗೂ ಎಂಇಎಸ್ ಪುಂಡರನ್ನು ಗಡಿಪಾರು ಮಾಡಬೇಕು. ಬೆಳಗಾವಿ ಜಿಲ್ಲೆಯ ಎಲ್ಲಾ ರಾಜಕಾರಣಿಗಳು ರಾಜೀನಾಮೆ ಕೊಡಬೇಕು. ಸಾಂಬಾಜಿ ಪ್ರತಿಮೆ ತೆರವು ಮಾಡಬೇಕು. ಬಸ್ ಕಂಡಕ್ಟರ್ ಮೇಲೆ ಹಲ್ಲೆ ಮಾಡಿದವರಿಗೆ ಕಠಿಣ ಶಿಕ್ಷೆಯಾಗಬೇಕು. ಮಹದಾಯಿ–ಕಳಸ ಬಂಡೂರಿ ಯೋಜನೆ ಕಾರ್ಯಗತವಾಗಬೇಕು. ಮೇಕೆದಾಟು ಯೋಜನೆ ಜಾರಿಯಾಗಬೇಕು. ಕೊಪ್ಪಳ ಸುತ್ತ ಯಾವ ಕಾರ್ಖಾನೆಗಳು ಬೇಡವೇ ಬೇಡ. ಕರ್ನಾಟಕದಲ್ಲಿ ಪರಭಾಷಾ ದಬ್ಬಾಳಿಕೆ ನಿಲ್ಲಬೇಕು. ಪರಭಾಷಾ ಚಿತ್ರಗಳ ಬಹಿಷ್ಕಾರ ಮಾಡಬೇಕು. ಮಹಾರಾಷ್ಟ್ರದಲ್ಲಿ ಕನ್ನಡ ಮಹಾಮಹಿಮರ ಪ್ರತಿಮೆಗಳು ಸ್ಥಾಪನೆಯಾಗಬೇಕು. ಮಂಗಳೂರು–ಕಾರವಾರ ಬಂದರು ಅಭಿವೃದ್ಧಿ ಮಾಡಬೇಕು. ಮೆಟ್ರೋ ದರ ಏರಿಕೆ ವಾಪಸ್ ಪಡೆದು, ಇಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಮಲ್ಲೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಗನ ಕುಸುಮ(ಕ) + ರಾಬರ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೀಮ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಕ್ರಾಂತಿಕು ವಸ್ತುನಾರು (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಸ್ವೀಟ್ ಹಾರ್ಟ್(ತ)	4 ಪ್ರದರ್ಶನಗಳು
ಸಂಗಂ	
ಕೋರ್ಟ್(ತೆ)	4 ಪ್ರದರ್ಶನಗಳು
ಲಿಡೋ	
ಡಾಕೂ ಮಹಾರಾಜ್(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಸ್ಟರ್ (ತ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಡಿಪ್ಲೊಮೆಟ್ (ಹಿಂ): ಬೆ.10ಕ್ಕೆ, ಮ.12.50ಕ್ಕೆ, ರಾ.7ಕ್ಕೆ, ಇಂಟರ್‌ಸ್ಟೆಲ್ಲರ್ (ಇಂ): ಮ.3.40ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ನೊವೊಕೇನ್ (ಇಂ): ಬೆ.10.30ಕ್ಕೆ, ರಾ.10.20ಕ್ಕೆ, ಡ್ರ್ಯಾಗನ್ (ತ): ಮ.1ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಸಂ.4.10ಕ್ಕೆ, ದಿಲ್‌ರೂಬ (ತೆ): ರಾ.7.15ಕ್ಕೆ.
ಸ್ಕ್ರೀನ್ 3	ಡ್ರ್ಯಾಗನ್ (ತ): ಬೆ.10ಕ್ಕೆ, ಸ್ವೀಟ್‌ಹಾರ್ಟ್ (ತ): ಮ.1.05ಕ್ಕೆ, ಅ (ಕ): ಸಂ.4.10ಕ್ಕೆ, ಛಾವಾ (ಹಿಂ): ರಾ.7.10ಕ್ಕೆ, ದಿ ಡಿಪ್ಲೊಮೆಟ್ (ಹಿಂ): ಬೆ.10
ಸ್ಕ್ರೀನ್ 4	ಅಪ್ಪು (ಕ): ಬೆ.10.40ಕ್ಕೆ, ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.30ಕ್ಕೆ, ಪೆರುಸು (ತ): ಸಂ.6.30ಕ್ಕೆ, ಸ್ವೀಟ್ ಹಾರ್ಟ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅಪ್ಪು (ಕ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ದಿಲ್‌ರೂಬಾ (ತೆ): ರಾ.9.25ಕ್ಕೆ.
ಸ್ಕ್ರೀನ್ 3	ಛಾವಾ (ಹಿಂ): ಸಂ.6.10ಕ್ಕೆ, ಅಪ್ಪು (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಾ.23ರಂದು ಮೈಸೂರಲ್ಲಿ ಶರಣ ಸಾಹಿತ್ಯ ಸಮ್ಮೇಳನ

ಸಾಧಕರಿಗೆ ಶರಣ ಶ್ರೀ ಪ್ರಶಸ್ತಿ ಪ್ರದಾನ

ಮೈಸೂರು, ಮಾ.19(ಜಿಎ)–ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಮತ್ತು ನಗರ ಘಟಕದ ವತಿಯಿಂದ ಮಾ. 23ರಂದು ಭಾನುವಾರ ನಗರದ ಕಲಾಮಂದಿರದಲ್ಲಿ ಶರಣ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಮ.ಗು. ಸದಾನಂದಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಮೆಟ್ರೋಪೋಲ್ ವೃತ್ತದಿಂದ ವಚನ ಜಾಗೃತಿ ಜಾಥಾಕ್ಕೆ ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಚಾಲನೆ ನೀಡುವರು. ಜಾಥಾವೂ ವಿವಿಧ ಜಾನಪದ ತಂಡ, ವಚನ ಫಲಕ, ಶರಣರ ಮುಖವಾಡಧಾರಿಗಳೊಡನೆ ಕಲಾಮಂದಿರ ತಲುಪಿದೆ. ಬೆಳಗ್ಗೆ 10ಕ್ಕೆ ಕಲಾಮಂದಿರದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಶರಣ ಮೇಳವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟಿಸುವರು ಎಂದರು.

ಡಾ.ಸಿ. ಸೋಮಶೇಖರ್ ಅಧ್ಯಕ್ಷತೆ ವಹಿಸುವರು, ಈ ವೇಳೆ ಪ್ರೊ.ಡಿ.ಎಸ್. ಸದಾಶಿವಮೂರ್ತಿ ಅವರು ಸಂಪಾದಿಸಿರುವ ಕೂಡಲ ಸಂಗಮ ಸ್ಮರಣ ಸಂಚಿಕೆಯನ್ನು ಶಾಸಕ ಕೆ. ಹರೀಶ್‌ಗೌಡ ಬಿಡುಗಡೆಗೊಳಿಸುವರು. ಇದಲ್ಲದೆ ಗಣ್ಯರು ಇನ್ನಿತರ ಕೃತಿಗಳನ್ನು ಸಹಾ ಬಿಡುಗಡೆಗೊಳಿಸಲಿದ್ದಾರೆ ಎಂದರು.

ಸಮ್ಮೇಳನಾಧ್ಯಕ್ಷರನ್ನಾಗಿ ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ. ವಚನ ಸಾಹಿತ್ಯ ಮತ್ತು ಸಮಕಾಲೀನ ಸಂದರ್ಭ ಕುರಿತು ವಿಚಾರ ಸಂಕಿರಣ ನಡೆಯಲಿದ್ದು, ಡಾ.ಎಸ್.ಪಿ. ಉಮಾದೇವಿ, ಶಂಕರ ಬಿದನೂರು ಮೊದಲಾದವರು ಪಾಲ್ಗೊಳ್ಳಲಿದ್ದಾರೆ. ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಶಿವರುದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಸಮಾರೋಪ ನುಡಿ ಆಡುವರು. ಶಾಸಕರಾದ ಜಿ.ಟಿ.ದೇವೇಗೌಡ, ಹೆಚ್.ಎಂ. ಗಣೇಶ್ ಪ್ರಸಾದ್, ಎಂಎಲ್‌ಸಿಗಳಾದ ಹೆಚ್. ವಿಶ್ವನಾಥ್, ಕೆ.ವಿವೇಕಾನಂದ ಇನ್ನಿತರರು ವೇದಿಕೆಯಲ್ಲಿರುವರು. ಕಾರ್ಯಕ್ರಮದಲ್ಲಿ ಪ್ರೊ.ಎಸ್.ಎಸ್. ಹರಿಶಂಕರ್, ಎಂ.ಎ. ನೀಲಾಂಬಿಕಾ, ಪ್ರಭಾಮಣಿ, ಜ್ಯೋತಿರ್ಲಿಂಗನ ಗೌಡ ಪಾಟೀಲ್, ಡಿ.ಜಿ. ಸೋಮಶೇಖರ ಮೂರ್ತಿ, ಎಸ್. ಬಸವರಾಜು ಅವರಿಗೆ ಶರಣ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹೆಳವರಹುಂಡಿ ಸಿದ್ದಪ್ಪ, ಟಿ.ಎಸ್. ಕುಮಾರಸ್ವಾಮಿ, ಉಮಾಪತಿ, ಬಿ.ಎನ್. ನಂದೀಶ್ವರ್, ದೇವರಾಜ ಡಿ. ಚಿಕ್ಕಳ್ಳಿ ಉಪಸ್ಥಿತರಿದ್ದರು.

ಭಾರತದ ವಿಜ್ಞಾನಿಗಳು ಮನೋರಂಜನೆಗೆ ದಾಸರಾಗಿದ್ದರೆ ರಾಕೆಟ್ ಉಡಾವಣೆ ಸಾಧ್ಯವಾಗುತ್ತಿರಲಿಲ್ಲ

ವ್ಯಕ್ತಿತ್ವ ತರಬೇತಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಸಾಗರ್ ಹಿರೇಮಠ್ ಅಭಿಪ್ರಾಯ

ಮೈಸೂರು, ಮಾ.19(ಬಿಎಲ್‌ಯು)– ನಮ್ಮ ಇಸ್ರೋ ವಿಜ್ಞಾನಿಗಳು ದಿನನಿತ್ಯ ಧಾರವಾಹಿ ನೋಡುವುದು ಸೇರಿದಂತೆ ಇತರೆ ಮನೋರಂಜನೆಯಲ್ಲಿ ಕಾಲ ಕಳೆದಿದ್ದರೆ ಇಂದು ರಾಕೆಟ್ ಉಡಾವಣೆ ಮಾಡಿ, ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಅಂತರರಾಷ್ಟ್ರೀಯ ವ್ಯಕ್ತಿತ್ವ ತರಬೇತಿ ವಿಭಾಗದ ಹಿರಿಯ ಸಹಾಯಕ ನಿರ್ದೇಶಕ ಸಾಗರ್ ಹಿರೇಮಠ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಇಂದು ಆಯೋಜಿಸಿದ್ದ ಮಾನಸ ಯುವ ಸಂವರ್ಧನೆ–2025 ಔದ್ಯೋಗಿಕ ಮತ್ತು ಯುವ ಸಬಲೀಕರಣ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಬಾಹ್ಯಾಕಾಶ ಕ್ಷೇತ್ರದಲ್ಲಿ ಹಲವು ರೀತಿಯ ಸಂಶೋಧನೆ ಮಾಡುವ ಮೂಲಕ ಭಾರತ ಇಂದು ವಿಶ್ವದ ಹಲವು ರಾಷ್ಟ್ರಗಳಿಗೆ ಪೈಪೋಟಿ ನೀಡುತ್ತಿದೆ. ಇದೆಲ್ಲಾ ನಮ್ಮ ವಿಜ್ಞಾನಿಗಳ ಪರಿಶ್ರಮದಿಂದ ಆಗಿದೆ ಎಂದರು.

ವಿಜ್ಞಾನ ಹಾಗೂ ತಂತ್ರಜ್ಞಾನವೆಂದರೆ ಅಜ್ಜಿ ಕಥೆಯಂತೆ ಒಂದು ಊರಲ್ಲಿ ಒಬ್ಬ ಹುಡುಗ–ಹುಡುಗಿ ಇದ್ದರು ಎಂಬ ಕಾದಂಬರಿಯಾಧಾರಿತ ವಿಚಾರ ವಸ್ತುವಲ್ಲ. ವಾಸ್ತವಿಕ ನೆಲೆಗಟ್ಟು ಹಾಗೂ ಭವಿಷ್ಯದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಆವಿಷ್ಕಾರ ಮಾಡುವುದು ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿಯ ಮೂಲ ಧ್ಯೇಯೋದ್ದೇಶವಾಗಿದೆ ಎಂದು ಸಾಗರ್ ಹಿರೇಮಠ್ ಹೇಳಿದರು.



ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಅನಿರೀಕ್ಷಿತವಾಗಿ ಬಹಳಷ್ಟು ಬೆಳವಣಿಗೆಗಳಾಗುತ್ತಿದೆ. ಒಳ್ಳೆಯ ರಾಜಕಾರಣಿಯಾಗಬೇಕೆಂದು ಯಾವುದಾದರೂ ಪಿಆರ್ ಏಜೆನ್ಸಿ ಭೇಟಿ ಮಾಡಿ ತಮ್ಮ ಅಭಿಲಾಷೆ ತಿಳಿಸಿದರೆ ಸಾಕು ರಾಜಕಾರಣದಲ್ಲಿ ಯಶಸ್ವಿ ಹಾದಿಯಲ್ಲಿ ಸಾಗಲು ಬಹಳಷ್ಟು ಟಿಪ್ಸ್ ಕೊಡುತ್ತಾರೆ. ಆದರೆ ಕೈ ತುಂಬ ಹಣವಿರಬೇಕು ಎಂದು ತಿಳಿಸಿದರು. ನಾನು ಸೂಟ್ ಬೂಟ್ ಹಾಕಿಕೊಂಡು ಟೈ ಧರಿಸಿದರೆ ಎಷ್ಟು ಜನರು ನನ್ನ ಇಷ್ಟ ಪಡುತ್ತಾರೆ ಎಂದು ಕೇಳಿದರೆ ಇದರ ಬಗ್ಗೆಕೂಡ ಕಂಪನಿ ಅಧ್ಯಯನ ಮಾಡಿ ಅಂಕಿ ಅಂಶ ನೀಡುತ್ತದೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಇಂದಿನ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆದ ಮೇಲೆ ಉದ್ಯೋಗ ಪಡೆಯಲು ಬಹಳಷ್ಟು ಅವಕಾಶಗಳಿವೆ. ಆದರೆ ಅದನ್ನು ಸಮರ್ಪಕವಾಗಿ ಸದುಪಯೋಗ ಮಾಡಿಕೊಂಡು ಸಾಧನೆ ಮಾಡಬೇಕು ಎಂದು ಹೇಳಿದರು.

ಇಂತಹ ಕಾರ್ಯಾಗಾರದಲ್ಲಿ ಉಪನ್ಯಾಸಕರು ಹೇಳುವುದನ್ನು ಕೇಳಿಕೊಂಡು ಮೌನ ವಹಿಸಬೇಡಿ. ನಿಮ್ಮಲ್ಲಿ ಕಾಡುವ ಸಂಶಯದ ಬಗ್ಗೆ ಪ್ರಶ್ನೆ ಕೇಳಿ ಅದನ್ನು ಪರಿಹರಿಸಿಕೊಳ್ಳಬೇಕು. ಈ ಮೂಲಕ ಪ್ರಶ್ನಾರ್ಥಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಇಂಗ್ಲಿಷ್‌ನಲ್ಲಿ ಯಾವುದೇ ವಿಚಾರ ಹೇಳಬೇಕಾದರೆ ಸಹಜವಾಗಿ ಮಾತನಾಡಿ. ತಮ್ಮ ಎದುರಿನ ವ್ಯಕ್ತಿಯನ್ನು ಆಕರ್ಷಿಸಲು ಇಂಗ್ಲಿಷ್‌ನಲ್ಲಿ ಮಾತನಾಡುವಾಗ ಒತ್ತಿ ಹೇಳಬೇಡಿ ಎಂದು ಸಾಗರ್ ಹಿರೇಮಠ್ ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ, ಪ್ರಾಧ್ಯಾಪಕ ಪ್ರೊಆನಂದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಾಳೆ 'ಬಾಳೊಂದು ಭಾವಗೀತೆ' ಚಲನಚಿತ್ರ ಗೀತೆಗಳ ಕಾರ್ಯಕ್ರಮ

ಮೈಸೂರು, ಮಾ.19(ಜಿಎ)–ಮೈಸೂರಿನ ಸೌಂಡ್ ಎನ್ ರಿದಂ ಸಂಸ್ಥೆ ವತಿಯಿಂದ ಮಾ.21ರಂದು ಸಂಜೆ 6ಗಂಟೆಗೆ ಜೆಎಲ್‌ಬಿ ರಸ್ತೆ ನಾದಬ್ರಹ್ಮ ಸಂಗೀತಾ ಸಭಾದಲ್ಲಿ 'ಬಾಳೊಂದು ಭಾವಗೀತೆ' ಶೀರ್ಷಿಕೆ ಅಡಿಯಲ್ಲಿ ಚಲನಚಿತ್ರ ಗೀತೆಗಳ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಮುಖ್ಯಸ್ಥರಾದ ಎ.ಎಸ್. ರವಿಶಂಕರ್ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ 35 ಕನ್ನಡ ಹಾಡು ಇರಲಿವೆ. ಉಳಿದಂತೆ ಕೆಲವು ಹಿಂದಿ ಹಾಗೂ ತಮಿಳು ಹಾಡನ್ನು ಪ್ರಸ್ತುತ ಪಡಿಸಲಾಗುವುದು. ಒಟ್ಟಾರೆ 14 ಗಾಯಕರು ಪಾಲ್ಗೊಳ್ಳಲಿದ್ದು, ಇದು ಕರೊಕೆ ಕಾರ್ಯಕ್ರಮವಾಗಿದೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಶಿವಕುಮಾರ್, ಅನುರಾಧ ಮಲ್ಲಿಕ್ ಉಪಸ್ಥಿತರಿದ್ದರು.

ಏ.1ರಿಂದ ಮೈಸೂರಲ್ಲಿ ವಿದ್ಯಾರ್ಥಿ ಹಬ್ಬ

ಮೈಸೂರು, ಮಾ.19(ಜಿಎ)–ವಿದ್ಯಾರ್ಥಿ ಕ್ರಿಯಾ ಸಮಿತಿಯಿಂದ ನಗರದ ಕಲಾಮಂದಿರದಲ್ಲಿ ಏ. 1 ಮತ್ತು 2ರಂದು ವಿದ್ಯಾರ್ಥಿ ಹಬ್ಬ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ಉಪಾಧ್ಯಕ್ಷ ಕಿರಣ್ ಈ ವಿಷಯ ತಿಳಿಸಿ, ಅಂದು ಬೆಳಿಗ್ಗೆ 10.30ಕ್ಕೆ ವಿದ್ಯಾರ್ಥಿ ಹಬ್ಬ ಆರಂಭವಾಗಲಿದ್ದು, ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ರಾಜ್ಯದ ಎಲ್ಲ ಕಾಲೇಜುಗಳ ಪದವಿ ವಿದ್ಯಾರ್ಥಿಗಳು ತಮ್ಮ ಪ್ರಾಂಶುಪಾಲರ ಅನುಮತಿ ಪತ್ರದೊಂದಿಗೆ ಸ್ಪರ್ಧಿಸಬಹುದು ಎಂದರು. ಸ್ಪರ್ಧಿಗಳಿಗೆ ವಸತಿ ಮತ್ತು ಆಹಾರ ವ್ಯವಸ್ಥೆ ಮಾಡಲಾಗುವುದು ಹಾಗೂ ಮಾ.28 ಮತ್ತು 29ರಂದು ನಗರದ ಪ್ರಭಾ ಟಾಕೀಸ್‌ನಲ್ಲಿ ಸಮಿತಿ ಗೌರವಾಧ್ಯಕ್ಷ, ನಟ ಜಯಪ್ರಕಾಶ್(ಜೆಪಿ) ನಟನೆಯ ಭಗೀರಥ ಚಿತ್ರ ವೀಕ್ಷಣೆಗೂ ಅವಕಾಶ ಮಾಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ.86601 41651 ಸಂಪರ್ಕಿಸಿ' ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಸದಸ್ಯರ ಲಿಖಿತ್, ಧ್ರುವ ಇದ್ದರು.

ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್‌ಗೆ ಮಂಜೇಗೌಡ 6ನೇ ಬಾರಿ ದಾಖಲೆ ಜಯ

ಮೈಸೂರು,ಮಾ.19– ದಿ ರೈಲ್ವೆ ಕೋಆಪರೇಟಿವ್ ಬ್ಯಾಂಕಿನ 2025–30ರ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಸತತ 6ನೇ ಬಾರಿಗೆ, ಬ್ಯಾಂಕಿನ ಮಾಜಿ ಅಧ್ಯಕ್ಷರೂ ಆದ ಡಾ. ಎಂ.ಬಿ. ಮಂಜೇಗೌಡ ಅಭೂತಪೂರ್ವ ಜಯ ಸಾಧಿಸಿದ್ದಾರೆ.



ಮೈಸೂರು ಮಹಾನಗರ ಪಾಲಿಕೆಯಿಂದ ಪೌರಕಾರ್ಮಿಕರ ಬಗ್ಗೆ ಮಲತಾಯಿ ಧೋರಣೆ

ಬಜೆಟ್ ಮಂಡನೆ ವೇಳೆ ಇದೇ ಮುಂದುವರೆದರೆ ಬಹಿಷ್ಕಾರ

ಮೈಸೂರು, ಮಾ.19(ಜಿಎ)–ಮೈಸೂರು ಮಹಾನಗರ ಪಾಲಿಕೆಯು ಪೌರ ಕಾರ್ಮಿರ ಬಗ್ಗೆ ಮಲತಾಯಿ ಧೋರಣೆ ತೋರುತ್ತಿದ್ದು, ಇದನ್ನು ಖಂಡಿಸಿ, ನಾಳೆ (ಮಾ.20) ಪಾಲಿಕೆ ಬಜೆಟ್ ಮಂಡನೆ ವೇಳೆಯೂ ಮುಂದುವರಿಸಿದಲ್ಲಿ ಈ ಬಜೆಟ್ ಅನ್ನು ಬಹಿಷ್ಕರಿಸಲಾಗುವುದು ಎಂದು ಸಫಾಯಿ ಕರ್ಮಚಾರಿ ಮೇಲುಸ್ತುವಾರಿ ಸಮಿತಿ ರಾಜ್ಯ ಸದಸ್ಯ ಡಿ.ಆರ್.ರಾಜು ಎಚ್ಚರಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಲಿಕೆಯ 158 ಪೌರ ಕಾರ್ಮಿಕರಿಗೆ ಗೃಹ ಭಾಗ್ಯ ಯೋಜನೆ ಅಡಿಯಲ್ಲಿ 2017–18ರ ಸಾಲಿನಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಿ ಜಯನಗರ ಮಳಲವಾಡಿಯಲ್ಲಿ ಮುಡಾಕ್ಕೆ ಸೇರಿದ ಜಾಗದಲ್ಲಿ ಮನೆ ನಿರ್ಮಾಣಕ್ಕೆ ನಿರ್ಧರಿಸಲಾಗಿತ್ತು. ಆದರೆ ಕೆಲ ರಾಜಕಾರಣಿಗಳ ಒತ್ತಡಕ್ಕೆ ಮಣಿದು ಯೋಜನೆ ಬದಲಿಸಿ ಕೆಸರೆಯಲ್ಲಿ ನಿರ್ಮಿಸಿಕೊಡುವ ನಿರ್ಧಾರಕ್ಕೆ ಬರಲಾಯಿತು. ಆದರೂ ಅಧಿಕಾರಿಗಳು ಇದುವರೆಗೂ ಮನೆ ನಿರ್ಮಿಸಿಕೊಡದೇ ಕಾಲಹರಣ ಮಾಡುತ್ತಿದ್ದಾರೆ. ಜೊತೆಗೆ, ಪ್ರತಿಯೊಬ್ಬ ಫಲಾನುಭವಿಯು ಮೂರು ಲಕ್ಷ ವಂತಿಗೆ ನೀಡಬೇಕೆಂದು ಒತ್ತಡ ಹೇರುತ್ತಿದ್ದಾರೆ. ಪಾಲಿಕೆಯಲ್ಲಿ ಶೇ.24.10 ಅನುದಾನವನ್ನು ಪೂರ್ಣವಾಗಿ ಖರ್ಚು ಮಾಡಿಲ್ಲ. ಈ ರೀತಿ ಸುಮಾರು ಆರು ಕೋಟಿ ಹಣ ಹಾಗೆಯೇ ಉಳಿದಿದೆ ಎಂದು ಬೇಸರಿಸಿದರು.


ಕೂಡಲೇ ಮನೆ ನಿರ್ಮಿಸಿಕೊಡಬೇಕು ಎಂಬ ಮೊದಲಾದ ಬೇಡಿಕೆ ಈ ಬಾರಿಯ ಪಾಲಿಕೆ ಬಜೆಟ್‌ನಲ್ಲಿ ಈಡೇರಿಸಬೇಕು. ಇಲ್ಲದಿದ್ದಲ್ಲಿ ಬಜೆಟ್ ಬಹಿಷ್ಕರಿಸಿ, ಪಾಲಿಕೆ ಎದುರು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಪೌರ ಕಾರ್ಮಿಕ ಸಂಘಟನೆಗಳ ಮುಖಂಡರಾದ ಮಂಚಯ್ಯ, ಕುಮಾರಸ್ವಾಮಿ, ವಸಂತಕುಮಾರಿ, ಪವಿತ್ರ, ಶ್ರೀನಿವಾಸ್ ಉಪಸ್ಥಿತರಿದ್ದರು.

ಸುನೀತಾ ವಿಲಿಯಮ್ಸ್ ಸಾಧನೆಯನ್ನು ಸ್ಫೂರ್ತಿಯಾಗಿ ಪರಿಗಣಿಸಬೇಕು

ಮಹಿಳೆಯರಿಗೆ ನಿವೃತ್ತ ಪ್ರಾಧ್ಯಾಪಕಿ ಪ್ರೊ. ಉಷಾರಾಣಿ ಕಿವಿಮಾತು

ಮೈಸೂರು, ಮಾ.19(ಎಂಟಿವೈ)– ಬಾಹ್ಯಾಕಾಶದಿಂದ ಸುರಕ್ಷಿತವಾಗಿ ಭೂಸ್ಪರ್ಶ ಮಾಡಿರುವ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಸಾಧನೆ ವಿಶ್ವದೆಲ್ಲೆಡೆ ಪ್ರಶಂಸೆಗೆ ಪಾತ್ರವಾಗಿದ್ದು, ಮಹಿಳೆಯರು ಅವರನ್ನು ಸ್ಫೂರ್ತಿಯಾಗಿ ಪರಿಗಣಿಸಬೇಕು ಎಂದು ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಎಸ್.ಉಷಾರಾಣಿ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಸಭಾಂಗಣದಲ್ಲಿ ಕನ್ನಡ ಲೇಖಕಿಯರ ಟ್ರಸ್ಟ್ ಹಾಗೂ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಾಹ್ಯಾಕಾಶ ಯಾನ ಕೈಗೊಂಡಿದ್ದ ಸುನೀತಾ ವಿಲಿಯಮ್ಸ್ ತಾಂತ್ರಿಕ ಕಾರಣಗಳಿಂದ ಹಿಂದಿರುಗುವುದು ಕಷ್ಟಸಾಧ್ಯವಾಗಿ ಅಲ್ಲಿಯೇ ದೀರ್ಘ ಸಮಯ ಉಳಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ ಇಂದು ಮುಂಜಾನೆಯಷ್ಟೇ ಯಶಸ್ವಿ ಭೂಸ್ಪರ್ಶ ಮಾಡಿದ್ದಾರೆ. 9 ತಿಂಗಳ ಬಳಿಕ ಸುನೀತಾ ವಿಲಿಯಮ್ಸ್ ತಂಡ ಸುರಕ್ಷಿತವಾಗಿ ಭೂ ಸ್ಪರ್ಶ ಮಾಡಿದ ಕ್ಷಣವನ್ನು ಜಗತ್ತು ಕುತೂಹಲದಿಂದ ವೀಕ್ಷಿಸಿದೆ. ಆ ಕಾರಣದಿಂದ ಇಂದು ವಿಶ್ವದ ಎಲ್ಲೆಡೆ ಸುನೀತಾ ವಿಲಿಯಮ್ಸ್ ಸಾಧನೆಯ ಗುಣಗಾನ ಮಾಡಲಾಗುತ್ತಿದೆ ಎಂದರು.



ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಸಭಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಪುರಸ್ಕೃತೆ ಡಾ.ವೈ.ಸಿ.ಭಾನುಮತಿ, ವಿಜ್ಞಾನ ಲೇಖಕಿ ಶ್ರೀಮತಿ ಹರಿಪ್ರಸಾದ್ ಹಾಗೂ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಎಸ್.ಉಷಾರಾಣಿ ಅವರನ್ನು ಸನ್ಮಾನಿಸಲಾಯಿತು.

ಸುನೀತಾ ವಿಲಿಯಮ್ಸ್ ಅವರ ಸಾಧನೆ ಮಹತ್ತರವಾದುದ್ದಾಗಿದೆ. ಇದರಿಂದ ಮಹಿಳೆಯರ ಸಾಮರ್ಥ್ಯ ಆಕಾಶದಷ್ಟು ಎತ್ತರ, ಭೂಮಿಯಷ್ಟು ಅಗಲ ಹಾಗೂ ಸಾಗರದಷ್ಟು ಆಳವಾಗಿದೆ ಎಂಬುದು ಸಾಬೀತಾಗಿದೆ. ಇಷ್ಟಾದರೂ ಮಹಿಳೆಯರನ್ನು ಎರಡನೇ ದರ್ಜೆ ನಾಗರಿಕರಂತೆ ನೋಡುವುದನ್ನು ಬಿಡಬೇಕು ಎಂದು ಅಭಿಪ್ರಾಯಪಟ್ಟರು.

ಮಹಿಳೆ, ಸಮಾಜದ ಎಲ್ಲಾ ಕ್ಷೇತ್ರದಲ್ಲೂ ಪುರುಷರಷ್ಟೇ ಸರಿಸಮಾನರಾಗಿ ಸಾಧನೆ ಮಾಡುತ್ತಿದ್ದಾಳೆ. ಒಟ್ಟು ಸಾಧನೆಯಲ್ಲಿ ಶೇ.50 ಮಹಿಳೆಯರದ್ದಾಗಿದ್ದರೂ ಪುರುಷ ಪ್ರಧಾನ ಸಮಾಜದಲ್ಲಿ ದ್ವಿತೀಯ ದರ್ಜೆ ಸ್ಥಾನದಲ್ಲಿದ್ದಾಳೆ. ಈ ಮಹಾ ಪಯಣದಲ್ಲಿ ಪ್ರತಿ ಸ್ತ್ರೀ ಸೋಲು, ಗೆಲುವು ಕಂಡಿದ್ದಾಳೆ. ಆದರೆ, ಉತ್ಸಾಹ ಕುಂದಿಲ್ಲ. ಹೋರಾಟ ಮುಂದುವರಿದಿದೆ. ಸಾರ್ವಜನಿಕ ವಲಯದಲ್ಲಿ ಮಹಿಳೆಯರ ದನಿ ಕೇಳಿಸುತ್ತಿಲ್ಲ. ಮುಂಬರುವ ವರ್ಷಗಳಲ್ಲಿ ಮಹಿಳೆಯರಿಗೆ ರಾಜಕೀಯದಲ್ಲಿ ಶೇ.33 ಮೀಸಲು ದೊರೆಯಲಿದೆ. ಆಗ ದೊರೆಯುವ ರಾಜಕೀಯ ಅಧಿಕಾರವನ್ನು ಬಳಸುವ ಪರಿಣತಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ನೀತಿ ನಿಯಮ ರೂಪಿಸುವ ಸಾಮರ್ಥ್ಯ ಸಿದ್ಧಿಸಿಕೊಳ್ಳಬೇಕಿದೆ ಎಂದರು.

ಈಗ ಮನೆಯಿಂದ ಕೆಲಸ ಮಾಡುವ ಅವಕಾಶ ಇದೆ. ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ತಾವೇ ಉದ್ಯಮಿಗಳಾಗಿ ಹತ್ತಾರು ಜನರಿಗೆ ಕೆಲಸ ಕೊಡುವಂತಾಗಬೇಕು. ದುಡಿಮೆ ಮಹಿಳೆಯ ಹಕ್ಕು. ಅನೇಕ ಪ್ರತಿಭಾನ್ವಿತರು ವಿವಾಹವಾದ ನಂತರ ಕೆಲಸ ಮಾಡುವುದರಿಂದ ಹಿಂದೆ ಸರಿಯುತ್ತಾರೆ. ನನ್ನ ವಿದ್ಯಾರ್ಥಿನಿಯರಿಗೆ ವಿವಾಹದ ನಂತರ ಕೆಲಸ ಬಿಡದಂತೆ ಹುರಿದುಂಬಿಸುತ್ತಿದ್ದೆ. ಈಗ ಹಲವರು ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿದ್ಯಾಭ್ಯಾಸದ ವೇಳೆ ಪಡೆದ ಪ್ರಾಕ್ಟಿಕಲ್ ಅನುಭವ ಜೀವನ ನಡೆಸಲು ನೆರವಾಗಿದೆ ಎಂದು ತಿಳಿಸಿದರು.

ಇತ್ತೀಚೆಗೆ ವರ್ಲ್ಡ್ ಬ್ಯಾಂಕ್ ಬಿಡುಗಡೆ ಮಾಡಿರುವ ಮಾಹಿತಿಯಲ್ಲಿ ಕಾರ್ಮಿಕ ವಲಯದಲ್ಲಿ ಮಹಿಳೆಯರ ಸಹಭಾಗಿತ್ವ ಅತ್ಯಂತ ಕಡಿಮೆ ಇದೆ. ಶೇ.21 ಮಹಿಳೆಯರು ಕಾರ್ಮಿಕರಾಗಿದ್ದಾರೆ. ಈ ಪ್ರಮಾಣ ಶೇ. 50ಕ್ಕೆ ಏರಿಕೆಯಾಗಬೇಕು. ಆಗ ದೇಶದ ಜಿಡಿಪಿಗೂ ಕೊಡುಗೆ ನೀಡಿದಂತಾಗುತ್ತದೆ ಎಂದು ವಿವರಿಸಿದರು.

ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಪುರಸ್ಕೃತೆ ಡಾ.ವೈ.ಸಿ.ಭಾನುಮತಿ, ವಿಜ್ಞಾನ ಲೇಖಕಿ ಶ್ರೀಮತಿ ಹರಿಪ್ರಸಾದ್ ಹಾಗೂ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಎಸ್. ಉಷಾರಾಣಿ ಅವರನ್ನು ಸನ್ಮಾನಿಸಲಾಯಿತು.

ಕನ್ನಡ ಲೇಖಕಿಯರ ಟ್ರಸ್ಟ್ ಅಧ್ಯಕ್ಷೆ ಪ್ರೊ ಪದ್ಮಾಶೇಖರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷೆ ಮಂಜುಳಾ ಮಾನಸ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಪ್ರೊ.ಎಸ್.ಡಿ. ಶಶಿಕಲಾ, ಕನ್ನಡ ಲೇಖಕಿಯರ ಟ್ರಸ್ಟ್ ಕಾರ್ಯದರ್ಶಿ ಹೇಮಾ ನಂದೀಶ್, ಸಹ ಕಾರ್ಯದರ್ಶಿ ಮೀನಾ ಮೈಸೂರು, ಖಜಾಂಚಿ ಪ್ರೊ.ಸ.ನ. ಗಾಯತ್ರಿ ಉಪಸ್ಥಿತರಿದ್ದರು.

ಮೈಸೂರಿನಲ್ಲಿ ಕೈಗಾರಿಕಾ ಭದ್ರತಾ ಪಡೆ ಸ್ಥಾಪನೆಗೆ ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಆಗ್ರಹ

ಮೈಸೂರು, ಮಾ.19(ಬಿಎಲ್‌ಯು)– ಮೈಸೂರು ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ಸ್ಥಾಪಿಸಬೇಕೆಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.




ಪ್ರಸ್ತುತ 1, 2 ಮತ್ತು 3 ನೇ ಪಡೆಯ ಕೆಎಸ್‌ಐಎಸ್‌ಎಫ್ ಪಡೆಯ 400 ಕ್ಕೂ ಹೆಚ್ಚು ಅಧಿಕಾರಿಗಳು ಹಾಗೂ ಸಿಬ್ಬಂದಿ ಮೈಸೂರು ಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರನ್ನು ಮೈಸೂರು ಭಾಗದಲ್ಲಿ ಪ್ರತ್ಯೇಕವಾಗಿ ರಚನೆ ಮಾಡುವ ಕೆಎಸ್‌ಐಎಸ್‌ಎಫ್ ಪಡೆಗೆ ನಿಯೋಜಿಸಿ ಹಂತ ಹಂತವಾಗಿ ಸಿಬ್ಬಂದಿ ಸಂಖ್ಯೆ ಹೆಚ್ಚು ಮಾಡಬೇಕೆಂದು ಕೋರಿದ್ದಾರೆ. ಮೈಸೂರಿನ ಹಳೆಯ ಪೊಲೀಸ್ ಆಯುಕ್ತರ ಕಚೇರಿಯ ಒಂದು ಭಾಗ, ಹಳೇ ಜಿಲ್ಲಾಧಿಕಾರಿ ಕಚೇರಿ ಸೂಕ್ತವಾದ ಕಡೆ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು. ಇದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ ಎಂದು ಲಕ್ಷ್ಮಣ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿಗೆ 2025–26ನೇ ಬಜೆಟ್‌ನಲ್ಲಿ 1100 ಕೋಟಿ ಮೌಲ್ಯದ 24 ಯೋಜನೆಗಳನ್ನು ನೀಡಿದ್ದು, ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದಾಗ 3,800 ಕೋಟಿ ಯೋಜನೆ ನೀಡಲಾಗಿತ್ತು. ಇದರಂತೆ ಕೆಎಸ್‌ಐಎಸ್‌ಎಫ್ ಸ್ಥಾಪನೆ ಮಾಡಬೇಕೆಂದು ಮನವಿ ಮಾಡಿದ್ದಾರೆ.

ಈ ವಿಚಾರದಲ್ಲಿ ಈಗಾಗಲೇ ಮೈಸೂರು ಭಾಗದ ಸಂಸದರು ಹಾಗೂ ಶಾಸಕರು ನಿಮಗೆ ಲಿಖಿತವಾಗಿ ಮನವಿ ಮಾಡಿದ್ದು, ಇದನ್ನು ಪರಿಗಣಿಸುವಂತೆ ಲಕ್ಷ್ಮಣ್ ಅವರು ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ದೇಶದ ಶ್ರೀಮಂತ ಶಾಸಕರ ಪಟ್ಟಿಯಲ್ಲಿ ಡಿಸಿಎಂ ಡಿಕೆಶಿಗೆ 2ನೇ ಸ್ಥಾನ

ಕರ್ನಾಟಕದ ಎಲ್ಲಾ ಶಾಸಕರ ಒಟ್ಟು ಆಸ್ತಿ ಮೌಲ್ಯ ದೇಶದಲ್ಲೇ 14,179 ಕೋಟಿ



ನವದೆಹಲಿ, ಮಾ.19–ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್‌ನ (ಎಡಿಆರ್) ಈ ಸಾಲಿನ ಶ್ರೀಮಂತ ಶಾಸಕರ ಪಟ್ಟಿ ಬಿಡುಗಡೆಯಾಗಿದೆ. ಕನಕಪುರದ ಕಾಂಗ್ರೆಸ್ ಶಾಸಕ ಡಿ.ಕೆ.ಶಿವಕುಮಾರ್ ದೇಶದಲ್ಲೇ 2ನೇ ಶ್ರೀಮಂತ ಶಾಸಕ ಎನಿಸಿಕೊಂಡಿದ್ದಾರೆ. ಇವರ ಆಸ್ತಿ ಮೌಲ್ಯ ಆಸ್ತಿ ಮೌಲ್ಯ 1,413 ಕೋಟಿ ರೂ. ಇನ್ನು 3,400 ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿರುವ ಮುಂಬೈಯ ಘಾಟ್ಕೋಪರ್ ಪೂರ್ವದ ಬಿಜೆಪಿ ಶಾಸಕ ಪ್ರಯಾಗ್ ಶಾ ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

ಎಡಿಆರ್ ವರದಿಯು ಶಾಸಕರು ಚುನಾವಣೆಯಲ್ಲಿ ಸ್ಪರ್ಧಿಸುವ ಮೊದಲು ಸಲ್ಲಿಸಿದ ಅಫಿಡವಿಟ್‌ನ ವಿಶ್ಲೇಷಣೆ ಯನ್ನು ಆಧರಿಸಿದೆ. 28 ರಾಜ್ಯಗಳ ವಿಧಾನಸಭೆಗಳು ಮತ್ತು 3 ಕೇಂದ್ರಾ ಡಳಿತ ಪ್ರದೇಶಗಳ 4,092 ಶಾಸಕರನ್ನು ಒಳಗೊಂಡು ಅಧ್ಯಯನ ನಡೆಸಲಾಗಿದೆ. ಪಶ್ಚಿಮ ಬಂಗಾಳದ ಸಿಂಧೂ ಕ್ಷೇತ್ರದ ಬಿಜೆಪಿ ಶಾಸಕ ನಿರ್ಮಲ್ ಕುಮಾರ್ ಧಾರಾ ಅವರ ಘೋಷಿತ ಆಸ್ತಿ ಕೇವಲ 1,700 ರೂ. ಹೀಗಾಗಿ ಅವರು ಈ ಪಟ್ಟಿಯ ಕೊನೆಯಲ್ಲಿದ್ದಾರೆ.

ಶ್ರೀಮಂತ ಶಾಸಕರು: ಪ್ರಯಾಗ್ ಶಾ (ಬಿಜೆಪಿ) – ಮಹಾರಾಷ್ಟ್ರ – 3,400 ಕೋಟಿ ರೂ., ಡಿ.ಕೆ.ಶಿವಕುಮಾರ್ (ಕಾಂಗ್ರೆಸ್) – ಕರ್ನಾಟಕ – 1,413 ಕೋಟಿ ರೂ., ಕೆ.ಎಚ್. ಪುಟ್ಟಸ್ವಾಮಿ (ಸ್ವತಂತ್ರ) – ಕರ್ನಾಟಕ – 1,267 ಕೋಟಿ ರೂ., ಪ್ರಿಯಾಕೃಷ್ಣ (ಕಾಂಗ್ರೆಸ್) – ಕರ್ನಾಟಕ – 1,156 ಕೋಟಿ ರೂ., ಎನ್.ಚಂದ್ರಬಾಬು ನಾಯ್ಡು (ಟಿಡಿಪಿ) – ಆಂಧ್ರ ಪ್ರದೇಶ – 931 ಕೋಟಿ ರೂ., ಪಿ.ನಾರಾಯಣ (ಟಿಡಿಪಿ) – ಆಂಧ್ರ ಪ್ರದೇಶ – 824 ಕೋಟಿ ರೂ., ವೈ.ಎಸ್.ಜಗನ್ ಮೋಹನ್ ರೆಡ್ಡಿ (ವೈಎಸ್‌ಆರ್‌ಸಿಪಿ) – ಆಂಧ್ರ ಪ್ರದೇಶ – 757 ಕೋಟಿ ರೂ., ವಿ. ಪ್ರಶಾಂತಿ ರೆಡ್ಡಿ (ಟಿಡಿಪಿ) – ಆಂಧ್ರ ಪ್ರದೇಶ – 716 ಕೋಟಿ ರೂ.

ಶ್ರೀಮಂತ ಶಾಸಕರ ಟಾಪ್ 10 ಪಟ್ಟಿಯಲ್ಲಿ ಆಂಧ್ರ ಪ್ರದೇಶದ ನಾಲ್ವರು ಸ್ಥಾನ ಪಡೆದುಕೊಂಡಿದ್ದಾರೆ. ಇನ್ನು ಟಾಪ್ 20 ಗಣನೆಗೆ ತೆಗೆದುಕೊಂಡರೆ 7 ಶಾಸಕರಿದ್ದಾರೆ. ಇನ್ನು ಎಲ್ಲ ಶಾಸಕರ ಒಟ್ಟು ಆಸ್ತಿ ಮೌಲ್ಯಗಳಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಇಲ್ಲಿನ 223 ಶಾಸಕರ ಒಟ್ಟು ಆಸ್ತಿ ಮೌಲ್ಯ 14,179 ಕೋಟಿ ರೂ. 2ನೇ ಸ್ಥಾನದಲ್ಲಿ ಮಹಾರಾಷ್ಟ್ರ (286 ಎಂಎಲ್‌ಎಗಳಿಂದ 12,424 ಕೋಟಿ ರೂ.) ಇದೆ. ಆಂಧ್ರ ಪ್ರದೇಶದ 174 ಶಾಸಕರ ಆಸ್ತಿ ಮೌಲ್ಯ 11,323 ಕೋಟಿ ರೂ.

ಶಾಸಕರ ಆಸ್ತಿ ಮೌಲ್ಯ ಕಡಿಮೆ ಇರುವ ರಾಜ್ಯಗಳು: ತ್ರಿಪುರಾದ 60 ಶಾಸಕರ ಆಸ್ತಿ 90 ಕೋಟಿ ರೂ., ಮಣಿಪುರದ 59 ಶಾಸಕರ ಆಸ್ತಿ ಮೌಲ್ಯ 222 ಕೋಟಿ ರೂ. ಮತ್ತು ಪುದುಚೆರಿಯ 30 ಸದಸ್ಯರ ಆಸ್ತಿ ಮೌಲ್ಯ 297 ಕೋಟಿ ರೂ. ಎಂದು ವರದಿ ತಿಳಿಸಿದೆ. ಪ್ರಮುಖ ರಾಜಕೀಯ ಪಕ್ಷಗಳ ಪೈಕಿ ಬಿಜೆಪಿ ಶಾಸಕರು (1,653 ಸದಸ್ಯರು) 26,270 ಕೋಟಿ ರೂ.ಗಳನ್ನು ಹೊಂದಿದ್ದಾರೆ. ಕಾಂಗ್ರೆಸ್ ಶಾಸಕರು (646 ಸದಸ್ಯರು) 17,357 ಕೋಟಿ ರೂ., ಟಿಡಿಪಿ ಶಾಸಕರು (134 ಸದಸ್ಯರು) 9,108 ಕೋಟಿ ರೂ., ಶಿವಸೇನೆ ಶಾಸಕರು (59 ಸದಸ್ಯರು) 1,758 ಕೋಟಿ ರೂ. ಆಸ್ತಿ ಹೊಂದಿದ್ದಾರೆ.